ಶ್ರೀ ಅಜೀಜ್ ಸೇಟ್.—ಸ್ವಾಮಿ ನಮ್ಮ ರಾಜ್ಯದಲ್ಲಿ 27—28 ಮಂತ್ರಿಗಳನ್ನು ಮಾಡಿದ್ದಾರೆ. ಅವರು ವಿಧಾನ ಸೌಧದ ಒಂದನೇ ಎರಡನೇ ಮಹಡಿಯಿಂದ ಮೂರನೆಯ ಮಹಡಿಗೆ ಹೋಗಿದ್ದಾರೆ.

* * * * *

MR. SPEAKER.—That is not the practice. Can Hon'ble Sri Sivappa not tell the Hon'ble Member ?

SRI S. SIVAPPA.—He is trying to explain.

MR. SPEAKER.—Let him put it in the form of a motion and give me notice of it. We will take it up tomorrow.

(Interruptions by Sri Aziz Sait)

MR. SPEAKER.—I am very sorry that the requests made by the Chair are not properly appreciated.

SRI AZIZ SAIT.—During Zero hour, we can make our representation.

MR. SPEAKER.—There is no zero hour.

SRI AZIZ SAIT.—There was zero hour till yesterday.

MR. SPEAKER.—Hon'ble Members press and I repeat this for their information that any matter which they want to raise other than a matter on a point of order should be raised under rule 312 and that procedure should be followed. If the matter which the Hon'ble Member wants to raise is important, the Chair will certainly sympathetically consider it. This is the only way of bringing any matter before this House. It may please be noted that there is nothing like zero hour under the procedure here or under the procedure at Lok Sabha or under the procedure of any other Legislature here or elsewhere. Let that be noted.

I assure the Hon'ble Members that the rules will be interpreted very sympathetically on the points that are raised. But the position is that it should be based on the procedure itself and there cannot be any breach of the procedure. Therefore, I request the Hon'ble Members to consider this position and respect the rules made by themselves.

MOTION *re*: SCARCITY CONDITIONS PREVAILING IN CERTAIN AREAS OF THE STATE

(Debate contd.)

MR. SPEAKER.—Next item is the discussion on the motion moved by the Hon'ble Chief Minister regarding scarcity conditions. Now as many as 6 members have spoken on the subject.

***** Matter not recorded as ordered by the Chair.

Sri S. S. SHETTAR (Hubli).—I have not yet completed my speech. I have taken only 10 minutes.

2-30 P.M.

Mr. SPEAKER.—The time at our disposal is very limited and I leave it to the whips on either side to regulate the debate and select speakers from their respective parties to offer observations and ask them to bear in mind the limitations of time. In a democracy there is self-discipline. The Chair does not like to stop any Hon'ble Member from making observations. I do not like to do it. If the Hon'ble Member has already taken some time, I have no objection to allow him further time if the party whip has no objection. The allocation of time for speakers is in the hands of the whips. I leave the matter to the whips.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಈ ವಿಷಯದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯದಲ್ಲಿ ಚರ್ಚೆಯಾಗುವುದಕ್ಕೆ ಕಾಲ ಇಷ್ಟು ಎಂಬುದಾಗಿ ಬಿಜಿನೆಸ್ ಅಡ್ವೈಸರಿ ಕಮಿಟಿಯವರು ಗೊತ್ತುಮಾಡುತ್ತಾರೆ. ಅದಾದ ಮೇಲೆ ಸಾಮಾನ್ಯವಾಗಿ ಅರ್ಧ ಕಾಲ ಕಾಂಗ್ರೆಸ್ ಪಕ್ಷದವರಿಗೆ ಬಿಟ್ಟು ಇನ್ನುಳಿದ ಅರ್ಧಕಾಲವನ್ನು ಎದುರು ಪಕ್ಷದವರಿಗೆ ಕೊಡಿ. ಈ ವಿರೋಧ ಪಕ್ಷದಲ್ಲಿ ಅನೇಕ ಪಕ್ಷಗಳು ಇರುವುದರಿಂದ ಆಯಾ ಪಕ್ಷಗಳ ಸಂಖ್ಯೆ ತಿಳಿದುಕೊಂಡು ನಾವು ಟೈಂ ಅಲಾಟ್ ಮಾಡುತ್ತೇವೆ. ಆದ್ದರಿಂದ ನಾನು ಗೊತ್ತು ಮಾಡಿ ಕಳುಹಿಸಿರುವ ಟೈಂ ಪ್ರಕಾರ ತಾವು ಅನುಸರಿಸದೇ ಹೋದರೆ ಎಲ್ಲಾ ಸದಸ್ಯರಿಗೂ ಅವಕಾಶ ಕಲ್ಪಿಸಿಕೊಡಲು ಕಷ್ಟವಾಗುತ್ತದೆ. ದಯವಿಟ್ಟು ನನ್ನ ಸಲಹೆ ಪ್ರಕಾರ ಮಾಡಬೇಕು.

Sri B. P. GANGADHAR.—Sir, some of us have sent notices under Rule 59 and 63 on scarcity matters. Such of the Members who have sent notices may be allowed to speak and represent grievances of their particular areas or constituencies.

ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್ಕೆರೆ).—ನಮ್ಮ ಆಡಳಿತವನ್ನು ಕನ್ನಡದಲ್ಲಿ ನಡೆಸಬೇಕೆಂದು ಬಹಳ ಮಂದಿ ಹೇಳಿದ್ದಾರೆ. ಸರ್ಕಾರದವರೂ ಆ ರೀತಿ ಹೇಳುತ್ತಿದ್ದಾರೆ. ಆದ್ದರಿಂದ ಅಧ್ಯಕ್ಷರಾದ ತಾವು ಕನ್ನಡದಲ್ಲಿ ಯಾವತ್ತು ಮಾತನಾಡುವುದು ಬಹಳ ಮುಖ್ಯ. ಈ ಸರ್ಕಾರದಲ್ಲಿ ಕನ್ನಡ ಬಾರದೇ ಇರತಕ್ಕ ಅಧಿಕಾರಿಗಳು ಯಾರಾದರೂ ಇದ್ದರೆ ಅವರು ಕೂಡಲೇ ಕನ್ನಡವನ್ನು ಕಲಿಯಬೇಕು. ತಾವು ಮಾತ್ರ ನಿಜವಾಗಿ ಕಂಪಲ್ಸರಿಯಾಗಿ ಇಲ್ಲಿ ಕನ್ನಡವನ್ನೇ ಬಳಸಬೇಕು. ಮಾನ್ಯ ಮಂತ್ರಿಗಳೂ ಸಹ ಮಾತನಾಡುವಾಗ ಇಲ್ಲಿ ಕನ್ನಡವನ್ನೇ ಹೆಚ್ಚಾಗಿ ಬಳಸಬೇಕು. ತಾವು ಆಡತಕ್ಕಂಥ ಮಾತು ಬಂಗಾರದಂಥ ಮಾತು ಆಗಿದೆ. ಅದು ಇಂಗ್ಲೀಷ್‌ಗಿಂತ ಬಹಳ ಚೆನ್ನಾಗಿದೆ. ಆದರೆ ಏನು ಮಾಡುವುದು ಆ ಇಂಗ್ಲೀಷ್‌ನ ಮೇಲೆ ಒಂದು ತರಹ ವ್ಯಾಮೋಹ ಇದೆ. ನೀವು ಉತ್ತರ ಕರ್ಣಾಟಕ ಜನ ಮಾತನಾಡುವ ಭಾಷೆ ಒಂದು ತರಹದಲ್ಲಿ ಇರುತ್ತದೆ. ಅಲ್ಲಿನ ಭಾಷೆಯಲ್ಲಿ ಮಾತನಾಡಿದರೂ ಪರವಾ ಇಲ್ಲ.

ಅಧ್ಯಕ್ಷರು.—ನನಗೆ ಎಷ್ಟು ಸಾಧ್ಯವೋ ಅಷ್ಟು ಕನ್ನಡದಲ್ಲಿ ಮಾತನಾಡುತ್ತೇನೆ. ಒಂದು ವೇಳೆ ತಪ್ಪುಗಳಾದರೆ ಕ್ಷಮಿಸಬೇಕಾಗಿದೆ. ಏಕೆಂದರೆ ನನಗೆ ಅಷ್ಟು ಚೆನ್ನಾಗಿ ಕನ್ನಡ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಆ ರೀತಿಯಾಗಿ ತಾವು ಇಲ್ಲಿ ಕನ್ನಡದಲ್ಲಿ ಮಾತನಾಡದೇ ಇದ್ದರೆ, ತಮ್ಮನ್ನು ಕನ್ನಡದವರಲ್ಲವೆಂದು ಯಾರಾದರೂ ತಿಳಿದುಕೊಳ್ಳುತ್ತಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ನಿನ್ನೆ ದಿವಸ ಸಂಪುಟದ ಸಭೆ ಸೇರಿ ರಿಲೀಫ್ ಕಾಮಗಾರಿ ವಿಚಾರದಲ್ಲಿ ಬಹಳ ಮುಖ್ಯವಾದಂಥ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಆ ತೀರ್ಮಾನವೇನೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ತಿಳಿಸಿದರೆ ಅನೇಕರು ಮಾತನಾಡದೆ ಇರಬಹುದು. ಒಂದು ವೇಳೆ ಕೆಲವರು ಮಾತನಾಡಬೇಕೆಂದರೆ ಅವರಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಬಹುದು. ಆ ವಿಚಾರವನ್ನು ಈ ಮಾನ್ಯ ಸಭೆಗೆ ತಿಳಿಸಬೇಕೆಂದು ಪ್ರಾರ್ಥನೆ.

†ಶ್ರೀ ಎಸ್. ಎಸ್. ಶೆಟ್ಟರ್.—ಸನ್ಮಾನ್ಯ ಅಧ್ಯಕ್ಷರೇ, ಭಾರತದಲ್ಲಿ ಜನಸಂಘ ಪಕ್ಷವೆಂಬುದು ಒಂದು ರಾಜಕೀಯ ಪಕ್ಷವಾಗಿರುತ್ತದೆ. ಅಂಥಾದ್ದರಲ್ಲಿ ನನ್ನನ್ನು 10 ನಿಮಿಷಗಳಲ್ಲಿ ಮಾತನಾಡಬೇಕೆಂದು ಹೇಳಿದ್ದಾರೆ. ಅಧ್ಯಕ್ಷರು ನನಗೆ ಕೊಟ್ಟ ವೇಳೆಯಲ್ಲಿ ನಾನು ನನ್ನ ಮಾತನ್ನು ಮುಗಿಸಲು ಪ್ರಯತ್ನಿಸುತ್ತೇನೆ. ಈಗ ಅನೇಕ ಊರುಗಳಿಂದ ಅನೇಕ ಜನರಿಂದ ಸದಸ್ಯರಿಗೆ ಪತ್ರಗಳು ಬರುತ್ತಾ ಇವೆ. ನನಗೂ ಕೂಡ ರೋಣ ತಾಲ್ಲೂಕಿನ ಒಂದು ಭಾಗದಿಂದ ಒಂದು ಪತ್ರ ಬಂದಿದೆ. ಆ ಪತ್ರಗಳನ್ನು ಅವಲೋಕಿಸುವುದರಿಂದ ಮತ್ತು ಪರಿಶೀಲನೆಮಾಡುವುದರಿಂದ ಸರ್ಕಾರದವರು ಈ ಬರಗಾಲ ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸಿಲ್ಲವೆಂಬ ಮಾತು ಆ ಪತ್ರಗಳ ಮುಖಾಂತರ ವಿದಿತವಾಗುತ್ತಿದೆ. ಅವರು ಪತ್ರದಲ್ಲಿ ಕೆಲವು ಮಾತುಗಳನ್ನು ಉಲ್ಲೇಖಿಸಿದ್ದಾರೆ. ಜನರು ಅನಿರೀಕ್ಷಿತವಾಗಿ ತಂತಮ್ಮ ಊರುಗಳನ್ನು ಬಿಟ್ಟು ಬೇರೆ ಊರುಗಳಿಗೆ ಉದ್ಯೋಗ ಹುಡುಕಿಕೊಂಡು ಹೋಗುವ ಕಾಲ ಸನ್ನಿಹಿತವಾಗಿದೆ. ಮತ್ತು ಆಹಾರಕ್ಕಾಗಿ ಜನರು ಬಹಳ ಕಷ್ಟಪಡುತ್ತಿದ್ದಾರೆಂಬುದಾಗಿ ಉಲ್ಲೇಖಮಾಡಿದ್ದಾರೆ. ಇದಲ್ಲದೆ ಕೆಲವು ನೆರೆಹೊರೆಯ ಪ್ರಾಂತಗಳಲ್ಲಿ ಆಹಾರದ ಬೆಲೆ ಏರುತ್ತಿದೆಂಬುದನ್ನು ನಮ್ಮೆಲ್ಲರ ಗಮನಕ್ಕೆ ತರಲು ಬಯಸಿದ್ದಾರೆ. ಇದನ್ನು ನೋಡಿದರೆ, ಸರ್ಕಾರದವರು ಬರಗಾಲ ಕಾಮಗಾರಿಯನ್ನು ಪ್ರತಿಯೊಂದು ವರ್ಷವೂ ನಡೆಸಿ ಬರಗಾಲ ಪರಿಸ್ಥಿತಿಯನ್ನು ಬಗೆಹರಿಸಲಿಕ್ಕೆ ಪ್ರಯತ್ನಮಾಡಿದ್ದರೂ ಸಹ ಕಳೆದ ಮೂರು ನಾಲ್ಕು ವರ್ಷಗಳಿಂದ ಅದು ಸಾಧ್ಯವಾಗಲಿಲ್ಲ. ಈ ವರ್ಷವೂ ಕೂಡ ಈ ಬರಗಾಲ ಹೆಚ್ಚು ಹೆಚ್ಚು ಬೆಳೆಯುತ್ತಿದೆಯೆಂದು ನಾನು ಈ ಸಂದರ್ಭದಲ್ಲಿ ಈ ಸಭೆಯಲ್ಲಿ ಉಲ್ಲೇಖಿಸಲಿಕ್ಕೆ ಬಯಸುತ್ತಿದ್ದೇನೆ.

ಅಧ್ಯಕ್ಷರು.—ಎಲ್ಲಾ ಕಡೆಯಲ್ಲಿಯೂ ಒಂದೇ ತರಹ ಅಭಾವಪರಿಸ್ಥಿತಿ ಇದೆಯೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಅದನ್ನು ಯಾವ ರೀತಿ ಎದುರಿಸಬೇಕೆಂದು ಅಷ್ಟು ಹೇಳಿದರೆ ಸಾಕು.

ಶ್ರೀ ಎಸ್. ಎಸ್. ಶೆಟ್ಟರ್.—ಹಾಗಾದರೆ ನಾನು 5 ನಿಮಿಷಗಳಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನನಗೆ ಅಧ್ಯಕ್ಷರು ಬಹಳ ಉಪಕಾರ ಮಾಡಿದ್ದಾರೆ. ನಿಮ್ಮ ಯಾವುದೇ ಒಂದು ಶಬ್ದ ಅಥವಾ ಆದೇಶವಿದ್ದಂತೆ ನಡೆಯುವುದೇ ನನಗೆ ಆನಂದ. ರೂಲ್ 279 ಈ ರೀತಿ ಇದೆ :

> "A motion that the policy or situation or statement or any other matter be taken into consideration shall not be put to the vote of the Assembly, but the Assembly shall proceed to discuss such matter immediately after the mover has concluded his speech and no further question shall be put at the conclusion of the debate at the appointed hour unless a member moves a substantive motion in appropriate terms to be approved by the Speaker and the vote of the Assembly shall be taken on such motion."

ಮೇಲ್ಕಂಡ ರೂಲ್ 279 ರಂತೆ ಈ ಸಬ್‌ಸ್ಟಾಂಟಿವ್ ಮೋಷನನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅಪ್ಪಣೆ ಬೇಡುತ್ತೇನೆ :

> "This House is of the opinion that the Central Study Team ought to have taken into consideration the grave situation in Mysore State due to the existing famine conditions in more than half the State and it should have recommended the allocation of funds according to the needs of the State. Therefore a Commission may be appointed to reassess the grave situation due to drought conditions in the State and find out permanent and effective solution for eradicating the evils of drought, the House requests the Central Government to give all the aid to the Mysore Government...".

ಸ್ವಾಮಿ, ನಾನು ಈ ಒಂದು ಸಬ್‌ಸ್ಟಾನ್‌ಟೀವ್ ಮೋಷನ್ ಅನ್ನು ಮೂವ್ ಮಾಡುವುದಕ್ಕೆ ಇಚ್ಛೆಯನ್ನು ವ್ಯಕ್ತಪಡಿಸಿ ಇದಕ್ಕೆ ಸಂಬಂಧಪಟ್ಟ ಹಾಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ.

Mr. SPEAKER.—Please send that motion in writing.

Sri S. S. SHETTAR.—I have sent a typed copy day-before-yesterday itself.

Mr. SPEAKER.—I shall look into it.

Sri S. S. SHETTAR.—I shall refer to the Memorandum presented to the Central Study Team. On page 29 of the Memorandum, figures relating to the average daily labour attendance on "64 Famine Relief" works for May 1968 have been given for 16 Districts. Figures have been given indicating as to how many workers have been engaged in relief works. ಬೆಂಗಳೂರು ಒಂದೇ ಜಿಲ್ಲೆಯಲ್ಲಿ ಸಾಧಾರಣವಾಗಿ 5,056 ಜನಗಳು ಕೆಲಸ ಮಾಡುತ್ತಾರೆ ಎಂದು ಈ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಬೆಂಗಳೂರಿನಲ್ಲಿ ಜನಸಂಖ್ಯೆ ಜಾಸ್ತಿ ಇದೆ. ಹಳ್ಳಿಗಳಲ್ಲಿರತಕ್ಕ ಜನಸಂಖ್ಯೆಯ ಅಂಕಿ ಅಂಶಗಳನ್ನು ತೆಗೆದುಕೊಂಡರೆ 11 ಲಕ್ಷ 45 ಸಾವಿರದ 880 ಜನರು ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಆ ಒಂದು ಸಂಖ್ಯೆಗೆ ಅನುಗುಣವಾಗಿ 100ಕ್ಕೆ 60 ಜನ ನಿರುದ್ಯೋಗಿಗಳು ಇದ್ದಾರೆಂದು ಸರ್ಕಾರದವರು ಪ್ರಕಟಣೆ ಮಾಡಿದ್ದಾರೆ. ಬರಗಾಲ ಬರುವುದಕ್ಕೆ ಪೂರ್ವದಲ್ಲಿ ಕೊಟ್ಟಂತಹ ಅಂಕಿ ಅಂಶ ಇದು. ಬರಗಾಲ ಬರುವುದಕ್ಕೆ ಮುಂಚೆ 100ಕ್ಕೆ 60 ಜನ ನಿರುದ್ಯೋಗಿಗಳಿದ್ದಾರೆ ಎಂದು ಗೊತ್ತಾಗುತ್ತದೆ. ಬರಗಾಲ ಬಂದಮೇಲೆ ಎಷ್ಟು ಜನ ನಿರುದ್ಯೋಗಿಗಳು ಇದ್ದಾರೆ ಎನ್ನುವ ಅಂಕಿ ಅಂಶಗಳನ್ನು ನೋಡಿದರೆ ಗಾಬರಿಯಾಗುತ್ತದೆ.

ಆಮೇಲೆ ಧಾರವಾಡ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ನೋಡುವುದಾದರೆ 100ಕ್ಕೆ [illegible]7 ಜನ ನಿರುದ್ಯೋಗಿಗಳು ಅಲ್ಲಿ ಇದ್ದಾರೆ. ಧಾರವಾಡ ಡಿಸ್ಟ್ರಿಕ್ಟಿನಲ್ಲಿ 2,482 ಜನಗಳು ಉದ್ಯೋಗದಲ್ಲಿ ತೊಡಗಿದ್ದಾರೆ. ಅಲ್ಲಿನ ಜನಗಳಿಗೆ ಉದ್ಯೋಗವನ್ನು ದೊರಕಿಸುವಂತಹ ಪ್ರಧಾನವಾದಂತಹ ಕೆಲವು ಕೆಲಸಗಳನ್ನು ಕಾರ್ಯಗತ ಮಾಡಬೇಕು. ಈಗ ಎಲ್ಲಾಕಡೆಗಳಿಂದ ಬಂದ ವರ್ತಮಾನದ ಪ್ರಕಾರ ಕೆಲಸ ಎಲ್ಲೂ ಪ್ರಾರಂಭವಾಗಿಲ್ಲ ಎಂದು ತಿಳಿದು ಬಂದಿದೆ. ಇಡೀ ಮೈಸೂರು ರಾಜ್ಯದಲ್ಲಿ 45 ಸಾವಿರ ಜನ ಬಂಡಿಂಗ್ ವರ್ಕ್ಸ್‌ನಲ್ಲಿ ತೊಡಗಿದ್ದಾರೆಂದು ಪ್ರಕಟಿಸಿದ್ದಾರೆ. ಈ ಸೂಚನೆ ಅಷ್ಟು ಸಮಾಧಾನಕರವಾಗಿಲ್ಲ ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಇದರಲ್ಲಿ ಮುಖ್ಯವಾದ ಒಂದು ಅಂಶವೇನೆಂದರೆ ಯಾವುದೇ ಕ್ಷಾಮಪರಿಸ್ಥಿತಿ ದೇಶದಲ್ಲಿ ಬಂದಾಗ ಸರ್ಕಾರ ಏನು ಮಾಡಬೇಕು ಎಂದರೆ ಕೇಂದ್ರ ಸರ್ಕಾರಕ್ಕೆ ಇದ್ದ ಪರಿಸ್ಥಿತಿಯನ್ನು ನಿವೇದಿಸಿಕೊಳ್ಳಬೇಕು. ಈಗಾಗಲೇ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಕಳುಹಿಸಿದಂತಹ ಸ್ಟಡಿ ಟೀಮಿನವರು ಕೊಟ್ಟಂತಹ ವರದಿಯ ಪ್ರಕಾರ ನಮ್ಮ ಸರ್ಕಾರಕ್ಕೆ ಸಹಾಯಧನವನ್ನು ಕೊಡಬೇಕಾಗುತ್ತದೆ ಎನ್ನುವ ಮಾತನ್ನು ತಿಳಿಸಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು 1-2-68 ರಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ. ಅವರಲ್ಲಿ ನಮ್ಮ ರಾಜ್ಯಕ್ಕೆ ಸ್ಕೇರ್ಸಿಟಿ ಕೆಲಸಕ್ಕಾಗಿ ಕನಿಷ್ಠಪಕ್ಷ 10 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಉಲ್ಲೇಖಿಸಿದ್ದಾರೆ. ಆ ಹಣ ಲಭಿಸದೆ ಇರುವುದರಿಂದ ಮತ್ತು ಸಂಪೂರ್ಣವಾಗಿ ಅದನ್ನು ಉಪಯೋಗಿಸುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ, ಸ್ಟೇಟ್‌ಮೆಂಟ್ 10 ರಲ್ಲಿ ಹೇಳಿರುವ ಹಾಗೆ, ಈ ಕೆಲಸಕ್ಕೆ 8 ಕೋಟಿ 30 ಲಕ್ಷ ರೂಪಾಯಿಗಳು ಆದರೆ ಸಾಕು ಎಂದು ಹೇಳಿದ್ದಾರೆ. ಇವೊತ್ತಿನ ಎಮರ್ಜೆನ್ಸಿ ಫೀಡಿಂಗ್ ಸಲುವಾಗಿ ಬೇಕಾದಂತಹ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ 2 ಕೋಟಿ 25 ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ಹೇಳಿದ್ದಾರೆ. ನಾನು ಪತ್ರಿಕೆಯಲ್ಲಿ ಓದಿರುವ ಹಾಗೆ 8 ಕೋಟಿ 30 ಲಕ್ಷ ರೂಪಾಯಿಗಳು 67-68 ನೇ ಸಾಲಿಗೆ ಸಂಬಂಧಿಸಿದ್ದು ಎನ್ನುವ ಮಾತನ್ನು ಹೇಳಿದ್ದಾರೆ. ಈಗ 1968-69 ನೇ ಸಾಲಿಗೆ ಸಂಬಂಧಪಟ್ಟ ಹಾಗೆ ಹಿಂದಿನ ಬಾಕಿ ಎಷ್ಟು ಇತ್ತು ಕೇಂದ್ರ ಸರ್ಕಾರದ ಸ್ಟಡಿ ಟೀಮಿನವರು ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ಸರ್ಕಾರದವರು ಜನತೆಯ ಮುಂದೆ ಇಟ್ಟಿಲ್ಲ ಎಂದು ಹೇಳಬೇಕಾಗುತ್ತದೆ. ಅಭಾವ ಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಕೆಲಸಗಳು ಪ್ರಾರಂಭವಾಗಿಲ್ಲ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಸ್ಟಡಿ ಟೀಮಿನವರು ಕೂಡ ನಮ್ಮ ರಾಜ್ಯದಲ್ಲಿ ಉಂಟಾಗಿರತಕ್ಕ ದುಷ್ಕಾಲ ಪರಿಸ್ಥಿತಿಯ ಬಗ್ಗೆ ಸರಿಯಾದ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದವರಲ್ಲಿ ನಿವೇದಿಸಿಲ್ಲ. ರಾಜ್ಯ ಸರ್ಕಾರದವರು ಎಷ್ಟು ಒತ್ತಡದಿಂದ ಪರಿಸ್ಥಿತಿಯನ್ನು ತಿಳಿಸಬೇಕಾಗಿತ್ತೋ ಅಷ್ಟು ಒತ್ತಡದಿಂದ ತಿಳಿಸಿಲ್ಲ ಎಂದು ನಾನು ಸ್ಪಷ್ಟ ಮಾಡಬೇಕಾಗುತ್ತದೆ. 1965-66 ನೇ ಇಸವಿಯಿಂದ ಒಂದೇ ಸಮನಾಗಿ ನಮ್ಮ ದೇಶದಲ್ಲಿ ದುಷ್ಕಾಲ ಬರುತ್ತಿದೆ.

ಪರಿಣಾಮಕಾರಿಯಾದಂತಹ ಕೆಟ್ಟ ಪರಿಣಾಮವನ್ನು ಬೀರುವಂತಹ ಇಂಥಾ ಪರಿಸ್ಥಿತಿಯನ್ನು ನೋಡಿದರೆ ಇದಕ್ಕೆ ಪ್ರತ್ಯೇಕವಾದ ಒಂದು ವ್ಯವಸ್ಥೆಯನ್ನು ಮಾಡಬೇಕು. ಈ ಬಗ್ಗೆ ಸರ್ಕಾರದವರು ಈಗ ಏನೊಂದು ಕ್ರಮವನ್ನು ತೆಗೆದುಕೊಂಡಿದ್ದಾರೆಯೋ ಇದರಿಂದ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಭಾವ ಪರಿಸ್ಥಿತಿ ಪುನಃ ನಮ್ಮ ರಾಜ್ಯಕ್ಕೆ ಬಾರದ ರೀತಿಯಲ್ಲಿ ಯಾವುದಾದರೂ ಒಂದು ಖಾಯಂ ವ್ಯವಸ್ಥೆಯನ್ನು ಮಾಡತಕ್ಕಂಥ ಪ್ರಯತ್ನ ಮಾಡಬೇಕಾಗಿತ್ತು. ರಾಜ್ಯದ ಅನೇಕ ಕಡೆ ಮಳೆ ಆಗದೆ ಬೆಳೆಯೆಲ್ಲಾ ಒಣಗಿ ಹೋಗಿ ಜನ ಆಕಾಶದ ಕಡೆ ನೋಡುತ್ತಿದ್ದಾರೆ. ಮೊನ್ನೆ ರೇಡಿಯೋದಲ್ಲಿ ಪ್ರಸಾರ ಮಾಡಿದ್ದನ್ನು ನೋಡಿದರೆ ಪುನಃ ಸ್ವಡಿ ಟೀಮಿನವರು ನಮ್ಮ ರಾಜ್ಯಕ್ಕೆ ಬರುತ್ತಾರೆ ಅನಿಸುತ್ತದೆ. ಅದರ ಸಲುವಾಗಿ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿ ಅವರ ಮುಖಾಂತರ ಈಗ ನಮ್ಮ ರಾಜ್ಯದಲ್ಲಿ ಇರುವಂತಹ ತೊಂದರೆಗಳನ್ನು ಆ ಸ್ವಡೀ ಟೀಮಿನವರ ಮುಂದೆ ನಿವೇದಿಸಿಕೊಂಡರೆ ಅದರಿಂದ ಅನುಕೂಲವಾಗುತ್ತದೆ. ಮತ್ತು ದುಷ್ಕಾಲ ಪರಿಸ್ಥಿತಿಯನ್ನು ಎದುರಿಸಲು ಏನೇನು ಯೋಜನೆಗಳನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಬೇಕು. ರ_ಗಳ ಕೆಲಸ ಸಣ್ಣ ಸಣ್ಣ ಕೆರೆಗಳ ರಿಪೇರಿ ಕೆಲಸ, ಹೂಳು ತೆಗೆಸುವುದು ಇತ್ಯಾದಿ ಕಾಮಗಾರಿಗಳನ್ನು ಮಾಡಬೇಕು. 1967-68 ನೇ ಸಾಲಿನಲ್ಲಿ ಸ್ಕೇರ್ಸಿಟಿ ಕೆಲಸಕ್ಕಾಗಿ ಏನೊಂದು ಹಣವನ್ನು ಖರ್ಚು ಮಾಡಿ, ಕೆಲವು ಯೋಜನೆಯನ್ನು ಕಾರ್ಯಗತ ಮಾಡಬೇಕಾಗಿತ್ತೋ ಅದನ್ನು ಮಾಡದೆ ಯಾವುದೋ ಒಂದು ದೊಡ್ಡ ನೆಪವನ್ನು ಹೇಳುವುದಕ್ಕೆ ಸರ್ಕಾರ ಹೊರಟಿದೆ. ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಭಾಗದಲ್ಲಿ ಯಾವ ಯಾವ ಕೆರೆಗಳ ಕೆಲಸ ಆಗಿ, ನೀರಾವರಿ ಸೌಲಭ್ಯಗಳನ್ನು ಒದಗಿಸಿ ಕೊಟ್ಟು ಸಾಗುವಳಿಯಾಗಬೇಕಾಗಿದ್ದ ಜಮೀನನ್ನು ಬಿಟ್ಟು ಬಿಡುವಂತಹ ಪರಿಸ್ಥಿತಿ ಬಂದಿದೆ. ಇಂತಹ ಕೆರೆಗಳು ಬೇಕಾದ ಹಾಗೆ ಇವೆ. ಹೀಗೆ ಕೆರೆಗಳು ಬತ್ತಿ ಹೋದ ಕಾಲದಲ್ಲಿ ಇಲ್ಲಿಗೆ ಸರಿಯಾಗಿ ನೀರು ಬರುವ ವ್ಯವಸ್ಥೆ ಬಗ್ಗೆ ಸರಕಾರ ಯೋಚನೆ ಮಾಡಬೇಕು. ಇನ್ನು ಬಾವಿಗಳ ಬಗ್ಗೆ ನೋಡಿದರೆ ಇದು ಒಂದು ದೊಡ್ಡ ಆಭಾಸವಾಗಿದೆ. ಬಾವಿಗಳನ್ನು ಏನೋ ಮಾಡಬೇಕೆಂದು ಕೆಲಸಗಳನ್ನು ಪ್ರಾರಂಭ ಮಾಡುತ್ತಾರೆ ಆದರೆ ಇದರ ಕೆಲಸಗಳು ಸಾಕಷ್ಟು ಸಮಾಧಾನಕರವಾಗಿ ಆಗುತ್ತಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ನೋಡಿದರೂ ಎಷ್ಟೋ ಬಾವಿಗಳನ್ನು ತೆಗೆಸುತ್ತಿದ್ದಾರೆ. ಆದರೆ ಎಷ್ಟೋ ಕಡೆಗಳಲ್ಲಿ ಬಾವಿಗಳಲ್ಲಿ ನೀರೇ ಬರುತ್ತಿಲ್ಲ. ಬರೀ ಮಾತಿನಲ್ಲಿ ಬಾವಿಯಾಗುತ್ತಿವೆ. ಮತ್ತು ಅವು ಕೆಲಸಕ್ಕೆ ಬಾರದ ರೀತಿಯಲ್ಲಿ ಆಗುತ್ತಿವೆ.

ಇನ್ನು ನಮಗೆ ಒದಗಿಸಿರುವ ಸ್ಟೇಟ್‌ಮೆಂಟಿನ ಬಗ್ಗೆ ಒಂದು ಮುಖ್ಯವಾದ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಪುಟ 26 ರಲ್ಲಿ ಕೊಟ್ಟಿರುವ ಸ್ಟೇಟ್‌ಮೆಂಟು ನಂಬರು 9 ರಲ್ಲಿದೆ. ಇದರಲ್ಲಿ ಬೆನಿಫಿಷಿಯರೀಸ್ ಬಗ್ಗೆ ಅಲಾಟು ಮಾಡಿರುವುದು 9,49,600 ಹಾಗೂ ಉಪಯೋಗಿಸಿರುವುದು 5,05,455 ಎಂದು ಕೊಡಲಾಗಿದೆ. ಇದರ ಮೇಲೆ ಸರ್ವೇ ಟೀಂ ನಡೆಸಿರುವುದು ಮತ್ತು ಇತ್ತರ ಸಾಕ್ಷಿ ವಿವರಗಳನ್ನು ಸಂಪೂರ್ಣವಾಗಿ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಎನ್ನುವುದು ಇದರಿಂದ ವಿದಿತವಾಗುತ್ತದೆ. ನಮ್ಮ ಮಿತ್ರರು ಇದರಲ್ಲಿ ಕೂಡ ಎಲ್ಲ ಅಂಕಿ ಅಂಶಗಳನ್ನೂ ತೆಗೆದುಕೊಂಡಿಲ್ಲ. ಇದನ್ನು ನೋಡಿದರೆ ಎಷ್ಟು ದುಡ್ಡು ಕೊಟ್ಟಿದ್ದರೂ ಅದನ್ನು ಪೂರ್ಣವಾಗಿ ಖರ್ಚು ಮಾಡಿಲ್ಲ ಎನ್ನುವುದು ಇದರಿಂದ ವಿದಿತವಾಗುತ್ತದೆ. ಕಾಮಗಾರಿಗಳನ್ನು ಕೂಡ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಮತ್ತು ಇದರ ಕೆಲಸಗಳನ್ನು ಮಾಡುವಾಗ ಸರಕಾರದ ವತಿಯಿಂದ ಇರುವ ಅಧಿಕಾರಿಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ನಾನು ಬೇರೆ ಹೇಳಬೇಕಾಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ವಿವರಣೆ ಮಾಡುವಾಗ ಶಿಬ್ಬಂದಿಯವರು ಸ್ವಲ್ಪಮಟ್ಟಿನ ಜವಾಬುದಾರಿಯಿಂದ ಇದನ್ನು ಮಾಡಲಿಲ್ಲ ಎನ್ನುವ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿದ್ದಾರೆ. ವಿರೋಧ ಪಕ್ಷದವರು ಇಲ್ಲಿ ಕೆಲವಾರು ಸೂಚನೆಗಳನ್ನು ಸರಕಾರಕ್ಕೆ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಇದನ್ನು ಸರಕಾರ ಸರಿಯಾಗಿ ಯೋಚನೆಮಾಡಬೇಕು. ಇವೊತ್ತು ಶಿಬ್ಬಂದಿಯು ಒಂದು ನೆಪ ಹಾಕಿ ಇಲ್ಲಿನ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗದೇ ಇದ್ದರೆ ಅದಕ್ಕಾಗಿ ನಾವು ವಿಷಾದಪಡಬೇಕಾಗಿದೆ. ಆದುದರಿಂದ ನಾನು ಸರಕಾರಕ್ಕೆ ಸೂಚನೆ ಕೊಡುವುದು ಈ ರಿಲೀಫ್ ವರ್ಕ್ಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಒಂದು ಕಮಿಟಿ ಮಾಡಬೇಕು ಎಂದು ನಾನು ಇಲ್ಲಿ ಒಂದು ಸಬ್‌ಸ್ಟಾಂಟೀವ್ ಮೋಷನ್ ಕಳುಹಿಸಿದ್ದೇನೆ. ಅದರಂತೆ ಒಂದು ಕಮಿಟಿ ನೇಮಕ ಮಾಡಿದರೆ ಆ ಕಮಿಟಿಯ ಮುಖೇನ ಕೇಂದ್ರ ಸರಕಾರಕ್ಕೆ ನಮ್ಮ ಬೇಡಿಕೆಯನ್ನು ಸಲ್ಲಿಸುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಅವರು ಕೊಟ್ಟ ಹಣವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲೂ ಅನುಕೂಲವಾಗುತ್ತದೆ. ಇದರ ಕಡೆಗೆ ಲಕ್ಷ್ಯ ಕೊಡಬೇಕು ಎಂದು ನಾನು ಇಲ್ಲಿ ಸಲಹೆಮಾಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಇವೊತ್ತಿನ ದಿನ ನಮ್ಮ ಮೈಸೂರು ರಾಜ್ಯದಲ್ಲಿ ಮಳೆ ಬಾರದೆ ಇರತಕ್ಕ ಪರಿಸ್ಥಿತಿಯಲ್ಲಿ ಈ ಸಭೆಯ ಮಾನ್ಯ ಸದಸ್ಯರುಗಳು ಅನೇಕ ಗಮನಾರ್ಹವಾದ ವಿಷಯಗಳನ್ನು ಈ ಸಭೆಯ ಮುಖೇನ ಸರಕಾರಕ್ಕೆ ತಿಳಿಸಿದ್ದಾರೆ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಈ ಸಭೆಯ ಮುಂದೆ ಅಭಾವ ಪರಿಸ್ಥಿತಿಗಳ ಬಗ್ಗೆ ರಾಜ್ಯ ಸರಕಾರದವರು ಕೈಗೊಂಡಿರುವ ಕಾರ್ಯಕ್ರಮಗಳು ಹಾಗೂ ಮುಂದೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಹೇಳುತ್ತಾ ಇಲ್ಲಿ ಒಂದು ಠರಾವನ್ನೂ ಮಂಡಿಸಿದ್ದಾರೆ. ಈಗಾಗಲೇ ಮೂರು ನಾಲ್ಕು ದಿನಗಳಿಂದಲೂ ಯಾವಯಾವ ಭಾಗದಲ್ಲಿ ಎಂತಹ ಪರಿಸ್ಥಿತಿಗಳಿವೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಸಕಾಲದಲ್ಲಿ ಮಳೆ ಬಾರದಂತಹ ಪರಿಸ್ಥಿತಿ ಇರುವುದರಿಂದ ಇಂದು ಅಭಾವದ ಪರಿಸ್ಥಿತಿ ಕಾಣುತ್ತಿದೆ. ಈ ಅಭಾವ ಪರಿಸ್ಥಿತಿ ಇವೊತ್ತಿನ ದಿವಸದ್ದಲ್ಲ. ಪ್ರತಿ ವರ್ಷವೂ ಬರುತ್ತಲೇ ಇರುತ್ತದೆ. ಆದರೆ ಇಂದು ಈ ಪರಿಸ್ಥಿತಿ ಬಹಳ ತೀವ್ರವಾಗಿ ಕಣ್ಣಿಗೆ ಕಾಣಿಸುತ್ತಿದೆ. ಇಲ್ಲಿ ತಂದಿರುವ ಠರಾವಿನಂತೆ ನಾವು ನೋಡುವುದಾದರೆ ನಮ್ಮ ದೇಶದಲ್ಲಿ ಸುಮಾರು ಹದಿಮೂರು ಸಾವಿರ ಹಳ್ಳಿಗಳಲ್ಲಿ ಅಭಾವದ ಪರಿಸ್ಥಿತಿಯುಂಟಾಗಿದೆ ಎನ್ನುವ ಒಂದು ಅಂಶವನ್ನೂ ಇಲ್ಲಿ ಸರಕಾರದವರು ಹೇಳಿದ್ದಾರೆ. ಇದು ಒಂದೆರಡು ಜಿಲ್ಲೆಗಳನ್ನೂ ಬಿಟ್ಟಿಲ್ಲ ಯಾವ ಒಬ್ಬ ಮಾನ್ಯ ಸದಸ್ಯರೇ ಆಗಲಿ ಇಲ್ಲಿ ಹೇಳಿರುವುದನ್ನು ನೋಡಿದರೆ ಮಳೆಬಾರದೇ ಇರುವುದರಿಂದ ದನಕರುಗಳಿಗೆ ಕುಡಿಯಲು ನೀರಿಲ್ಲ, ಮೇವಿಲ್ಲ, ಎನ್ನುವುದು ಇದರಿಂದ ಗೊತ್ತಾಗುತ್ತದೆ. ಯಾವ ಜಿಲ್ಲೆಯನ್ನು ತೆಗೆದುಕೊಂಡರೂ ಸರಿಯೇ ನಮ್ಮ ದೇಶದಲ್ಲಿ ಸುಮಾರಾಗಿ ಮೂರು ವರ್ಷದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಅಭಾವದ ಪರಿಸ್ಥಿತಿ ಬರುತ್ತಲೇ ಇರುವುದನ್ನು ನಾವು ನೋಡುತ್ತಿದ್ದೇವೆ: ಇದಕ್ಕೆ ಕಾರಣವೇನು ? ಮಳೆಬಾರದೇ ಇರುವುದು ಒಂದೇ ಕಾರಣವಲ್ಲ. ಇಂದು ನಮ್ಮ ದೇಶದಲ್ಲಿ ಇರುವ ವೃಕ್ಷಗಳ ಸಂಪತ್ತು ಕಡಿಮೆಯಾಗುತ್ತಾ ಬರುತ್ತಿದೆ. ಅರಣ್ಯ ಸಂಪತ್ತನ್ನು ಕಡಿಮೆ ಮಾಡುವುದರಿಂದಾಗಿ ಇಂದು ನಮ್ಮ ದೇಶದಲ್ಲಿ ಮಳೆ ಬರುತ್ತಿಲ್ಲ. ರೈತರ ಭಾಷೆಯಲ್ಲೇ ಹೇಳಬೇಕೆಂದರೆ ಕಾಡು ಹೋದ ಮೇಲೆ ಮಳೆ ಎಲ್ಲಿಂದತಾನೇ ಬರುತ್ತದೆ. ಅನೇಕಲ್ ತಾಲ್ಲೂಕಿನ ಬನ್ನೇರುಘಟ್ಟ ಪ್ರದೇಶದಲ್ಲಿ ಅರಣ್ಯ ಸಂಪತ್ತು ಇತ್ತು. ಈಗ ಅದು ಕಡಿಮೆಯಾಗಿ ಇಲ್ಲಿ ಮಳೆ ಬರುವುದೇ ಇಲ್ಲ. ಮಳೆ ಬಾರದೇ ಇರುವುದಕ್ಕೆ ಅರಣ್ಯ ಸಂಪತ್ತು ನಮ್ಮ ದೇಶದಲ್ಲಿ ಕಡಿಮೆಯಾಗುತ್ತಿರುವುದೇ ಮುಖ್ಯ ಕಾರಣವಾಗಿದೆ. ಇಂದು ದೇಶದಲ್ಲಿರುವ ಅರಣ್ಯಸಂಪತ್ತು ನಾಶವಾಗದ ರೀತಿಯಲ್ಲಿ ಏರ್ಪಾಡು ಮಾಡುವುದು ನಮ್ಮ ಸರಕಾರದ ಮುಖ್ಯ ಕರ್ತವ್ಯ ಎಂದು ನಾನು ಹೇಳಬೇಕಾಗಿದೆ.

ಮತ್ತೊಂದು ಮುಖ್ಯ ಕಾರಣ ಈ ದೇಶದಲ್ಲಿ ಎಲ್ಲೋ ಕೆಲವು ಕಡೆಗಳಲ್ಲಿ ಅಲ್ಪಸ್ವಲ್ಪ ಮಳೆ ಬಂದಿದ್ದರೂ ಆ ಮಳೆಯ ನೀರನ್ನು ಸಕಾಲದಲ್ಲಿ ಸರಿಯಾಗಿ ಉಪಯೋಗಿಸಿಕೊಳ್ಳದೇ ಇರುವುದನ್ನು ನೋಡಿ ತುಂಬಾ ವಿಷಾದವಾಗಿದೆ. ಈಗ ನಮ್ಮ ದೇಶದಲ್ಲಿ ಜಾಸ್ತಿಯಾಗಿ ದೊಡ್ಡ ದೊಡ್ಡ ಆಣೇಕಟ್ಟುಗಳು ಹಾಗೂ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕೆ ಹೋಗುವುದರಿಂದ ನಮಗೆ ಮಳೆಬಂದಂತಾಗುವುದಿಲ್ಲ. ಅಲ್ಲದೆ ಮಳೆಯಿಂದ ಬರತಕ್ಕ ನೀರನ್ನು ಸದುಪಯೋಗಪಡಿಸಿಕೊಳ್ಳಲಿಲ್ಲ ಮತ್ತು ಮಳೆ ಬಂದಾಗ ಸಣ್ಣ ಪುಟ್ಟ ಕೆರೆಗಳಲ್ಲಿ ನೀರು ನಿಲ್ಲುವಂತೆ ಮಾಡಿ ಅದಕ್ಕೆ ತಕ್ಕ ಅಣೆಕಟ್ಟುಗಳನ್ನು ಹಾಗೂ ಕುಂಟೆಗಳನ್ನು ಕಟ್ಟಿದ್ದರೆ ನೀರನ್ನು ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದಾಗಿತ್ತು ಎಂದು ನಾನು ಇಲ್ಲಿ ಹೇಳಬೇಕಾಗಿದೆ. ಸುಮಾರು 36 ಸಾವಿರಕ್ಕೆ ಮೇಲ್ಪಟ್ಟು ಕೆರೆಗಳು ನಮ್ಮ ದೇಶದಲ್ಲಿದ್ದರೂ ಅವುಗಳಲ್ಲಿ ಎಷ್ಟೋ ಕೆರೆಗಳಿಗೆ ನೀರು ಬಂದರೂ ಅಲ್ಲಿ ನೀರು ನಿಲ್ಲುವುದಿಲ್ಲ. ಇದಕ್ಕೆ ಕಾರಣ ಅಲ್ಲಿರುವ ತೂಬುಗಳು ಸರಿಯಾಗಿಲ್ಲ ಮತ್ತು ಕೋಡಿ ಇಲ್ಲ. ಇದು ಬಹು ವಿಷಾದದ ಸಂಗತಿ. ಅಲ್ಲದೆ ಅನೇಕ ಕೆರೆಗಳಲ್ಲಿ ಮಳೆಯಿಂದ ಬಂದ ನೀರು ರಾತ್ರಿ ಇದ್ದರೂ ಬೆಳಗಾಗುವುದರೊಳಗಾಗಿ ಅಲ್ಲಿ ನೀರೇ ನಿಲ್ಲುವುದಿಲ್ಲ. ಇದನ್ನು ಸರಿಯಾಗಿ ಸರಕಾರ ಪರಿಶೀಲನೆ ಮಾಡಿ ನೋಡಿಲ್ಲ. ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಇತರ ಕಾಮಗಾರಿಗಳನ್ನು ಮಾಡಲಿಕ್ಕೆ ರಸ್ತೆಗಳನ್ನು ಮಾಡಲಿಕ್ಕೆ ಇತ್ಯಾದಿ ಕೆಲಸಗಳಿಗೆ ಕೋಟಿಗಟ್ಟಲೆ ಹಣ ವೆಚ್ಚ ಮಾಡುತ್ತಿದ್ದಾರೆಯೇ ಹೊರತು ಇದರ ಕಡೆಗೆ ಹೆಚ್ಚು ಲಕ್ಷ್ಯ ಕೊಡುತ್ತಿಲ್ಲ.

Mr. SPEAKER.—The House will now rise and meet again at 3-30 P.M. The hon'ble member may resume his speech at 3-30.

The House rose at Three of the Clock and re-assembled at Forty Minutes past Three of the Clock.

[MR. DEPUTY SPEAKER in the Chair]

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಉಪ ಸಭಾಪತಿಗಳವರೇ, ಈಗಾಗಲೇ ಅಭಾವ ಪರಿಸ್ಥಿತಿಯ ವಿಷಯದಲ್ಲಿ ನಾನು ಮಾತನಾಡುತ್ತಾ ಈ ಅಭಾವ ಪರಿಸ್ಥಿತಿಯ ಮೂಲಕ ಬಂದಿರತಕ್ಕ ಸಮಸ್ಯೆಯನ್ನು ಪರಿಹಾರ ಮಾಡತಕ್ಕ ಸಂದರ್ಭದಲ್ಲಿ ಈ ಒಂದು ವಿಶೇಷವಾದಂತಹ ಮತ್ತು ಜನಗಳಿಗೆ ಅನುಕೂಲವಾಗತಕ್ಕ ಕೆಲವು ಕಾಂಗಾರಿಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ. ಈಗಾಗಲೇ ಹೇಳಿದ ಹಾಗೆ ಈ ಒಂದು ಕೆರೆಗಳ ವಿಷಯದಲ್ಲಿ ಹೇಳುವುದಾದರೆ ಸಣ್ಣ ನೀರಾವರಿ ಆಶ್ರಯದಲ್ಲಿರತಕ್ಕ ಸಾವಿರಾರು ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಕೆಲಸ ಕಾರ್ಯಗಳನ್ನು ಮಾಡುವಾಗ ಬಹಳ ಮುಖ್ಯವಾದಂತಹದು ಅವುಗಳ ತೂಬು ಮತ್ತು ಕೋಡಿಗಳನ್ನು ರಿಪೇರಿ ಮಾಡುವುದು. ಅದನ್ನು ಇಂತಹ ಅಭಾವ ಪರಿಸ್ಥಿತಿಯಲ್ಲಿ ತೆಗೆದುಕೊಳ್ಳಬೇಕಾದ್ದು ಬಹಳ ಅವಶ್ಯಕ. ಕೆರೆಗಳಲ್ಲಿರತಕ್ಕ ಹೂಳುಮಣ್ಣನ್ನು ತೆಗೆಸಬೇಕು, ನೂರಾರು ವರ್ಷಗಳಿಂದ ಈ ಕೆರೆಗಳಲ್ಲಿ ಹೂಳು ಮಣ್ಣು ತುಂಬಿಕೊಂಡು ಅವುಗಳಲ್ಲಿ ನೀರು ನಿಲ್ಲದೇ ಹರಿದುಕೊಂಡು ಹೊರಟು ಹೋಗುತ್ತಾ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಒಂದು ನಿದರ್ಶನ ಕೊಡುವುದಾದರೆ ನನ್ನ ತಾಲ್ಲೂಕಿನಲ್ಲಿರತಕ್ಕ ಅಮಾನಿ ದೊಡ್ಡ ಕೆರೆ, 2,400 ಎಕರೆ ಅಚ್ಚು ಕಟ್ಟು ಇದೆ. 1964–65ರಲ್ಲಿ ಅದಂತಹ ಅಭಾವ ಕಾಲದಲ್ಲಿ ಕೆರೆ ಬತ್ತಿ ಹೋದಾಗ ಅದನ್ನು ಲೋಕೋಪಯೋಗಿ ಇಲಾಖೆಯವರು ಪರಿಶೀಲಿಸಿದ ನಂತರ ಅದರಲ್ಲಿ ಸುಮಾರು ಆರು ಅಡಿ ಹೂಳು ಮಣ್ಣು ಇದೆ ಎಂದು ಹೇಳಿದರು. ಈ ರೀತಿ ಎಷ್ಟೋ ಕೆರೆಗಳಲ್ಲಿ ಮಣ್ಣು ತುಂಬಿಕೊಂಡು ತೊಂದರೆಯಾಗುತ್ತಾ ಇದೆ, ನೀರು ನಿಲ್ಲುವುದಿಲ್ಲ ಎನ್ನುವುದಕ್ಕೆ ಆ ಒಂದು ಉದಾಹರಣೆಯನ್ನು ಹೇಳಿದೆ. ಇವತ್ತಿನ ದಿವಸ ನನ್ನ ತಾಲ್ಲೂಕಿನಲ್ಲಿರತಕ್ಕ ಅಭಾವ ಪರಿಸ್ಥಿತಿಯ ವಿಚಾರ ಹೇಳಬೇಕಾಗಿದ್ದರೆ ದೇಶದಲ್ಲಿ 100-150 ತಾಲ್ಲೂಕುಗಳಲ್ಲಿ ಯಾವ ಒಂದು ಅಭಾವ ಪರಿಸ್ಥಿತಿ ಇದೆಯೋ ಅದೇ ಒಂದು ಪರಿಸ್ಥಿತಿ ನಮ್ಮ ಹೊಸಕೋಟೆ ತಾಲ್ಲೂಕಿನಲ್ಲೂ ಕೂಡ ಇದೆ. ಅಲ್ಲಿ ಒಂದು ಹೆದ್ದಾರಿ ಇದೆ ಅದು ಬಹಳ ಕರ್ವ್ ಇರುವುದರಿಂದ ಅದನ್ನು ನೇರ ಮಾಡಬೇಕೆಂದು ಹೊರಟಿದ್ದಾರೆ, ಅದಕ್ಕೆ ಈ ಕೆರೆಯಲ್ಲಿರತಕ್ಕ ಹೂಳು ಮಣ್ಣನ್ನು ತೆಗೆದು ರಸ್ತೆ ನೇರ ಮಾಡುವುದಕ್ಕೆ ಹಾಕಬೇಕೆಂದು ಈ ಸಭೆಯ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೊಂದು ವಿಷಯವೇನೆಂದರೆ ಈ ಅಭಾವ ಬಂದಿರುವ ಕಾಲದಲ್ಲಿ ಬಾವಿಗಳನ್ನು ಆಳಪಡಿಸುವುದಕ್ಕೆ ಸರ್ಕಾರದವರು ಯಾವ ಅಡ್ಡಿ ಅತಂಕವೂ ಇಲ್ಲದೇ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಸಾಲ ಕೊಡಬೇಕಾದರೆ ಇರತಕ್ಕ ನಿಯಮಗಳನ್ನು ಸಡಿಲಪಡಿಸುವುದಾದರೆ ಹೆಚ್ಚು ನೆರವನ್ನು ಪಡೆದುಕೊಳ್ಳಲಿಕ್ಕೆ ಅವಕಾಶವಾಗುತ್ತದೆ ಎಂಬ ಸಲಹೆಯನ್ನು ಮಾಡುತ್ತಾ ಇದ್ದೇನೆ. ಅನೇಕ ರೈತರು ಬಾವಿಗಳನ್ನು ತೋಡಿಸಿ ಅದರ ಕೆಲಸ ಅರ್ಧಂಬರ್ಧವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವ ಪ್ರಕಾರ ಸಿ.ಡಿ. ಪ್ರೋಗ್ರಾಂ ಮತ್ತು ಲಿಬರಲೈಸಡ್ ಸ್ಕೀಂ ಪ್ರಕಾರ 37 ಸಾವಿರ ಬಾವಿಗಳು ಆಗಬೇಕಾಗಿರತಕ್ಕ ಕಡೆ 25 ಸಾವಿರ ಬಾವಿಗಳ ಕೆಲಸ ಇನ್ನೂ ಪೂರ್ತಿಯಾಗಬೇಕಾಗಿದೆ. 12 ಸಾವಿರ ಬಾವಿಗಳು ಮಾತ್ರ ಪೂರ್ತಿಯಾಗಿವೆ. ಆದ್ದರಿಂದ ಅವುಗಳನ್ನು ಪೂರ್ಣ ಮಾಡಲು ತೀವ್ರ ಯೋಜನೆಯನ್ನು ಹಾಕಿಕೊಂಡು ರೈತರಿಗೆ ಅವಕಾಶ ಕಲ್ಪನೆ ಮಾಡಿ ಸಾಕಾದಷ್ಟು ಹಣವನ್ನು ಒದಗಿಸಬೇಕೆಂದು ಸರ್ಕಾರದವರನ್ನು ಈ ಸಭೆಯ ಮೂಲಕ ಪ್ರಾರ್ಥಿಸುತ್ತೇನೆ. ಈ ಕೆಲಸಗಳನ್ನು ಮಾಡತಕ್ಕ ವಿಧಾನ ನೋಡಿದರೆ ಬಹಳ ದುಃಖದಿಂದ ಹೇಳಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಇವತ್ತಿನ ದಿವಸ ಈ ಸಭೆಯಲ್ಲೂ ಹೇಳಿದ್ದಾರೆ ಹೊರಗಡೆಯೂ ಹೇಳಿದ್ದಾರೆ. ಎಷ್ಟೇ ಹಣ ಖರ್ಚಾಗಲಿ ಸರ್ಕಾರದವರು ಹಣ ಕೊಡುತ್ತೇವೆ ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಲು ಕೇಂದ್ರದ ಹಣವನ್ನೂ ಸಹ ಪಡೆಯುತ್ತೇವೆ ಎಂದು. ಸೆಂಟ್ರಲ್ ಸ್ಟಡಿ ಟೀಮ್‌ನವರು ಬಂದಿದ್ದರು, ಅವರು ಮುಂದೆ ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಸಂಬಂಧಪಟ್ಟ ತಜ್ಞರು ಸರಿಯಾದ ಅಂಕಿ ಅಂಶಗಳನ್ನು ಇಟ್ಟು ಪರಿಣಾಮಕಾರಿಯಾಗಿ ಒತ್ತಾಯ ಮಾಡಿಲ್ಲ ಎಂದು ಹೇಳುವುದಕ್ಕೆ ಒಂದು ನಿದರ್ಶನವನ್ನು ಕೊಡುವುದಾದರೆ 1966-67ರಲ್ಲಿ ಖರ್ಚು ಮಾಡಿರತಕ್ಕ ಹಣ ಕೇವಲ ಶೇಕಡ 50 ಭಾಗ ಖರ್ಚು ಮಾಡಿ 1968-69ರ ಸಾಲಿಗೆ ಈಗಿನ ಪರಿಸ್ಥಿತಿಯಲ್ಲಿ ಕೇವಲ 10 ಕೋಟಿ ರೂಪಾಯಿಗಳು ನಮ್ಮ ಬಡ್ಜೆಟ್‌ನಲ್ಲಿ ಈ ಬಾಬಿಗೆ ಇಡಲಾಗಿದೆ ಎಂದು ಹೇಳಿದ್ದೀರಿ. ಕಳೆದ ಮೂರು ವರ್ಷಗಳಿಂದ ಸತತವಾಗಿ ಈ ಒಂದು ಅಭಾವ ಪರಿಸ್ಥಿತಿ ಕಾಣುತ್ತಾ ಇದೆ. ಹಾಗಿರುವಾಗ ಹಣದ ಬೇಡಿಕೆಯನ್ನು ಇಡುವಾಗ ಅಧಿಕಾರಿಗಳು ಯಾವ ವೇಗದಲ್ಲಿ ಕೆಲಸ ಮಾಡುತ್ತಾರೆ ಎಂಬುದು ಬಹಳ ಮುಖ್ಯವಾದದ್ದು, ತಾಲ್ಲೂಕು ಲೆವಲ್ ಸ್ಕೇರ್ಸಿಟಿ ಕಮಿಟಿ ಅಂತ ಇದೆ, ಅವರು ಮೊನ್ನೆ ತಾನೆ ತೀರ್ಮಾನ ತೆಗೆದುಕೊಂಡಿದ್ದಾರೆ; ಸರ್ಕಾರದ ಆದೇಶದ ಪ್ರಕಾರ ಯಾರು ಹಣ ಖರ್ಚು ಮಾಡಬೇಕು, ತಾಲ್ಲೂಕು ಬೋರ್ಡಿನವರೇ, ಪಿ.ಡಬ್ಲ್ಯು.ಡಿ. ಅವರೇ ಎಂಬುದು ಇವತ್ತಿಗೂ ಈ ಸಮಸ್ಯೆ ನಿವಾರಣೆಯಾಗಿಲ್ಲ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಇವತ್ತಿನ ದಿವಸ

(ಶ್ರೀ ಎನ್. ಚಿಕ್ಕೇಗೌಡ)

ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಆಗಲಿ, ಅಸಿಸ್ಟೆಂಟ್ ಕಮಿಷನರ್‌ವರ ಲೆವಲ್‌ನಲ್ಲಾಗಲಿ, ತಹಸೀಲ್ದಾರರ ಮಟ್ಟದಲ್ಲಾಗಲಿ ಎಷ್ಟು ಕೆಲಸ ನಡೆಯಬೇಕೋ ಅಷ್ಟು ಕೆಲಸ ನಡೆಯುತ್ತಿಲ್ಲ, ಮಧ್ಯವರ್ತಿಗಾರರು ಸೇರಿಕೊಂಡಿದ್ದಾರೆ. ನಾಮಿನಲ್ ರೋಲ್ ಅಂತ ಇದೆ, ಇದನ್ನು ಇಂಪ್ಲಿಮೆಂಟ್ ಮಾಡತಕ್ಕ ಕಾಲದಲ್ಲಿ ಅನೇಕ ನ್ಯೂನತೆಗಳು ಇವೆ. ಕಂಟ್ರಾಕ್ಟ್‌ದಾರರು ಬಹಳ ಅನ್ಯಾಯ ಮಾಡುತ್ತಾ ಇದ್ದಾರೆ ಹಣದ ರೂಪದಲ್ಲಿ ಬೇಡ ಧಾನ್ಯದ ರೂಪದಲ್ಲಿ ಕೊಡಿ ಎಂದರೆ ಅದನ್ನೂ ಕೂಡ ಬ್ಲಾಕ್ ಮಾರ್ಕೆಟ್ ಮಾಡತಕ್ಕ ಜನ ಇದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಈಗ ಬಂದಿರತಕ್ಕ ಅಭಾವ ಪರಿಸ್ಥಿತಿಯನ್ನು ತನ್ನ ಒಂದು ಕುಟುಂಬದ ಪರಿಸ್ಥಿತಿ ಎಂದು ತಿಳಿದುಕೊಳ್ಳತಕ್ಕ ಅಧಿಕಾರಿಗಳು ಬಹಳ ಕಡಿಮೆ ಇದ್ದಾರೆ. ಬೇಕಾದಷ್ಟು ಹಣ ಕೊಟ್ಟರೂ ಖರ್ಚು ಮಾಡದೇ ಇರುವುದಕ್ಕೆ ಕಾರಣ ಅವರ ಮನಸ್ಸಿನ ಮೇಲೆ ಪರಿಣಾಮವಾಗದೇ ಅವರು ಕರ್ತವ್ಯ ಲೋಪ ಮಾಡಿರುವುದೇ ಆಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಒಬ್ಬ ಅಧಿಕಾರಿ ಇಲ್ಲಿ ಬೇಡದವನನ್ನು ಇನ್ನೊಂದು ಕಡೆಗೆ ವರ್ಗ ಮಾಡಿದರೆ ಅಲ್ಲೂ ಅದೇ ಕೆಲಸ ಮಾಡುತ್ತಾರೆ, ಆದ್ದರಿಂದ ಅವರಿಗೆ ಸರಿಯಾಗಿ ಎಚ್ಚರಿಕೆ ಕೊಟ್ಟು, ಇಂತಹ ಒಂದು ಪರಿಸ್ಥಿತಿಯಲ್ಲಿ ಅವರು ಸರಿಯಾಗಿ ಕೆಲಸ ಮಾಡದಿದ್ದರೆ ಅವರ ಸೀನಿಯಾರಿಟಿ ಮತ್ತು ಅವರಿಗೆ ಕೊಡತಕ್ಕ ಪ್ರಮೋಷನ್‌ನ್ನು ನಿಲ್ಲಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದು ಒಬ್ಬ ಅಧಿಕಾರಿಯನ್ನು ಪರೀಕ್ಷೆ ಮಾಡತಕ್ಕ ಸಂದರ್ಭ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಅವರುಗಳಿಗೆ ಸರಿಯಾದಂತಹ ಆದೇಶವನ್ನು ಸರ್ಕಾರದವರು ಕೊಡಬೇಕೆಂದು ಈ ಸಭೆಯ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನೇಕ ಸದಸ್ಯರು ಮಾತನಾಡುತ್ತಾ ತಾಲ್ಲೂಕು ಬೋರ್ಡ್ ಮಂಡಲಿಗಳ ಮುಖೇನ ಕೆಲಸ ಮಾಡಬಾರದು ಎಂದು ವಾದ ವಿವಾದಗಳು ಉಂಟಾಗುತ್ತವೆ, ಕೆಲಸ ಸರಿಯಾದ ರೀತಿಯಲ್ಲಿ ನಡೆಯುವುದಿಲ್ಲ ಎಂದು ಹೇಳಿದರು. ತಾಲ್ಲೂಕು ಅಭಿವೃದ್ಧಿ ಮಂಡಲಿಗಳೂ ಕೂಡ ನಮ್ಮ ಹಾಗೆಯೇ ಚುನಾಯಿತರಾದ ಪ್ರತಿನಿಧಿಗಳಿಂದ ಕೂಡಿದ ಸಂಸ್ಥೆಗಳು, ನಮಗೆ ಯಾರು ಓಟು ಕೊಟ್ಟು ಕಳುಹಿಸಿದ್ದಾರೋ ಅದೇ ಜನ ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಗೂ ಓಟು ಕೊಟ್ಟು ಕಳುಹಿಸಿದ್ದಾರೆ, ಅವರನ್ನು ಅಲ್ಲಿರತಕ್ಕವರು ಪ್ರತಿನಿಧಿಸುತ್ತಾರೆ, ಆದ್ದರಿಂದ ಅವರಿಂದಲೇ ಆಗುವುದಿಲ್ಲ ಎಂದರೆ ಬಹಳ ದುಃಖದಿಂದ ಹೇಳಬೇಕಾಗುತ್ತದೆ ಮತ್ತೆ ಯಾವ ಸಂಸ್ಥೆ ಮೂಲಕ ತಾನೇ ಮಾಡುವುದಕ್ಕೆ ಸಾಧ್ಯವಾದೀತು ? ಆದ್ದರಿಂದ ತಾಲ್ಲೂಕು ಬೋರ್ಡು ಮುಖೇನವೇ ನಮ್ಮ ಕೆಲಸವನ್ನು ಮಾಡುವುದು ಅನುಕೂಲ, ಆ ಒಂದು ತೀರ್ಮಾನವನ್ನು ಮಾಡಿರುವುದು ಸೂಕ್ತವಾಗಿದೆ ಎಂದು ನನ್ನ ಅಭಿಪ್ರಾಯ.

ಮತ್ತೊಂದು ಮುಖ್ಯವಾದ ವಿಷಯ. ಶಾಶ್ವತವಾದ ಪರಿಹಾರ ಕಾಮಗಾರಿಗಳ ವಿಷಯದಲ್ಲಿ ಸರಿಯಾದ ಯೋಜನೆಗಳನ್ನು ಸರಕಾರ ಮಾಡಿಲ್ಲ ಎಂದು ದುಃಖದಿಂದ ಹೇಳಬೇಕಾಗಿದೆ. ಹಿಂದೆ ಏಳೆಂಟು ವರ್ಷಗಳ ಕೆಳಗೆ ತಾಲ್ಲೂಕು ಮತ್ತು ಸಬ್‌ಡಿವಿಜನ್ ಮಟ್ಟದಲ್ಲಿ ಯೋಜನೆ ಮಾಡಿ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳಬೇಕೆಂದು ತೀರ್ಮಾನವಾಯಿತು. ರಾಜ್ಯ ಸರಕಾರ ಎಲ್ಲಾ ಡಿವಿಜನ್ನುಗಳ ಅಂಕಿ ಅಂಶವನ್ನು ಸಂಗ್ರಹ ಮಾಡಿ 48 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಕಳಿಸಿತ್ತು. ಇದನ್ನು ಮತ್ತೆ ಮಾಡಬೇಕು.

ಇನ್ನೊಂದು ಮುಖ್ಯವಾದ ವಿಷಯ ವಿದ್ಯುಚ್ಛಕ್ತಿ ಬೋರ್ಡಿಗೆ ಸಂಬಂಧಪಟ್ಟಿದೆ. ಆ ಬೋರ್ಡು ಒಂದು ಕಮರ್ಷಿಯಲ್ ಕನ್‌ಸರ್ನ್ ಇದ್ದ ಹಾಗಿದೆ. ಯಾವ ಕೆಲಸವನ್ನು ಕೈಕೊಳ್ಳಬೇಕಾದರೂ ಅದು ಲಾಭ ಬಾರದಿದ್ದರೆ ತೆಗೆದುಕೊಳ್ಳುವುದಿಲ್ಲ. ಆದುದರಿಂದ ಸರಕಾರವೇ ವಿದ್ಯುಚ್ಛಕ್ತಿ ಇಲಾಖೆಯನ್ನು ವಹಿಸಿಕೊಂಡು ನಡೆಸಿದರೆ ಅನುಕೂಲವಾಗುತ್ತದೆ. ಈ ಬೋರ್ಡು ಯಾವ ಕೆಲಸ ಮಾಡಬೇಕಾದರೂ ಹಣ ಇಲ್ಲ, ಲಾಭವಿಲ್ಲ ಎಂದು ಹೇಳುವುದು. ಈ ದಿವಸ ಇರುವ ಕ್ಷಾಮ ಪರಿಸ್ಥಿತಿಯಲ್ಲಿ ರೈತರಿಗೆ ಅನುಕೂಲವಾಗಲಿ ಎಂದು ಹಣದ ವಿಚಾರದಲ್ಲಿ ಯೋಚನೆ ಮಾಡದೆ ಜನರಿಗೆ ವಿದ್ಯುಚ್ಛಕ್ತಿ ಬೋರ್ಡು ಬೇಕಾದ ಸೌಲಭ್ಯ ಒದಗಿಸಬೇಕು. ಒಂದೊಂದು ತಾಲ್ಲೂಕ್‌ನಲ್ಲಿ ಪಂಪು ಸೆಟ್ಟುಗಳಿಗೆ 200-300 ಅರ್ಜಿಗಳು ಬಂದು, ಅವುಗಳಿಗೆ ಗಮನ ಕೊಡದಿರುವುದರಿಂದ ಹಾಗೆಯೇ ಉಳಿದಿವೆ. ಅದನ್ನು ಗಮನಿಸಿ ಯಾರು ಪಂಪುಸೆಟ್ಟು ಕೇಳುತ್ತಾರೋ ಅವರಿಗೆಲ್ಲಾ ಕೊಡುವಂತೆ ಆದೇಶ ನೀಡಬೇಕು.

ಮತ್ತೊಂದು ವಿಷಯವೇನೆಂದರೆ ಇಂದು ನಮ್ಮ ದೇಶದಲ್ಲಿ ಒಂದು ದೊಡ್ಡ ಸಮಸ್ಯೆ ಇದೆ. ಅದು ಬಾವಿ ತೋಡುವುದಕ್ಕೆ ಸಂಬಂಧಪಟ್ಟದ್ದು. ಓಪನ್ ವೆಲ್ಸ್ ನಿರ್ಮಿಸುವುದು ಕಷ್ಟ. ಆದುದರಿಂದ ಜಿಯಲಾಜಿಕಲ್ ಇಲಾಖೆಯ ಮೂಲಕ ನಡೆದಿರುವ ಸರ್ವೆ ಅಂಕಿಅಂಶ ತರಿಸಿ ಟ್ಯೂಬ್ ವೆಲ್ಸ್ ಮತ್ತು ಬೋರ್‌ವೆಲ್ಸ್ ನಿರ್ಮಿಸಲು ಇರುವ ಯಂತ್ರಗಳನ್ನು ತರಿಸಿ ರೈತರಿಗೆ ಕೆಲಸ ಮಾಡಿ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ಇಂದು ಜನರಿಗೆ ಆಹಾರ ಬೇಕಾಗಿದೆ. ಈಗ ಬೆಳೆ ಸರಿಯಾಗಿ ಆಗದಿರುವುದರಿಂದ ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರೆ ಬಹಳ ಕಷ್ಟ ಬರಬಹುದು. ಇದರ ವಿಷಯದಲ್ಲಿ ಹೆಚ್ಚು ಗಮನಕೊಟ್ಟು ಬಫರ್ ಸ್ಟಾಕ್ ಇಡಲು ಪ್ರಯತ್ನ ಮಾಡಬೇಕು. ಗ್ರಾಮಾಂತರಗಳಲ್ಲಿ ಈಗ ಕೊಡುತ್ತಿರುವ ಮೈಲೋ ಸಾಲದು, ಅದು ಕೂಲಿಗಾರರಿಗೆ ಬೇಕು, ನಮ್ಮ ರಾಜ್ಯಕ್ಕೆ 10 ಸಾವಿರ ಟನ್ ಬೇಕೆಂದು ಕೇಳಿರುವುದು ಸಾಲದಿರುವುದರಿಂದ ಕೇಂದ್ರ ಸರಕಾರದದಿಂದ ಹೆಚ್ಚು ಪಡೆಯಬೇಕು. ಆಹಾರ ಪದಾರ್ಥಗಳಿಗೆ ರೈತರಿಗೆ ಕೊಡುವ ಬೆಲೆ ಸಾಲದು, ಕನ್‌ಸ್ಯೂಮರ್‌ಗೂ ಬೆಲೆ ಜಾಸ್ತಿಯಾಗಿದೆ. ಸೇಲ್ಸ್ ಟ್ಯಾಕ್ಸನ್ನು ಆಹಾರ ಪದಾರ್ಥಗಳ ಮೇಲೆ ಹಾಕುವುದರಿಂದ ಸುಮಾರು ಎರಡೂವರೆ ಕೋಟಿ ರೂಪಾಯಿ ಸರಕಾರಕ್ಕೆ ಬರುತ್ತದೆ. ರೈತರು ಹೆಚ್ಚು ಬೆಳೆಯಬೇಕಾದರೆ ಅವರಿಗೆ ಬೆಳೆದ ಪದಾರ್ಥಗಳಿಗೆ ಹೆಚ್ಚು ಬೆಲೆ ಕೊಡಬೇಕು ಮತ್ತು ಕನ್‌ಸ್ಯೂಮರ್‌ಸ್‌ಗೂ ಹೆಚ್ಚು ಟ್ಯಾಕ್ಸ್ ಮಾಡಬಾರದು.

ಸಾಯಿಲ್ ಕನ್‌ಸರ್ವೇಷನ್ ಕೆಲಸ ಬಹಳ ಮುಖ್ಯವಾದುದು. ಅದನ್ನು ಕಾರ್ಯಗತ ಮಾಡಲು ಸಿಬ್ಬಂದಿ ಸಾಲದು. ಈಗ ಮೂರು—ನಾಲ್ಕು ತಾಲ್ಲೂಕುಗಳಿಗೆ ಒಂದು ಸಬ್‌ಡಿವಿಜನ್ ಮಾಡಿದ್ದಾರೆ ಅದು ಸಾಲದು, ಪ್ರತಿಯೊಂದು ತಾಲ್ಲೂಕಿಗೂ ಒಂದು ಸಬ್ ಡಿವಿಜನ್ ಕೊಟ್ಟು ಸಿಬ್ಬಂದಿ ಹೆಚ್ಚು ಮಾಡಿ ತೀವ್ರವಾಗಿ ಕೆಲಸ ಮಾಡಬೇಕು. ಇದಕ್ಕೆ ಬೇಕಾದಷ್ಟು ಹಣವಿದೆ. ಆದರೆ ಖರ್ಚಾಗುತ್ತಿಲ್ಲ, ಕಾರ್ಯಗತ ಮಾಡುವುದು ನಿಧಾನವಾಗುತ್ತಿದೆ. ಆದುದರಿಂದ ಹೆಚ್ಚು ಸಿಬ್ಬಂದಿಯನ್ನು ನೇಮಿಸಿ ಕೆಲಸ ತ್ವರಿತವಾಗಿ ಮಾಡಬೇಕೆಂದು ಹೇಳುತ್ತೇನೆ.

ನನ್ನ ತಾಲ್ಲೂಕಿನ ವಿಚಾರ ಹೇಳುವುದಾದರೆ ಅಲ್ಲಿ ವಿದ್ಯುಚ್ಛಕ್ತಿ ಮತ್ತು ಪಂಪುಸೆಟ್ಟುಗಳು ಬೇಕಾಗಿವೆ. ಅಭಾವ ಪರಿಸ್ಥಿತಿ ಇರುವುದರಿಂದ ನೀರಾವರಿ ಬಾವಿಗಳಿಗೆಲ್ಲಾ ವಿದ್ಯುಚ್ಛಕ್ತಿ ಮತ್ತು ಪಂಪುಸೆಟ್ಟು ಒದಗಿಸಬೇಕು.

ನಮ್ಮ ತಾಲ್ಲೂಕಿನಲ್ಲಿ ರಾಗಿ ಬೆಳೆ ಪೂರ್ಣವಾಗಿ ಒಣಗಿಹೋಗಿದೆ, ಮುಂದೆ ಬಿತ್ತನೆಗೆ ಕೂಡ ರಾಗಿ ಒದಗುವಂತಿಲ್ಲ. ಈ ತಾಲ್ಲೂಕಿಗೆ ಕೊಡುವ 300 ಕ್ವಿಂಟಾಲ್ ಮೈಲೋ ಸಾಲದು. ಆದುದರಿಂದ ಅಭಾವ ಪರಿಸ್ಥಿತಿಯಿರುವ ಎಲ್ಲಾ ತಾಲ್ಲೂಕುಗಳಿಗೂ ಕೂಡ ಹೆಚ್ಚು ಆಹಾರ ಪದಾರ್ಥಗಳನ್ನು ಮತ್ತು ದನಗಳಿಗೆ ಮೇವನ್ನು ಒದಗಿಸಿ ಶಾಶ್ವತವಾದ ಪರಿಹಾರ ಕ್ರಮಗಳನ್ನು ಕೈಕೊಳ್ಳಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಸಭಾಪತಿಯವರೇ, ಕಳೆದ 50–60 ವರ್ಷಗಳಿಂದ ಕಾಣದ ಒಂದು ಭೀಕರ ಕ್ಷಾಮ ಪರಿಸ್ಥಿತಿಯ ದವಡೆಯಲ್ಲಿ ರಾಜ್ಯದ ಜನರು ಸಿಕ್ಕಿರುವ ಸಂದರ್ಭದಲ್ಲಿ ನಾವು ಈ ದಿನ ಇಲ್ಲಿ ಸೇರಿದ್ದೇವೆ. ಈ ಪರಿಸ್ಥಿತಿಯು ದಿನದಿನಕ್ಕೆ ಮತ್ತೂ ತೀವ್ರವಾದ ಮತ್ತು ಭೀಕರವಾದ ಸ್ವರೂಪವನ್ನು ತಾಳುತ್ತಿದೆ. ಕ್ಷಾಮ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯ ಮುಂದಿಟ್ಟಿರುವ ಹೇಳಿಕೆ ಒಂದು ದಿಟ್ಟತನದ ಹೇಳಿಕೆಯಾಗಿದೆ. ಅವರು ರಾಜ್ಯದಲ್ಲಿರುವ ವಾಸ್ತವ ಪರಿಸ್ಥಿತಿಯನ್ನು ಮರೆಮಾಚದೆ ಈ ಸಭೆಯ ಮುಂದಿಟ್ಟಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಹೇಳಿಕೆ ನೀಡುವಾಗ ಕೇಂದ್ರ ಸರ್ಕಾರದ ಅಧ್ಯಯನ ತಂಡವು ಜೂನ್ 20-21 ರಲ್ಲಿ ರಾಜ್ಯಕ್ಕೆ ಭೇಟಿ ಕೊಟ್ಟಾಗ ರಾಜ್ಯ ಸರ್ಕಾರ ಸುಮಾರು 8.3 ಕೋಟಿ ರೂಪಾಯಿಗಳನ್ನು ಕೇಳಿತ್ತು, ಆದರೆ 2.5 ಕೋಟಿ ಮಾತ್ರ ಕೊಡಲು ಕೇಂದ್ರ ಸರ್ಕಾರ ಒಪ್ಪಿದೆ ಎಂದು ತಿಳಿಸಿದ್ದಾರೆ. ಇದು 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂದು ಹೇಳುವಂತಿದೆ. ಅದು ಎರಡು ವಾರಕ್ಕೆ ಕೂಡ ಸಾಕಾಗುವುದಿಲ್ಲ. ಆದುದರಿಂದ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಲ್ಲಿ ತೀವ್ರವಾಗಿ ಒತ್ತಾಯ ಮಾಡಿ ಹೆಚ್ಚು ಪಡೆಯಬೇಕು. ಕನಿಷ್ಠ ಪಕ್ಷ 25 ಕೋಟಿಯಾದರೂ ಕೇಂದ್ರ ಕೊಡದಿದ್ದರೆ ಮಂತ್ರಿಮಂಡಲ ರಾಜೀನಾಮೆ ಕೊಡುವುವೆಂದು ತಿಳಿಸಬೇಕು. ಈ ಬಗ್ಗೆ ಒತ್ತಾಯಮಾಡುತ್ತೇನೆ. ಸದಸ್ಯರೂ ಕೂಡ ಅದರ ಜೊತೆಯಲ್ಲಿ ಒತ್ತಾಯಮಾಡಿ ಎಲ್ಲರೂ ಕೂಡ ರಾಜೀನಾಮೆ ಕೊಡಲು ತಯಾರಾಗಿದ್ದೇವೆಂದು ತಿಳಿಸುತ್ತೇವೆ. ಕೇಂದ್ರ ಸರ್ಕಾರದ ತಂಡ ರಾಜ್ಯಕ್ಕೆ ಭೇಟಿ ಕೊಟ್ಟು ಆಗಲೇ 3 ತಿಂಗಳಾಗಿದೆ, ಆಗಿನ ಪರಿಸ್ಥಿತಿಗೂ ಈಗಿರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅವರು ಭೇಟಿಕೊಟ್ಟಾಗ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಮಳೆ ಬರಬಹುದು, ಪರಿಸ್ಥಿತಿ ಸುಧಾರಿಸಬಹುದು ಎಂಬ ಆಸೆ ಇತ್ತು. ಆದರೆ ಸೆಪ್ಟೆಂಬರ್ ತಿಂಗಳು ಬಂದರೂ ಕೂಡ ಮಳೆ ಸರಿಯಾಗಿ ಬರಲಿಲ್ಲ, ಬರುವ ಸೂಚನೆಯೂ ಕಾಣಲಿಲ್ಲ. ಆದುದರಿಂದ ಕೇಂದ್ರ ಸರ್ಕಾರಕ್ಕೆ ಈ ಕೂಡಲೆ ಅವಶ್ಯಕವಾದರೆ

(ಶ್ರೀ ಪಿ. ವೆಂಕಟಗಿರಿಯಪ್ಪ)

ಇನ್ನೊಂದು ನಿಯೋಗವನ್ನು ಕಳಿಸಿ ಈಗಿನ ಪರಿಸ್ಥಿತಿ ನೋಡಿ ಕನಿಷ್ಠಪಕ್ಷ 25 ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕು, ಇಲ್ಲದಿದ್ದರೆ ನಾವು ರಾಜೀನಾಮೆ ಕೊಡುತ್ತೇವೆಂದು ಹೇಳಬೇಕು ಎಂದು ನಾನು ಒತ್ತಾಯಮಾಡುತ್ತೇನೆ.

4-00 P. M.

ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಕೃಷಿ ಕಾರ್ಮಿಕರು ಮತ್ತು ಸಣ್ಣ ಹಿಡುವಳಿದಾರರಲ್ಲಿ ಉದ್ಯೋಗಾವಕಾಶ ಬೇಕಾದವರ ಸಂಖ್ಯೆ 21.5 ಲಕ್ಷ ಎಂದು ಎರಡು ತಿಂಗಳ ಕೆಳಗೆ ಅಂದಾಜು ಮಾಡಿರುವುದಾಗಿ ತಿಳಿಸಿದ್ದಾರೆ. ಅವರೇ ಹೇಳುವ ರೀತಿಯಲ್ಲಿ 43 ಲಕ್ಷ ಜನ ಉದ್ಯೋಗಕ್ಕೆ ಹಾತೊರೆಯುತ್ತಿರುವ ಸಣ್ಣ ಹಿಡುವಳಿದಾರರು ಮತ್ತು ವ್ಯವಸಾಯ ಕೂಲಿಗಾರರಿದ್ದಾರೆ. ಸರ್ಕಾರದ ಲೆಕ್ಕದ ಪ್ರಕಾರವೇ 43 ಲಕ್ಷ ಜನರಿದ್ದರೆ ಈಗಿನ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚು ಇರಬಹುದು. ಕನಿಷ್ಠ ಪಕ್ಷ 50 ಲಕ್ಷ ಜನಗಳಿಗಾದರೂ ರಾಜ್ಯದಲ್ಲಿ ಉದ್ಯೋಗ ದೊರಕಿಸಿಕೊಡದೆ ವಿಧಿ ಇಲ್ಲವಾಗಿದೆ. ಹಳ್ಳಿಗಳಲ್ಲಿ ಮುಖ್ಯವಾಗಿ ವ್ಯವಸಾಯ ಕೂಲಿಗಾರರಾಗಿರುವವರು ಹರಿಜನರು. ಅವರ ಪರಿಸ್ಥಿತಿ ತೀರ ಚಿಂತಾಜನಕವಾಗಿದೆ. ನಾನು ಶಾಸನ ಸಭೆಗೆ ಬರುವುದಕ್ಕೆ ಮೊದಲು ಕೆಲವು ಹಳ್ಳಿಗಳಿಗೆ ಹೋಗಿದ್ದೆ. ಹಳ್ಳಿಗಳಲ್ಲಿ ಏನೂ ಕೆಲಸವಿಲ್ಲದೆ, ಅನ್ನವಿಲ್ಲದೆ, ಮರಗಳ ಕೆಳಗೆ ಜನ ಕೂತಿರತಕ್ಕ ದೃಶ್ಯವನ್ನು ನೋಡಿದರೆ, ಈಗಲೇ ಪರಿಸ್ಥಿತಿ ಈ ಪ್ರಕಾರವಾದರೆ ಇನ್ನೂ ಒಂದೆರಡು ತಿಂಗಳಲ್ಲಿ ಎಂಥ ಪರಿಸ್ಥಿತಿಯನ್ನು ಹಳ್ಳಿಗಳಲ್ಲಿ ಕಾಣಬಹುದು ಎಂದು ಯೋಚನೆ ಮಾಡುವುದಕ್ಕೇ ಭಯವಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಪೂರ್ಣ ಒತ್ತಾಯ ಮಾಡಿ ಹೆಚ್ಚು ಹಣವನ್ನು ಪಡೆಯಬೇಕು.

ಕ್ಷಾಮ ಪರಿಹಾರಕ್ಕಾಗಿ, ಕ್ಷಾಮ ಬಂದಾಗ ಏನಾದರೂ ಒಂದು ಕಾರ್ಯಕ್ರಮ ಮಾಡುವುದು ಮತ್ತು ಮಳೆ ಬಂದರೆ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಅದನ್ನು ಹಿಂದಕ್ಕೆ ತಳ್ಳುವುದು ನಮ್ಮ ಸರ್ಕಾರದ ಪದ್ಧತಿಯಾಗಿದೆ. ಈಗ್ಗೆ ಮೂರು ವರ್ಷಗಳ ಹಿಂದೆ ಕಂದಾಯ ಮಂತ್ರಿಗಳಾಗಿದ್ದ ಮಾನ್ಯ ಕೃಷ್ಣಪ್ಪನವರು 280 ಕೋಟಿ ರೂಪಾಯಿಗಳ ಒಂದು ಬೃಹತ್ ಯೋಜನೆಯನ್ನು ಸರ್ಕಾರ ತಯಾರಿಸಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ; ಕೇಂದ್ರ ಸರ್ಕಾರದಿಂದ ಒಪ್ಪಿಗೆ ಬಂದರೆ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಕೈಗೊಂಡು ಇನ್ನು ಮುಂದೆ ಯಾವುದೇ ಭಾಗದ ಜನರು ಕ್ಷಾಮಕ್ಕೆ ತುತ್ತಾಗದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆಂದು ಈ ಸಭೆಗೆ ತಿಳಿಸಿದರು. ಅವರು ಈಗ ಮಂತ್ರಿಗಳಾಗಿಲ್ಲ. ಅವರು ಹೋದಮೇಲೆ ಈ ಯೋಜನೆ ಮಾಯವಾಯಿತೋ ಅಥವಾ ಮೊದಲೇ ಮಾಯವಾಗಿತ್ತೋ ಗೊತ್ತಿಲ್ಲ. ಆ ಬೃಹತ್ ಯೋಜನೆ ಏನಾಗಿದೆ ಎಂದು ಇದುವರೆಗೂ ಯಾರಿಗೂಗೊತ್ತಿಲ್ಲ. ಮನೆಗೆ ಬೆಂಕಿ ಬಿದ್ದಾಗ ನೀರಿಗಾಗಿ ಬಾವಿ ತೋಡತಕ್ಕ ನೀತಿಯನ್ನು ಸರ್ಕಾರ ಕೈ ಬಿಡಬೇಕು. ಇಂಥ ಕ್ಷಾಮ ಪರಿಸ್ಥಿತಿ ಆಗಾಗ ಒದಗುತ್ತಿರುವುದರಿಂದ ರಾಜ್ಯದಲ್ಲಿ ಒಂದು ಕ್ಷಾಮ ಪರಿಹಾರ ಕಮಿಷನ್ ನೇಮಕ ಮಾಡಬೇಕು ಮತ್ತು ಅದಕ್ಕೆ ರಾಜ್ಯದ ಆದಾಯದಲ್ಲಿ ಕನಿಷ್ಠಪಕ್ಷ 5—10 ಪರ್ಸೆಂಟ್ ಹಣವನ್ನು ಪ್ರತಿ ವರ್ಷವೂ ಮೀಸಲಾಗಿಡಬೇಕು. ಕೇಂದ್ರದಲ್ಲಿ ಕೂಡ ಈ ರೀತಿಯ ವ್ಯವಸ್ಥೆ ಇರಬೇಕು. ಇದರಿಂದ ದೇಶದಲ್ಲಿ ಕಷ್ಟ ಪರಿಸ್ಥಿತಿ ಬಂದಾಗ ಹಣಕ್ಕಾಗಿ ಬೇರೆಯವರನ್ನು ಕಾದು ಕುಳಿತಿರತಕ್ಕ ಅವಕಾಶವಿಲ್ಲದೆ ಇರುತ್ತದೆ.

ಕ್ಷಾಮಡಾಮರಗಳಿಗೆ ತುತ್ತಾಗತಕ್ಕುದನ್ನು ಹೋಗಲಾಡಿಸುವುದಕ್ಕೆ ಏನೂ ಮಾರ್ಗವಿಲ್ಲ. ಅದನ್ನು ಅನುಭವಿಸಪೆ ವಿಧಿ ಇಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ದೇವರು ಮಳೆ ಕೊಡಬೇಕು, ಎಲ್ಲ ಸರಿಹೋಗಬೇಕು ಎಂದು ಮಂತ್ರಿಗಳು ಕೆಲವರು ಸಹಿತ ಹೇಳುತ್ತಾರೆ. ಈಗಿನ ಆಧುನಿಕ ಯುಗದಲ್ಲಿ, ವೈಜ್ಞಾನಿಕ ಪ್ರಪಂಚದಲ್ಲಿ ಆ ರೀತಿ ಹೇಳುವುದನ್ನು ಕೇಳಿ ಆಶ್ಚರ್ಯವಾಗುತ್ತದೆ. ಅಮೇರಿಕಾ ದೇಶದಲ್ಲಿ ಟೆಕ್ಸಾಸ್ ಪ್ರಾಂತದಲ್ಲಿ ವರ್ಷಕ್ಕೆ ಕೇವಲ 7 ಅಂಗುಲ ಮಳೆಯಾಗುತ್ತದೆ, ಅದು ಈಗ ಬಹಳ ಸಂಪದ್ಯುಕ್ತವಾದ ವ್ಯವಸಾಯದಲ್ಲಿ ಅಭಿವೃದ್ಧಿ ಪಡೆದಿರತಕ್ಕ ಒಂದು ರಾಜ್ಯವಾಗಿದೆ. ಇದಕ್ಕೆ ಕಾರಣವೇನು ಎಂದರೆ ಭೂಮಿಯಲ್ಲಿರತಕ್ಕ ಜಲವನ್ನು ಮೇಲಕ್ಕೆ ತರುವ ವ್ಯವಸ್ಥೆ ಮಾಡಿ, ಅಲ್ಲಿ ಈಗ ನೀರಿನ ಅಭಾವವಿಲ್ಲದೆ ಆ ರಾಜ್ಯ ಸಂಪದ್ಯುಕ್ತವಾಗಿ, ವ್ಯವಸಾಯದಲ್ಲಿ ಅಭಿವೃದ್ಧಿ ಆಗಿರತಕ್ಕ ಪ್ರದೇಶವಾಗಿದೆ. ಕ್ಷಾಮಡಾಮರಗಳಿಗೆ ಈಡಾಗಿರತಕ್ಕ, ಮುಖ್ಯವಾಗಿ ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು, ಬಿದರೆ ಮತ್ತು ಇನ್ನೂ ಕೆಲವು ಜಿಲ್ಲೆಗಳಲ್ಲಿ ಈಗ ಇರುವ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಬಹುತೇಕ ಪ್ರದೇಶಗಳಲ್ಲಿ ಭೂಮಿಯ ಒಳಗೆ ಇರುವ ನೀರನ್ನು ತೆಗೆದು ವ್ಯವಸಾಯ ಮಾಡುವ ವ್ಯವಸ್ಥೆಯನ್ನು ಮಾಡಿದರೆ ಖಂಡಿತ

ವಾಗಿಯೂ ಮಳೆ ಬಾರದೆ ಇದ್ದರೂ ಕೂಡ ಜನ ತೊಂದರೆ ಇಲ್ಲದೆ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಕೆಲವು ಕಡೆ ಬೋರ್‌ವೆಲ್ ಹಾಕಿ ಅದರಿಂದ ಯಥೇಚ್ಛವಾಗಿ ಕೆಲವಾರು ಬಾವಿಗಳಲ್ಲಿ ನೀರು ಬಂದಿದೆ. ಇದಕ್ಕಾಗಿ ಹೆಚ್ಚು ಬೋರ್ ಮಾಡುವ ಯಂತ್ರಗಳನ್ನು ತರಿಸಬೇಕು. ಬ್ಲಾಸ್ಟರ್ ಯಂತ್ರಗಳು ಮತ್ತು ಬೋರವೆಲ್ ಯಂತ್ರಗಳನ್ನು ತರಿಸುವುದಕ್ಕಾಗಿ 23 ಲಕ್ಷ ರೂಪಾಯಿಗಳನ್ನು ಒದಗಿಸಿರುವುದಾಗಿ ಹೇಳಿದ್ದಾರೆ. ಇದಕ್ಕಾಗಿ 50 ಲಕ್ಷ ರೂಪಾಯಿ ಖರ್ಚಾದರೂ ಪರವಾ ಇಲ್ಲ, ಆ ಯಂತ್ರಗಳನ್ನು ತರಿಸುವ ವ್ಯವಸ್ಥೆ ಮಾಡಬೇಕು. ಸಂಬಂಧ ಪಟ್ಟ ಫೈನಾನ್ಷಿಯಲ್ ರೆವೆನ್ಯೂ ಸೆಕ್ರೆಟೇರಿಯಟ್, ಹಣಕಾಸು ಇಲಾಖೆ ಇಲ್ಲೆಲ್ಲ ಸುತ್ತಿಕೊಂಡು ಅದರ ಬಗ್ಗೆ ಒಂದು ಆಜ್ಞೆ ಹೊರಬೀಳಬೇಕಾದರೆ ಬಹಳ ನಿಧಾನವಾಗಬಹುದು. ಅದಕ್ಕೆ ಅವಕಾಶವಿಲ್ಲದಂತೆ ಯಂತ್ರಗಳನ್ನು ಬೇಗ ತರಿಸಿ, ಬಾವಿಗಳಲ್ಲಿ ಈಗಲೇ ನೀರಿಲ್ಲದೆ ಇರುವುದರಿಂದ ಬೋರ್‌ವೆಲ್ ಮುಖಾಂತರ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಸರ್ಕಾರ ಖರ್ಚು ಮಾಡುತ್ತಿರುವ ಹಣದಲ್ಲಿ ಕಾಲು ಭಾಗ ಸಹಿತ ಕಷ್ಟದಲ್ಲಿರುವ ರೈತರಿಗೆ ಸಿಕ್ಕುತ್ತಿಲ್ಲ. ಮುಕ್ಕಾಲು ಭಾಗದಷ್ಟು ಹಣ ದಳ್ಳಾಳಿಗಳಿಗೆ, ಮಧ್ಯವರ್ತಿ ಜನಗಳಿಗೆ ಸೇರುತ್ತಿದೆ. ಬಹುಕಾಲದಿಂದ ಕ್ಷಾಮ ಪರಿಹಾರ ಕಾರ್ಯಗಳು ರೆವೆನ್ಯೂ ಇಲಾಖೆಯಿಂದ ನಡೆಸಲ್ಪಡುತ್ತಿದ್ದುವು. ಈ ಸಲ ಅದನ್ನು ತಾಲ್ಲೂಕು ಬೋರ್ಡಗಳಿಗೆ ಯಾವ ಕಾರಣದಿಂದ ಕೊಟ್ಟಿದ್ದಾರೆನ್ನುವುದು ಗೊತ್ತಾಗುವುದಿಲ್ಲ. ತಾಲ್ಲೂಕು ಬೋರ್ಡ್ ಚುನಾವಣೆಗಳು ಬಹಳ ಹತ್ತಿರ ಬಂದಿವೆ, ಇದಕ್ಕೆ ತಮ್ಮ ದಳ್ಳಾಳಿಗಳಿಗೆ, ಉಮೇದುವಾರರಿಗೆ ಹಣ ಸಂಪಾದನೆ ಮಾಡುವುದಕ್ಕೆ ಅವಕಾಶವಾಗಲಿ ಎಂದು ತಾಲ್ಲೂಕು ಬೋರ್ಡಗಳಿಗೆ ಕೊಟ್ಟಿದ್ದಾರೆಂದು ನನಗಾದರೂ ಕಾಣಿಸುತ್ತದೆ. ರೆವೆನ್ಯೂ ಮಂತ್ರಿಗಳು ವೈಯಕ್ತಿಕವಾಗಿ ಬಹಳ ಒಳ್ಳೆಯವರು ಮತ್ತು ನಿಗರ್ವಿಗಳು ಆಗಿ ಕಾಣುತ್ತಾರೆ. ಆದರೆ ತಮ್ಮ ಇಲಾಖೆಯಲ್ಲಿದ್ದ ಕೆಲಸವನ್ನು ತಾಲ್ಲೂಕು ಬೋರ್ಡ್‌ಗಳಿಗೆ, ಅದೂ ಚುನಾವಣೆಗಳು ನಡೆಯಬೇಕಾದ ಸಮಯದಲ್ಲಿ, ಕೊಟ್ಟಿರುವುದರಿಂದ ರಾಜ್ಯಕ್ಕೆ ಅನ್ಯಾಯ ಮಾಡಿದ್ದಾರೆ ಎಂದು ಹೇಳದೆ ವಿಧಿ ಇಲ್ಲ.

ದೇಶದಲ್ಲಿ ಭೀಕರ ಕ್ಷಾಮ ಪರಿಸ್ಥಿತಿ ಇರುವುದರಿಂದ ತಾಲ್ಲೂಕು ಬೋರ್ಡ್ ಚುನಾವಣೆಗಳನ್ನು ಮುಂದೂಡಿ ಈಗಿರುವ ತಾಲ್ಲೂಕು ಬೋರ್ಡ್‌ಗಳನ್ನು ಮುಂದುವರಿಸಲು ಸರ್ಕಾರ ಯೋಚನೆ ಮಾಡುತ್ತಿದೆಯೆಂದು ತಿಳಿದು ಬಂದಿದೆ. ಚುನಾವಣೆಗಳನ್ನು ಮುಂದೆ ಹಾಕುವುದರಲ್ಲಿ ಅಭ್ಯಂತರವಿಲ್ಲ. ಆದರೆ ಯಾವುದೇ ಕಾರಣದಿಂದ, ನಾಲ್ಕು ವರ್ಷ ಅವಧಿ ಇದ್ದ ತಾಲ್ಲೂಕು ಬೋರ್ಡ್‌ಗಳಿಗೆ 8 ವರ್ಷಗಳವರೆಗೂ ಈಗಾಗಲೇ ಮುಂದುವರಿಸಿಕೊಂಡು ಬಂದಿರುವುದರಿಂದ, ಅವುಗಳನ್ನು ಇನ್ನು ಮುಂದುವರಿಸಬಾರದು. ಚುನಾವಣೆಗಳನ್ನು ಮುಂದೂಡಬೇಕು ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ ಈಗಿರುವ ತಾಲ್ಲೂಕು ಬೋರ್ಡ್‌ಗಳನ್ನು ರದ್ದುಮಾಡಿ ಅದರ ಸ್ಥಾನದಲ್ಲಿ ಆಡಳಿತಾಧಿಕಾರಿಗಳನ್ನು ನೇಮಕಮಾಡಿ ಅವರ ಮುಖಾಂತರ ತಾಲ್ಲೂಕು ಬೋರ್ಡ್ ಆಡಳಿತ ಮತ್ತು ಕೆಲಸಕಾರ್ಯಗಳನ್ನು ನಡೆಸಬಹುದು.

ಹಣವನ್ನು ಖರ್ಚು ಮಾಡುವಾಗ ಪ್ರಯೋಜನವಿಲ್ಲದ ಕೆಲಸಗಳಿಗೆ ಖರ್ಚು ಮಾಡಬಾರದು. ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿರುವ ಪ್ರಕಾರ ಒಂದೊಂದು ತಾಲ್ಲೂಕಿಗೆ 10—10 ಬಾವಿಗಳನ್ನು ತೋಡಿದರೆ ಸಾಲದು, ಇನ್ನೂ ಹೆಚ್ಚು ಬಾವಿಗಳ ಕೆಲಸವಾಗಬೇಕು. ಕೆರೆಗಳಲ್ಲಿ ಹೂಳು ತೆಗೆಸುವುದು, ಕಾಲುವೆಗಳನ್ನು ಅಗೆಸುವುದು ಇಂಥ ಕೆಲಸಗಳನ್ನು ಮಾಡುತ್ತೇವೆಂದು ಹೇಳುವುದು ಶುದ್ಧ ಮೋಸ. ಇರತಕ್ಕ ಕಾಲುವೆಗಳ ಮಣ್ಣನ್ನು ಆ ಕಡೆ, ಈ ಕಡೆ ಹಾಕಿ ಮಣ್ಣು ಕೆಲಸ ಮಾಡಿರುವುದಾಗಿ ಸಾವಿರಾರು ರೂಪಾಯಿ ಖರ್ಚು ತೋರಿಸುವುದಲ್ಲದೆ, ಇಂಥ ಇತರ ಕೆಲಸಗಳನ್ನು ಮಾಡಿರುವುದಾಗಿ ತೋರಿಸಿ ಸಾವಿರಾರು ರೂಪಾಯಿಗಳನ್ನು ಮಧ್ಯವರ್ತಿ ಜನರು ಸಂಪಾದನೆ ಮಾಡುತ್ತಿದ್ದಾರೆ. ಇಂಥ ಕೆಲಸಗಳು ಕೋಲಾರ ಜಿಲ್ಲೆಯಲ್ಲಿ ಲಂಗು ಲಗಾಮಿಲ್ಲದೆ ನಡೆಯುತ್ತಿವೆ. ನನಗೆ ಬಂದಿರುವ ಸಮಾಚಾರದ ಪ್ರಕಾರ ಕೋಲಾರ ಜಿಲ್ಲೆಯಿಂದ ಬಂದಿರುವ ರಾಜ್ಯ ಮಂತ್ರಿಗಳಾದ ಎಚ್. ಸಿ. ಲಿಂಗಾರೆಡ್ಡಿ ಅವರ ಪೂರ್ಣ ಬೆಂಬಲ ಕೂಡ ಇದಕ್ಕೆ ಇದೆ ಎಂದು ಗೊತ್ತಾಗಿದೆ. ಆದುದರಿಂದ ತಾಲ್ಲೂಕು ಬೋರ್ಡ್‌ಗಳನ್ನು ಯಾವ ಕಾರಣದಿಂದಲೂ ಮುಂದುವರಿಸಬಾರದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನೀರಾವರಿ ಬಾವಿಗಳಿಗೆ ಕೊಡುವ ಹಣದಲ್ಲಿ ಮುಕ್ಕಾಲು ಭಾಗವನ್ನು ಸಾಲವಾಗಿಯೂ, ಕಾಲು ಭಾಗವನ್ನು ಸಹಾಯ ಧನ ಎಂಬುದಾಗಿಯೂ ಪರಿಗಣಿಸಬೇಕು ಎಂಬುದಾಗಿ ಹೇಳಿದ್ದಾರೆ. ಇದು ಒಳ್ಳೆಯ ಉದ್ದೇಶ. ಆದರೆ ಯಾವ ಕಾರಣದಿಂದಲೂ ಬಾವಿಗಳಿಗಾಗಿ ಕೊಡುವ ಹಣವನ್ನು ಕಾಲುವೆಗಳ ಕೆಲಸಕ್ಕೆ, ಕೆರೆಗಳ ಹೂಳು ತೆಗೆಸುವುದಕ್ಕೆ ಅಥವಾ ಇಂಥ ಬೇರೆ ಕೆಲಸಗಳಿಗೆ ಖರ್ಚು ಮಾಡಬಾರದೆಂದು ತಿಳಿಸುತ್ತೇನೆ.

(ಶ್ರೀ ಪಿ. ವೆಂಕಟಗಿರಿಯಪ್ಪ)

ಭೂ ಅಡಮಾನ ಬ್ಯಾಂಕುಗಳಿಗೆ ಹಿಂದಿನ ವರ್ಷಗಳಲ್ಲಿ ಕೊಟ್ಟ ಹಣದಲ್ಲಿ ಕಾಲು ಭಾಗವನ್ನು ಕೂಡ ಈ ವರ್ಷ ಕೊಟ್ಟಿಲ್ಲ. ಈ ವರ್ಷ ಒಂದೊಂದು ತಾಲ್ಲೂಕಿಗೆ ನಾಲ್ಕೈದು ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದಾರೆ.

ಕ್ಷಾಮಪರಿಹಾರ ಕೆಲಸಗಳಿಗಾಗಿ ಖರ್ಚು ಮಾಡುವ ಹಣವನ್ನು ರಾಜಕೀಯಕ್ಕೆ ಉಪಯೋಗಿಸಿ ಕೊಳ್ಳಬೇಡಿ. ತಾಲ್ಲೂಕು ಬೋರ್ಡ್ ಮುಖಾಂತರ ಏನು ಹಣವನ್ನು ಖರ್ಚು ಮಾಡಬೇಕೆಂದಿದ್ದೀರೋ ಅದನ್ನು ತಾಲ್ಲೂಕು ಬೋರ್ಡ್‌ಗಳಿಗೆ ಕೊಡಬೇಡಿ. ಬಾವಿಗಳನ್ನು ತೋಡಿಸಲು ಸಾಲ ಕೊಟ್ಟರೆ ಅದರಿಂದ ಅನುಕೂಲವಾಗುತ್ತದೆ. ಹಣವನ್ನು ವಿತರಣೆ ಮಾಡುವಾಗ ಒಂದೇ ಪ್ರದೇಶಕ್ಕೆ ಕೊಟ್ಟರೆ ಕ್ಷಾಮ ಪರಿಹಾರವಾಗುವುದಿಲ್ಲ. ಯಾವ ಪ್ರದೇಶದಲ್ಲಿ ಗಂಡಾಂತರ ಭೀಕರ ಕ್ಷಾಮ ಇದೆಯೋ ಆ ಪ್ರದೇಶಗಳಿಗೆಲ್ಲಾ ಒಂದೇ ಸಮನಾಗಿ ಹಂಚಿದರೆ ಒಳ್ಳೆಯದು. ರಾಜಕೀಯದ ದುರುದ್ದೇಶಕ್ಕೆ ಅವಸ್ಪದ ಕೊಡಬೇಡಿ. ಈ ಹಣವನ್ನು ದುರುಪಯೋಗಪಡಿಸಬೇಡಿ, ಪೋಲು ಮಾಡಬೇಡಿ. ಎಲ್ಲಾ ಜಿಲ್ಲೆಗಳಿಗೂ ಬಾವಿ ತೋಡಿಸಲು ಈ ಹಣ ಕೊಟ್ಟರೆ ಒಂದು ಶಾಶ್ವತವಾದ ಪರಿಹಾರ ಆಗುವುದಲ್ಲದೆ ಜನಗಳಿಗೆ ವೃತ್ತಿಯೂ ಸಿಕ್ಕಿದಂತಾಗುತ್ತದೆ.

ಇನ್ನೊಂದು ವಿಚಾರವನ್ನು ತಮ್ಮ ಮುಖಾಂತರ ಮಂತ್ರಿಗಳಲ್ಲಿ ತಿಳಿಸಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಮಂತ್ರಿಗಳು ಪ್ರವಾಸ ಬಂದಾಗ ಅವರಿಗೆ ಹೂವಿನ ಹಾರ ಹಾಕುವುದು, ಟೀಪಾರ್ಟಿಗಳನ್ನು ಮಾಡುವುದು ಡಿನ್ನರ್ ಮುಂತಾದವನ್ನು ಮಾಡುತ್ತಾರೆ. ಕ್ಷಾಮ ಪರಿಸ್ಥಿತಿ ಇರುವ ತನಕ ಮಂತ್ರಿಗಳು ಇದನ್ನೆಲ್ಲಾ ಒಪ್ಪಬಾರದು. ಈರೀತಿ ನಡೆದರೆ ನಾನು ನನ್ನ ಸ್ನೇಹಿತರು ಹೋಗಿ ಬಾಗಿಲಿನಲ್ಲಿ ಮಲಗಿಕೊಂಡು ಮಂತ್ರಿಗಳಿಗೆ ಒಳಗೆ ಹೋಗಲು ಬಿಡುವುದಿಲ್ಲ. ಈ ಪರಿಸ್ಥಿತಿಗೆ ಅವಕಾಶ ಕೊಡಬೇಡಿ. ಈ ಬಗ್ಗೆ ಮುಖ್ಯ ಮಂತ್ರಿಗಳೂ ಕೂಡ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಜನಗಳಿಗೆ ಈಗ ತಿನ್ನಲಿಕ್ಕೆ ಇಲ್ಲದೆ, ಜೀವನ ಮಾಡಲಿಕ್ಕೆ ಕಷ್ಟಪರಿಸ್ಥಿತಿ ಇರುವಾಗ ಮಂತ್ರಿಗಳಿಗೆ ಹೂವಿನ ಹಾರ ಹಾಕುವುದು, ಟೀಪಾರ್ಟಿ, ಡಿನ್ನರ್, ಭಕ್ಷ್ಯಭೋಜನ ಇತ್ಯಾದಿಗಳಿಗೆ ಖರ್ಚು ಮಾಡತಕ್ಕಂಥ ಹಣವನ್ನು ಉಳಿಸಿ. ಇದರಿಂದ ಉಳಿದ ಹಣವನ್ನು ಕ್ಷಾಮಪರಿಹಾರ ನಿವಾರಣೆಗೆ ಉಪಯೋಗಿಸಬೇಕು ಎಂದು ಹೇಳಿ ನನಗೆ ಮಾತನಾಡಲು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮಾನ್ಯ ಸಭಾಪತಿಗಳೇ, ಮುಖ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಕ್ಷಾಮಪರಿಹಾರ ಪರಿಸ್ಥಿತಿ ವಿಚಾರದ ಹೇಳಿಕೆಯನ್ನು ಓದಿದ್ದೇನೆ. ಕೇಂದ್ರ ಸರ್ಕಾರದಿಂದ ಇಲ್ಲಿಗೆ ಬಂದಂಥ ಒಂದು ಟೀಂ ಮುಂದೆ ಸರ್ಕಾರದ ವತಿಯಿಂದ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ನಮ್ಮ ರಾಜ್ಯದಲ್ಲಿರತಕ್ಕಂಥ ಕ್ಷಾಮದ ಪರಿಸ್ಥಿತಿಯ ವಿವರಗಳು, ಸರ್ಕಾರ ಕೈಗೊಂಡಿರತಕ್ಕಂಥ ಕೆಲಸಕಾರ್ಯಗಳು, ಇನ್ನೂ ಹಣ ಹಾಕಿ ಮಾಡಬೇಕಾದಂಥ ಕೆಲಸಕಾರ್ಯಗಳು, ಕೇಂದ್ರ ಸರ್ಕಾರದಿಂದ ಬಂದಂಥ ಹಣ ಸಹಾಯದಲ್ಲಿ ಯಾವ ಪ್ರಮಾಣದಲ್ಲಿ ಯಾವು ಯಾವುದಕ್ಕೆ ಒದಗಿಸಬೇಕು ಎನ್ನುವ ಒಂದು ಚಿತ್ರ ಕೊಟ್ಟಿದ್ದಾರೆ. ಸರ್ಕಾರದವರು ತಮ್ಮ ಕೈಯಲ್ಲಾದಷ್ಟು ಪ್ರಯತ್ನ ಮಾಡುತ್ತಾ ಇದ್ದಾರೆ. ಕ್ಷಾಮ ನಿವಾರಣೆ ಮಾಡುವುದಕ್ಕೆ, ಜನರ ಕಷ್ಟ ಪರಿಹಾರ ಮಾಡುವುದಕ್ಕೆ ಏನು ಕೆಲಸಗಳನ್ನು ಕೈಗೊಳ್ಳಬೇಕೋ ಅವೆಲ್ಲವನ್ನೂ ಮಾಡಿದ್ದಾರೆ. ಇದಕ್ಕಿಂತಲೂ ಹೆಚ್ಚು ಮಾಡಲು ಸಾಧ್ಯವಿಲ್ಲ. ಹೆಚ್ಚು ಪರಿಣಾಮಕಾರಿಯಾಗುವ ರೀತಿಯಲ್ಲಿ ಹೆಚ್ಚು ಹಣ ಖರ್ಚು ಮಾಡಲಿಕ್ಕೆ ನಾವೂ ಪ್ರಯತ್ನ ಮಾಡಬೇಕಾದ್ದು ಅಗತ್ಯ ಇದೆ. ಇನ್ನೂ ಹೆಚ್ಚು ಹಣ ಖರ್ಚು ಮಾಡಬೇಕು ಎಂದರೆ ನಮ್ಮ ಸರ್ಕಾರದಲ್ಲಿ ಈಗ ಸಾಕಷ್ಟು ಹಣ ಇಲ್ಲ. ಕೇಂದ್ರ ಸರ್ಕಾರವನ್ನು ಹಣ ಬೇಕು ಎಂದು ಕೇಳುತ್ತಾ ಇದ್ದೇವೆ. ಹಿಂದೆ ಇದ್ದ ಮುಖ್ಯ ಮಂತ್ರಿಗಳು 10 ಕೋಟಿ ರೂಪಾಯಿಗಳು ಬೇಕು ಎಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದರು. ನಮಗೆ 10 ಕೋಟಿ ರೂಪಾಯಿ ಬರಲಿಲ್ಲ 2-3 ಕೋಟಿ ರೂಪಾಯಿ ಒಳಪಟ್ಟು ಬಂತು. ಈ ವರ್ಷ ಸಾಥೆ ಕಮೀಷನ್ ಮುಂದೆ ವರದಿ ಒಪ್ಪಿಸಿದ್ದಾರೆ. ಈಗ ನಮ್ಮ ದೇಶಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥ $8\frac{1}{2}$ ಕೋಟಿ ರೂಪಾಯಿಯಷ್ಟು ಅಂದಾಜು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಅದರಲ್ಲಿ $2\frac{1}{2}$ ಕೋಟಿ ರೂಪಾಯಿಯಷ್ಟು ಕೊಟ್ಟಿದ್ದಾರೆ ಎಂದು ಮುಖ್ಯ ಮಂತ್ರಿಗಳ ಹೇಳಿಕೆಯಲ್ಲಿ ತಿಳಿಸಿದ್ದಾರೆ. ನಾವು ಹೆಚ್ಚು ಹಣವನ್ನು ಕೇಂದ್ರ ಸರ್ಕಾರವನ್ನು ಕೇಳುತ್ತಾ ಇದ್ದೇವೆ. ಕೇಳುವುದರ ಜೊತೆಗೆ ನಮ್ಮ ರಾಜ್ಯದ ಬಡ್ಜೆಟ್ಟಿನಲ್ಲಿ ಇರತಕ್ಕಂಥ ಹಣವನ್ನು ಕೂಡ ನಾವು ಇಂತಿಂತಹ ಕೆಲಸಗಳಿಗೆ ತೀವ್ರವಾಗಿ ಖರ್ಚು ಮಾಡಬೇಕೆಂದು ಹೇಳಿದ್ದೇವೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಅದೇನೆಂದರೆ ಖರ್ಚುಮಾಡುವುದಕ್ಕೆ ಏನು ಒಂದು ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರೋ ಅದು ನ್ಯಾಯವಾದುದು. ಆದರೆ ಖರ್ಚು ಮಾಡುವಾಗ ಎಲ್ಲಿ ಮಿತವ್ಯಯ ಮಾಡುವುದಕ್ಕೆ ಸಾಧ್ಯ ಇದೆ, ಇವೊತ್ತು ಯಾವ ಕೆಲಸ ಮಾಡಿದರೆ ಕ್ಷಾಮ ನಿವಾರಣೆಗೆ ಸಹಾಯಕವಾಗುತ್ತದೆ, ಯಾವ ಕೆಲಸವು ಕ್ಷಾಮ ಪರಿಹಾರಕ್ಕೆ ಅಗತ್ಯ ಇಲ್ಲ ಅಂಥಾದ್ದನ್ನೆಲ್ಲಾ ಪುನರ್ವಿಮರ್ಶೆ ಮಾಡಿ ಕೆಲಸಕಾರ್ಯಗಳನ್ನು ಮಾಡತಕ್ಕಂಥಾದು ಅಗತ್ಯ ಎಂದು ನನ್ನ ಭಾವನೆ.

[Mr. CHAIRMAN (Sri G. RAMEGOWDA) in the Chair]

ಯಾವುದು ಕ್ಷಾಮಪರಿಹಾರಕ್ಕೆ ಸಹಾಯಕವಾಗದೇ ಇರತಕ್ಕದ್ದು ಎಂದರೆ ಉದಾಹರಣೆಗೆ ಕಟ್ಟಡಗಳನ್ನು ಕಟ್ಟುವುದು, ಸ್ಕೂಲ್ ಬಿಲ್ಡಿಂಗ್ ಕಟ್ಟುವುದು ಆಗಲಿ, ಆಸ್ಪತ್ರೆ ಕಟ್ಟುವುದಾಗಲಿ, ಯಾವುದೇ ರಸ್ತೆ ಕೆಲಸವಾಗಲಿ, ಮಂತ್ರಿಗಳಿಗೆ ಮನೆ ಕಟ್ಟುವುದಾಗಲಿ, ಮನೆ ರಿಪೇರಿಯಾಗಲಿ, ನಿಜವಾಗಿಯೂ ರಿಪೇರಿ ಬೇಕಾಗಿದ್ದ ಪಕ್ಷದಲ್ಲಿ ಎಂದರೆ ಅಪಾಯ ಸ್ಥಿತಿಯಲ್ಲಿದ್ದರೆ ಅದನ್ನು ಮಾಡಬೇಕೇ ಹೊರತು ಬಾಕಿಯವಕ್ಕೆಲ್ಲಾ ಖರ್ಚು ಆಗತಕ್ಕಂಥ ಹಣವನ್ನು ಸಂಪೂರ್ಣವಾಗಿ ತಾತ್ಕಾಲಿಕವಾಗಿ ನಿಲ್ಲಿಸಿ. ಅದೇ ರೀತಿ ಅನೇಕ ಬಾಬುಗಳು ಇವೆ. ಅವೆಲ್ಲಾ ನಿಲ್ಲಿಸಿ. ಈ ಹಣವನ್ನೆಲ್ಲಾ ನೇರವಾಗಿ ಕ್ಷಾಮ ನಿವಾರಣೆ ಕೆಲಸಕ್ಕೆ ಉಪಯೋಗ ಮಾಡಬೇಕು ಎಂದು ನನ್ನ ಸಲಹೆ. ಇನ್ನೂ ಕೇಂದ್ರದಿಂದ ಹಣ ಕೇಳುತ್ತಾ ಇದ್ದಾರೆ. ಅವರು ಎಷ್ಟೋ ಕೊಟ್ಟಿದ್ದಾರೆ, ಮುಂದೆ ಇಷ್ಟು ಕೊಡುತ್ತೇವೆಂದು ಹೇಳುತ್ತಾರೆ. ಹಣ ಕೇಳಬೇಕಾದರೆ ಇನ್ನೂ ಹೆಚ್ಚು ಹಣವನ್ನು ಕೇಳಿ. ಮಾನ್ಯ ಸದಸ್ಯರು ಅದರಲ್ಲೂ ವಿರೋಧಪಕ್ಷದ ನಾಯಕರು ಹೇಳಿದರು ಕೇಂದ್ರದವರನ್ನು ಕೇಳಬೇಕಾದರೆ 20-30 ಕೋಟಿ ರೂಪಾಯಿಯಲ್ಲ 60 ಕೋಟಿ ರೂಪಾಯಿ ಕೊಡಿ ಎಂದು ಕೇಳಬೇಕಾಗಿತ್ತು ಎಂದು. ಆದರೆ ಕೇಳಬೇಕಾದುದು ನ್ಯಾಯ. ಹೀಗೆ ಅನೇಕ ರಾಜ್ಯದವರು ಕೇಳುತ್ತಾರೆ. ಇದನ್ನೆಲ್ಲಾ ಕೊಡಬೇಕಾದರೆ ಕೇಂದ್ರ ಸರ್ಕಾರದವರ ಒಂದು ಕಮಿಷನ್ ಬರುತ್ತದೆ, ಯಾವ ಒಂದು ಕಮೀಷನ್ನೇ ಬರಲಿ, ಬಂದು ನೋಡಲಿ. ಆದರೆ ಒಂದು ಸಲ ಬಂದು ನೋಡಿಕೊಂಡು ಹೋದ ಮೇಲೆ ಮತ್ತೆ ಮತ್ತೆ ಒಂದು ಟೀಮನ್ನು ಕಳುಹಿಸಬೇಕಾದ ಅಗತ್ಯ ಏನು ಇದೆ ? ನಾವು ಕಳುಹಿಸಿಕೊಟ್ಟಿರುವ ವರದಿಯೂ ಅವರ ಮುಂದೆ ಇದೆ. ಆ ವರದಿ ಪ್ರಕಾರ ಸರ್ಕಾರದವರು ನಮ್ಮ ದೇಶದಲ್ಲಿರತಕ್ಕಂಥ 175 ತಾಲ್ಲೂಕುಗಳಲ್ಲಿ 100 ತಾಲ್ಲೂಕುಗಳು ಸುಮಾರು 13 ಸಾವಿರ ಹಳ್ಳಿಗಳು ಕ್ಷಾಮಬಾಧೆಗೆ ತುತ್ತಾಗಿವೆ ಎಂದು ವರದಿಯಲ್ಲಿ ಹೇಳಿದ್ದಾರೆ. ಅಲ್ಲಿಗೆ ಅರ್ಧಕ್ಕಿಂತಲೂ ಹೆಚ್ಚಿಗೆ ಹಳ್ಳಿಗಳು ಕ್ಷಾಮ ದ ಬಾಧೆಗೆ ಈಡಾಗಿವೆ.

ಇನ್ನೊಂದು ಸಂಗತಿ ಏನೆಂದರೆ ನಮ್ಮ ಮಲೆನಾಡು ಪ್ರದೇಶವನ್ನು ಮೂರು ಪ್ರದೇಶವಾಗಿ ವಿಂಗಡಿಸಬಹುದು. (1) ಮಲೆನಾಡು ಪ್ರದೇಶ (2) ಸೆಮಿ ಮಲೆನಾಡು (3) ಮಲೆನಾಡು ಮತ್ತು ಮೈದಾನ ಪ್ರದೇಶ ಎಂದು. ಅಲ್ಲೂ ಕೂಡ 3 ವರ್ಷದಿಂದಲೂ ಅಭಾವ ಉಂಟಾಗಿ ಜನಗಳು ತೊಂದರೆಗೆ ಒಳಗಾಗಿದ್ದಾರೆ. ಮಲೆನಾಡಿನ ಪಶ್ಚಿಮ ಭಾಗದ ಪ್ರದೇಶದಲ್ಲಿ ಅಂದರೆ ಸೌತ್ ಕೆನರಾ ಮತ್ತು ನಾರ್ತ್ ಕೆನರಾ ಭಾಗದ ಕೆಲವು ಕಡೆ 1-2 ತಿಂಗಳ ಹಿಂದೆ ಹೆಚ್ಚು ಮಳೆಯಾಗಿ ಕೆಲವು ಜಮೀನುಗಳಲ್ಲಿ ಬೆಳೆಗಳು ನಾಶವಾಗಿ ಕ್ಷಾಮ ಪರಿಸ್ಥಿತಿಗೆ ಒಳಗಾಗಿವೆ. ಇನ್ನು ಕೆಲವು ಕಡೆ 15–20 ದಿವಸದಿಂದಲೂ ಮಳೆ ಬಾರದೆ ಅಲ್ಲಿ ನಾಟಿ ಹಾಕಿದ ಗದ್ದೆಗಳಿಗೆ ನೀರು ಇಲ್ಲದೆ ತೊಂದರೆಯಾಗಿದೆ. ಇನ್ನು ಕೆಲವು ಪ್ರದೇಶಗಳು ಮಲೆನಾಡೂ ಅಲ್ಲ, ಮೈದಾನವೂ ಅಲ್ಲ. ಈರೀತಿ ಮೈದಾನಕ್ಕೂ ಮಲೆನಾಡಿಗೂ ಮಧ್ಯೆ ಸಿಕ್ಕಿಕೊಂಡಿದೆ. ಅಂಥ ಪ್ರದೇಶಕ್ಕೆ ಸೆಮಿ ಮಲೆನಾಡು ಎಂದು ಹೇಳುತ್ತೇನೆ. ಅ ಭಾಗ ಏನಿದೆ, ಅದು ಪೂರ್ತಿ ಮಲೆನಾಡೂ ಅಲ್ಲ, ಪೂರ್ತಿ ಮೈದಾನವೂ ಅಲ್ಲ. ಅಲ್ಲಿ ಹೇರಳವಾದ ಮಳೆ ಬರುವುದಿಲ್ಲ. ಅದು ಕೂಡ ಬಿಕ್ಕಟ್ಟಿನಲ್ಲಿ ಸೇರಿಕೊಂಡಿದೆ. ಅಲ್ಲಿ ಸ್ವಲ್ಪ ಮಳೆ ಬಂದಿದೆ ಆದರೂ ಸಂಪೂರ್ಣವಾಗಿ ಬೆಳೆ ಕೊಯ್ಯಲಿಲ್ಲ. ಆಗಸ್ಟ್ ತಿಂಗಳಲ್ಲಿ ಬರಬೇಕಾದ ಮಳೆ ಬರಲೇ ಇಲ್ಲ. ಇದರಿಂದಾಗಿ ಬೆಳೆಗಳು ಅರ್ಧಂಬರ್ಧವಾಗಿದೆ. ಕೆರೆಕಟ್ಟೆಗಳಲ್ಲಿಯೂ ನೀರೇ ಇಲ್ಲ. ಸಂಪೂರ್ಣವಾಗಿ ಮಲೆನಾಡು ಪ್ರದೇಶಗಳಲ್ಲಿರುವ ಕೆರೆಕಟ್ಟೆಗಳಲ್ಲಿ ನೀರೇ ಇಲ್ಲ. ಈಗ ನಮ್ಮ ಸರ್ಕಾರದವರು ಸಾಥೆ ಸಮಿತಿಯವರ ಮುಂದೆ ತಾತ್ಕಾಲಿಕವಾಗಿ ವರದಿ ಇಟ್ಟಿದ್ದಾರೆ. ಇವರು ಎಂಟು ಕೋಟಿ ರೂಪಾಯಿ ಕೊಡಬೇಕೆಂದು ಏನು ಕೇಳುತ್ತಿದ್ದಾರೆ, ಆ ಹಣವನ್ನಾದರೂ ಕೂಡಲೇ ನಮ್ಮ ಸಂಸ್ಥಾನಕ್ಕೆ ಒದಗಿಸಿಕೊಡಬೇಕೆಂದು ನಾವು ಒತ್ತಾಯ ಪಡಿಸಬೇಕು, ಮತ್ತು ಅವರು ಒಪ್ಪುತ್ತಾರೆಂದು ನನ್ನ ಭಾವನೆ. ಈ ಫ್ಯಾಮಿನ್ ಕೆಲಸ

(ಶ್ರೀ ಡಿ. ದೇವರಾಜ ಅರಸ್)

ಗಳನ್ನು ತೆಗೆದುಕೊಳ್ಳುವುದಕ್ಕೆ ಫ್ಯಾಮಿನ್ ಕಮಿಷನರ್ ಹುದ್ದೆಯನ್ನು ಏನು ಮಾಡಬೇಕೆಂದು ಹೇಳುತ್ತಿದ್ದಾರೆ ಇದು ಒಂದು ಹಳೆಯ ಕಾಲದ ಮಾತಾಯಿತು. ಈಗ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಇಷ್ಟೊಂದು ಅಧಿಕಾರಿಗಳನ್ನು ಕಟ್ಟಿಕೊಂಡು ಕೆಲಸ ಏನು ಮಾಡುತ್ತಿದ್ದೇವೆ ? ಪುನಃ ನಾವು ಮತ್ತೆ ಮತ್ತೆ ಹೊಸ ಹೊಸ ಹುದ್ದೆಗಳನ್ನು ಮಾಡಿ ಅವರಿಗೆ ಬೆಂಗಳೂರಿನಲ್ಲಿ ಒಂದು ಹೆಡ್ ಆಫೀಸು, ಜಿಲ್ಲಾ ಮಟ್ಟದಲ್ಲಿ ಒಂದು, ಮತ್ತು ತಾಲ್ಲೂಕು ಮಟ್ಟದಲ್ಲಿ ಒಂದು, ಹೀಗೆ ಮಾಡುತ್ತಾ ಹೋದರೆ, ಅದು ಬರೇ ಹಣವನ್ನು ಖರ್ಚು ಮಾಡುವುದಕ್ಕೆ ಒಂದು ದಾರಿಯಾಗುತ್ತದೆ. ಅದು ಅನಗತ್ಯವೆಂದು ಹೇಳಬೇಕಾಗಿದೆ. ಈಗ ಏನು ಅಧಿಕಾರಿಗಳಿದ್ದಾರೆ, ಅವರಿಂದ ಸಂಪೂರ್ಣವಾಗಿ ಕೆಲಸಗಳನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ತಾಲ್ಲೂಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡುವುದು ಉತ್ತಮವೆಂದು ನನ್ನ ಭಾವನೆ. ಮತ್ತು ಹಣ ಖರ್ಚು ಮಾಡತಕ್ಕ ವಿಚಾರದಲ್ಲಿ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರು ಒಂದು ಪ್ರಬಲವಾದ ವಿಚಾರ ಹೇಳಿದರು. ಅದೇನೆಂದರೆ, ತಾಲ್ಲೂಕು ಬೋರ್ಡುಗಳು ಕೆಲಸ ಮಾಡತಕ್ಕಂತದ್ದು ಅವರ ಮನಸ್ಸಿಗೆ ಸಮಾಧಾನಕರವಾಗಿಲ್ಲವೆಂದೂ, ಮತ್ತು ಕಾಂಗ್ರೆಸ್ ಪಕ್ಷದಿಂದ ತಾಲ್ಲೂಕು ಬೋರ್ಡಿಗೆ ಹಣ ಕೊಟ್ಟು ಅವರು ಮುಂದೆ ಬರತಕ್ಕ ಚುನಾವಣೆಯಲ್ಲಿ ಬೆಂಬಲ ಮಾಡುವಂತೆ ಅವಕಾಶ ಮಾಡಿ ಕೊಟ್ಟಿದ್ದಾರೆಂದೂ, ಮತ್ತು ಅದನ್ನು ರದ್ದು ಮಾಡೋಣ ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ. ತಾಲ್ಲೂಕು ಬೋರ್ಡುಗಳಲ್ಲಿ ಎಲ್ಲಾ ಕಡೆಯೂ ಕಾಂಗ್ರೆಸ್ ಪಕ್ಷದ ಸದಸ್ಯರೇ ಇರುತ್ತಾರೆ, ಮತ್ತು ಅಧ್ಯಕ್ಷರೇ ಇರುತ್ತಾರೆ ಎಂದು ಏನೂ ಇಲ್ಲ. ತಾಲ್ಲೂಕು ಬೋರ್ಡು ಕೆಲವು ಕಡೆ ಖರ್ಚು ಮಾಡುತ್ತಾ ಇರುವುದು. ಇದಕ್ಕೆ ಕಾರಣ ತಾಲ್ಲೂಕು ಬೋರ್ಡು ಇರಬಹುದು, ಅಧಿಕಾರಿಗಳು ಇರಬಹುದು. ಒಟ್ಟಿಗೆ 175 ತಾಲ್ಲೂಕು ಬೋರ್ಡುಗಳಿದ್ದರೆ, ಎಲ್ಲವೂ ಕೆಲಸ ಸರಿಯಾಗಿ ಮಾಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ಅನೇಕ ತಾಲ್ಲೂಕು ಬೋರ್ಡುಗಳು ಸರ್ಕಾರ ಒದಗಿಸಿದ್ದಕ್ಕಿಂತ ಹೆಚ್ಚಾಗಿ ಖರ್ಚು ಮಾಡಿವೆ. ಆ ಹಣ ಇನ್ನೂ ಕೊಡುವುದಕ್ಕಾಗಿಲ್ಲ. ಮತ್ತು ಮಾನ್ಯ ಮುಖ್ಯ ಮಂತ್ರಿಯವರು ಒಂದು ಮಾತನ್ನು ಇಲ್ಲಿ ಹೇಳಿದ್ದಾರೆ :

> "It may surprise the House to learn that out of a total allotment of about Rs. 1·90 lakhs made available for scarcity relief works and soil conservation, the total expenditure is hardly Rs. 1·10 lahks".

ಇದನ್ನು ತಾಲ್ಲೂಕು ಬೋರ್ಡು ನೇರವಾಗಿ ಮಾಡುತ್ತಿಲ್ಲ, ಇದರಲ್ಲಿ ಸಾಯಿಲ್ ಕನ್‌ಸರ್ವೇಶನ್ ಕೂಡ ಸೇರಿದೆ, ತಾಲ್ಲೂಕು ಬೋರ್ಡು ರಿಲೀಫ್ ವರ್ಕ್ಸ್ ಸೇರಿದೆ. ಸಾಯಿಲ್ ಕನ್‌ಸರ್ವೇಶನ್ ಮಾಡುವುದರಲ್ಲೂ ಕಷ್ಟ ಇದೆ. ಮೈದಾನ ಪ್ರದೇಶದಲ್ಲಿ, ಹತ್ತಿ ಬೆಳೆಯುತಕ್ಕ ಪ್ರದೇಶದಲ್ಲಿ ಸಾಯಿಲ್ ಕನ್‌ಸರ್ವೇಶನ್ ಮಾಡುವುದು ಸುಲಭ. ಆದರೆ ಕೆಂಪು ಮಣ್ಣು ಇರತಕ್ಕ ಕಡೆ ಮಳೆ ಇಲ್ಲದಿದ್ದಾಗ ಸಾಯಿಲ್ ಕನ್‌ಸರ್ವೇಶನ್ ಮಾಡುವುದು ಕಷ್ಟ. ಇದರ ಜೊತೆಗೆ ರಿಲೀಫ್ ವರ್ಕ್ಸ್ ತ್ವರಿತವಾಗಿ ಆಗದಿರಲು. ಅಧಿಕಾರವನ್ನು ಕೇಂದ್ರೀಕೃತ ಮಾಡಿಕೊಂಡಿರುವುದು ಕಾರಣ, ಮತ್ತು ಅದರೊಂದಿಗೆ ಕೇಂದ್ರೀಕೃತವಾದುದನ್ನು ವಿಕೇಂದ್ರೀಕೃತವಾಡಿದ್ದು ಇದೂ ಒಂದು ಕಾರಣ, ಇದರಿಂದಾಗಿ ಕೆಲಸ ಕಾರ್ಯಗಳು ತ್ವರಿತವಾಗಿ ನಡೆಯುವುದಕ್ಕಾಗುವುದಿಲ್ಲವೆಂದು ಕೆಲವರು ಹೇಳಿದರು. ಈಗ ಪಿ.ಡಬ್ಲ್ಯು.ಡಿ. ಯಲ್ಲಿ ಯಾವ ಒಂದು ಕೆಲಸವಾದರೂ ಸಾಂಕ್ಷನ್ ಆಗಬೇಕಾದರೆ, ಅದು ಮಿನಿಸ್ಟರ್ ಹತ್ತಿರ ಅಥವಾ ಸೆಕ್ರೆಟೇರಿಯೇಟ್ ಲೆವೆಲಿಗೆ ಬರಬೇಕಾದರೆ ಬಹಳ ನಿಧಾನವಾಗುತ್ತದೆ. ಅದು ಏಕೆ ಮಾಡಿದ್ದಾರೆಂದರೆ, ಅವರು ಸಿಕ್ಕಾಪಟ್ಟೆ ಖರ್ಚುಮಾಡಿಯಾರು, ಅಥವಾ ಯಾರದ್ದಾದರೂ ದಾಕ್ಷಿಣ್ಯಕ್ಕೆ ಒಳಗಾಗಿ, ಕಂಟ್ರಾಕ್ಟರು ಹಣ ಕೊಟ್ಟು ಏನಾದರೂ ಮಾಡಿಯಾರು ಎಂದು. ಆ ರೀತಿ ಮಾಡಿದವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವ ಬದಲು ಅಂಥ ಅಧಿಕಾರಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡಿದರೆ ಅದರ ಪರಿಣಾಮವಾದರೂ ಏನಾಗುತ್ತದೆ ? ಈಗ ಚೀಫ್ ಇಂಜಿನಿಯರ್ ಮಟ್ಟದಿಂದ, ಸರ್ಕಾರಿ ಮಟ್ಟಕ್ಕೆ ಬರಬೇಕಾಗುತ್ತದೆ ಇತ್ತೀಚೆಗೆ ವಿಕೇಂದ್ರೀಕರಣದಿಂದ ಚೀಫ್ ಇಂಜಿನಿಯರಿಗೆ ಅಧಿಕಾರ ಕೊಟ್ಟಿದ್ದಾರೆಂದು ಬರೆದಿದ್ದಾರೆ. ನಾನು ಹೇಳುವುದಾದರೆ, ಕೇವಲ ಚೀಫ್ ಇಂಜಿನಿಯರಿಗೆ ಕೊಡುವುದಲ್ಲ. ಕನಿಷ್ಟ ಪಕ್ಷ ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಕೂಡ ಅಧಿಕಾರ ಕೊಟ್ಟರೆ, ಆಗ ಕೆಲಸ ತ್ವರಿತವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಕೆಲವರು ತಾಲ್ಲೂಕು ಬೋರ್ಡಿನಲ್ಲಿ ದುರುಪಯೋಗವಾಗುತ್ತದೆಂದು ಹೇಳಿದರು. ಅದಕ್ಕೆ ನಾನು ಹೇಳತಕ್ಕದ್ದು ಇಷ್ಟೆ —

ನಮ್ಮ ಇಲ್ಲಿಯ ಸದಸ್ಯರು ಮತ್ತು ಮೇಲ್ಮನೆಯ ಸದಸ್ಯರು ಅಲ್ಲಿ ಎಕ್ಸ್ ಅಫಿಷಿಯೋ ಮೆಂಬರ್ಸ್ ಆಗಿ ಇದ್ದಾರೆ. ಮಾನ್ಯ ವೆಂಕಟಗಿರಿಯಪ್ಪನವರು ಈ ವಿಚಾರದಲ್ಲಿ ಮಾತನಾಡಿದರು. ಅವರೂ ಅಲ್ಲಿ ಸದಸ್ಯರಾಗಿದ್ದಾರೆ. ಅವರೂ ಅಲ್ಲಿಗೆ ಹೋಗಿಲ್ಲ, ಮತ್ತು ಕೇಳಿಲ್ಲ.

ಶ್ರೀ ಬಿ. ದೊಡ್ಡಬೋರೆಗೌಡ.—ಅಲ್ಲಿ 19 ಜನ ಅವರ ಪಾರ್ಟಿಯವರು ಇದ್ದಾರೆ. ಎಲ್ಲಾ ಇವರು ಕೈಯೆತ್ತಿಸಿಕೊಳ್ಳುವವರು. ಇಲ್ಲಿ 85 ಜನ ಇದ್ದರೂ ನಾವು ಹೇಳಿದ್ದನ್ನು ಕೇಳುತ್ತಾ ಇಲ್ಲ, ಇನ್ನು ಅಲ್ಲಿ ಅಷ್ಟು ಜನವಿದ್ದರೆ ಏನು ಪ್ರಯೋಜನವಾಗುತ್ತದೆ ?

ಶ್ರೀ ಡಿ. ದೇವರಾಜ ಅರಸ್.—ತಾಲ್ಲೂಕು ಬೋರ್ಡನ್ನು ಈ ಕಾರಣದಿಂದ ರದ್ದುಮಾಡಿ ಎಂದು ಹೇಳುವುದು ಸರಿಯಾದುದಲ್ಲ. ಚುನಾವಣೆಗಳು ಬರುತ್ತವೆ. ಹೊಸದಾಗಿ ತಾಲ್ಲೂಕು ಬೋರ್ಡುಗಳು ಆಗಬೇಕಾಗಿವೆ. ಅವನ್ನು ನಾವು ಒಪ್ಪಿಕೊಳ್ಳೋಣ. ಒಟ್ಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಬೋರ್ಡ್ ಒಂದು ಖಾಸಗಿ ಸಂಸ್ಥೆಯಾಗಿವೆ. ಅಧಿಕಾರಿಗಳು, ಮತ್ತು ಮಧ್ಯವರ್ತಿ ಜನಗಳು ಹಣ ದುರುಪಯೋಗ ಮಾಡಿದ್ದಾರೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಲಿನ ಅಧಿಕಾರಿಗಳು ಕ್ವೆಶ್ಚನಬಲ್ ಇಂಟಿಗ್ರಿಟಿ ಇರುವವರು, ಅವರಿಂದ ಕೆಲಸ ಮಾಡಿಸಿದರೆ ಹಣ ದುರುಪಯೋಗವಾಗಿ ಲಂಚಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತಾರೆ. ಆದರೆ ತಾಲ್ಲೂಕು ಬೋರ್ಡುಗಳಿಗೆ ಕೊಟ್ಟರೆ, ವಿರೋಧಪಕ್ಷದ ಸ್ನೇಹಿತರು ನಮ್ಮ ಊರಿಗೆ ಹೆಚ್ಚಿನ ಸೌಲಭ್ಯ ಸಿಗಲಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಅವರಿಗೆ ಕೊಟ್ಟರೂ ಕಷ್ಟ, ಇವರಿಗೆ ಕೊಟ್ಟರೂ ಕಷ್ಟ. ಅಲ್ಲಿಗೆ ಇನ್ನು ಯಾರನ್ನು ತರಬೇಕೋ ಗೊತ್ತಿಲ್ಲ. ಈ ರೀತಿ ಮಾಡುತ್ತಿದ್ದರೆ ಇದಕ್ಕೆ ಔಷಧಿಯೇ ಇಲ್ಲ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ನಾವೆಲ್ಲರೂ ಒಟ್ಟಿಗೆ ಸೇರಿ ತಾಲ್ಲೂಕುಮಟ್ಟದಲ್ಲಿರತಕ್ಕ ಮುಖಂಡರನ್ನೆಲ್ಲಾ ಬರಮಾಡಿಕೊಂಡು ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಚರ್ಚೆ ಮಾಡಿ ಕ್ಷಾಮ ನಿವಾರಣೆಗೋಸ್ಕರ ಒಂದು ತೀರ್ಮಾನವನ್ನು ಕೈಗೊಳ್ಳಬೇಕು. ಏಕೆಂದರೆ ಇದು ಯಾವ ಪಕ್ಷದ ಪ್ರಶ್ನೆಯಲ್ಲ. ಒಂದು ಊರಿನಲ್ಲಿ ಕ್ಷಾಮ ಇದೆಯೆಂದು ಹೇಳಿ ಅದೇ ಒಂದು ನೆಪ ಮಾಡಿಕೊಂಡು ಅಲ್ಲಿಗೆ ಹೋಗಿ ನಿಮ್ಮನ್ನು ನಾವು ದೂಷಣೆ ಮಾಡುವುದು ನಮ್ಮನ್ನು ನೀವು ದೂಷಣೆ ಮಾಡುವುದರಿಂದ ದೇಶಕ್ಕೆ ಯಾವ ಪ್ರಯೋಜನವೂ ಆಗಲಾರದೆಂದು ನಾನು ಹೇಳುತ್ತೇನೆ.

4–30 P.M.

ಇನ್ನು ಕ್ಷಾಮನಿವಾರಣೆ ಕೆಲಸದಲ್ಲಿ ನಮ್ಮಲ್ಲಿರುವ ಕೆಲಸ ಯಾವುದು ಮಾಡಬೇಕೆಂದರೆ ಇವತ್ತಿನ ಪರಿಸ್ಥಿತಿಯಲ್ಲಿ ಮೊದಲು ಕುಡಿಯುವ ನೀರಿನ ಅಭಾವ ನೀಗುವುದಕ್ಕೆ ಪ್ರಯತ್ನ ಮಾಡಬೇಕು. ಅದು ಮೊಟ್ಟಮೊದಲನೆಯ ಕೆಲಸ. ಇದಕ್ಕಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಕುಡಿಯುವ ನೀರಿನ ಅಭಾವ ಹೋಗಲಾಡಿಸುವುದಕ್ಕಾಗಿ ಹೆಚ್ಚು ಬಾವಿಗಳನ್ನು ತೆಗೆಯಲು ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಈಗ ಮೊದಲು ಬರುವ ತೊಂದರೆ ದನಗಳಿಗೆ, ಎರಡನೆಯ ತೊಂದರೆ ಜನಗಳಿಗೆ. ದನಗಳಿಗೆ ಮೇವು ಇಲ್ಲದೇ ಇರುವುದು ಬಹಳ ದೊಡ್ಡ ತೊಂದರೆಯಾಗಿದೆ. ಈಗ ಈ ಮೇವಿನ ಅಭಾವವನ್ನು ನೀಗಬೇಕಾದರೆ, ಅವರ ಭಾಷಣದಲ್ಲಿ ಅದಕ್ಕಾಗಿ ಕೆಲವು ಏರ್ಪಾಡುಗಳನ್ನು ಮಾಡಿದ್ದೇವೆ. ಫಾರಸ್ಟ್ ಇಲಾಖೆಯವರಿಗೆ ಹೇಳಿದ್ದೇವೆ, ಹುಲ್ಲನ್ನು ಬೇಕಾದಷ್ಟು ಕೊಯ್ದುಕೊಂಡು ಬರಬಹುದು ಎಂದು ಹೇಳಿದ್ದಾರೆ. ಕ್ಷಾಮ ನಮ್ಮ ದೇಶದಲ್ಲಿ ಹೊಸದೇನೂ ಅಲ್ಲ. ಮೂರು ವರ್ಷಗಳಿಂದ ಒಂದೇ ಸಮನೆ ಇದು ಬರುತ್ತಿದೆ. ಹಿಂದೆ 10 ವರ್ಷಗಳಿಗೋ ಅಥವಾ 50 ವರ್ಷಗಳಿಗೋ ಒಂದು ಸಾರಿ ಕ್ಷಾಮ ಬರುತ್ತಿತ್ತು. ಆದರೆ ಈಗ ದೇಶದ ಅರ್ಧ ಮುಕ್ಕಾಲು ಭಾಗ ಕ್ಷಾಮಕ್ಕೆ ತುತ್ತಾಗಿದೆ. 'ಯುದ್ಧಕಾಲೇ ಶಸ್ತ್ರಾಭ್ಯಾಸ' ಎನ್ನುವ ಹಾಗೆ ಇದನ್ನು ಮಾಡಬಾರದು. ಇವತ್ತಿನವರೆಗೂ ಫಾಡರ್ ಡಿಫಿಕಲ್ಟಿ ಇದ್ದೇ ಇದೆ. ಸುಮ್ಮನೆ ಹುಲ್ಲು ಕೊಯ್ದುಕೊಂಡು ಬನ್ನಿ ಅಂದರೆ ಈ ಕೆಲಸವಾಗುವುದಿಲ್ಲ. ಲಾರಿ ಚಾರ್ಜು ದಿನೇ ದಿನೇ ಜಾಸ್ತಿಯಾಗುತ್ತಿದೆ. ಹುಲ್ಲು ಕೊಯ್ಯುವುದಕ್ಕೆ ಆಳು ಇಲ್ಲ, ಹುಲ್ಲು ತರುವುದಕ್ಕೆ ಸಾಕಷ್ಟು ಲಾರಿಗಳಿಲ್ಲ. ಈಗಿನ ಕ್ಷಾಮ ಈ ದೇಶದ ಒಂದಲ್ಲ, ಒಂದು ಕಡೆಯಿಂದ ಎಲ್ಲಾ ಕಡೆಗಳಲ್ಲಿಯೂ ಜಾಸ್ತಿಯಾಗುತ್ತಲೇ ಇದೆ. ದುರ್ದೈವದಿಂದ ಹೊತ್ತಿಗೆ ಸರಿಯಾಗಿ ಮಳೆಯಾಗಲಿಲ್ಲ. ಕೆಲವು ಕಡೆಗಳಲ್ಲಿ ಜೋಳದ ಕಡ್ಡಿಯನ್ನು ದನಗಳ ಮೇವಿಗಾಗಿ ಉಪಯೋಗಿಸುತ್ತಾರೆ. ಕೆಲವು ಭಾಗಗಳಲ್ಲಿ ಸುಟ್ಟು ಹಾಕುತ್ತಾರೆ. ಅಂತಹ ಕಡೆಗಳಲ್ಲಿಯೂ ಮೇವಿನ ಅಭಾವವಿದೆಯೋ ಏನೋ ನನಗೆ ಗೊತ್ತಿಲ್ಲ. ಇದಕ್ಕಾಗಿ ಸರ್ಕಾರ ಒಂದು ಏಜೆನ್ಸಿಯನ್ನು ಮಾಡಬೇಕಾಗಿದೆ. ಅರಣ್ಯದಲ್ಲಿ ಬೆಳೆಯತಕ್ಕ ಹುಲ್ಲನ್ನು ವರ್ಷೇ ವರ್ಷೇ ಕೊಯ್ಯುವುದಕ್ಕೆ ಏರ್ಪಾಡು ಮಾಡಬೇಕು. ಅದನ್ನು ಪ್ರೆಸ್ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಕ್ಷಾಮ ಎಲ್ಲಿ ಬರುತ್ತದೆಂದು ನಿರೀಕ್ಷಣೆ ಮಾಡುತ್ತಾರೆಯೋ ಅಂತಹ ಕಡೆಗಳಲ್ಲಿ ಹುಲ್ಲನ್ನು ಒಂದು

(ಶ್ರೀ ಡಿ. ದೇವರಾಜ ಅರಸ್)

ಮೆದೆಯಾಗಿಟ್ಟು ಅದನ್ನು ಚೆನ್ನಾಗಿ ಪ್ರಿಸರ್ವ್ ಮಾಡಿ ಎಂಬುದಾಗಿ ಹೇಳುತ್ತೇನೆ. ಆದರೆ ಜೋಳದ ಕಡ್ಡಿ ಅಥವಾ ಹೈಬ್ರಿಡ್ ಜೋಳದ ಕಡ್ಡಿಗಳನ್ನು ದನಗಳು ತಿನ್ನುವುದಕ್ಕೆ ಉಪಯೋಗಿಸುತ್ತಿಲ್ಲ. ನನಗೆ ತಿಳಿದಿರುವ ಹಾಗೆ, ಪೆರಿಯಾಪಟ್ಟಣ, ಹುಣಸೂರು ತಾಲ್ಲೂಕುಗಳಲ್ಲಿ ಬೇಕಾದಷ್ಟು ಜೋಳದ ಕಡ್ಡಿ ಬೆಳೆದು ರೈತರು ಅದನ್ನು ಏನು ಮಾಡೋಣವೆಂದು ಕೇಳುತ್ತಿದ್ದಾರೆ. ಒಂದು ಕಡೆ ಬೇಕಾದಷ್ಟು ಜೋಳದ ಕಡ್ಡಿ ಬೆಳೆದು ಅದು ಜಾಸ್ತಿಯಾಗಿ ರೈತರ ದನಗಳು ಮೇಯುವುದಕ್ಕೆ ಅವಕಾಶ ವಿಲ್ಲದೆ ಅದನ್ನು ಅಲ್ಲಲ್ಲೇ ಸುಟ್ಟು ಹಾಕಿದ್ದಾರೆ. ಅದನ್ನು ಪ್ರಿಜರ್ವ್ ಮಾಡುವ ವಿಧಾನ ಸಾಲದು. ಇತ್ತೀಚೆಗೆ ಅನೇಕ ಯಂತ್ರಗಳು ಬರುತ್ತಾ ಇವೆ. ಆ ಯಂತ್ರಗಳಿಂದ ಬಹು ಜಾಗ್ರತೆಯಾಗಿ ಅವನ್ನು ಕತ್ತರಿಸಿ ಪ್ರಿಜರ್ವ್ ಮಾಡಿ ಇಡುವುದಕ್ಕೆ ಆಗುತ್ತದೆ. ಆರು ತಿಂಗಳುಗಳಾದರೂ ಆ ರೀತಿ ಯಾಗಿ ಇಡುವುದಕ್ಕೆ ಸಾಧ್ಯವಿದೆ. ಕ್ಷಾಮ ಬಂದಾಗ್ಗೆ ಹುಲ್ಲು ಕೊಡಿಸುತ್ತೇವೆಂದು ಹೇಳುವುದು ಅಷ್ಟು ಜಾಣತನವಲ್ಲ. ಕ್ಷಾಮ ಒಂದು ಜಿಲ್ಲೆಯಲ್ಲಿಲ್ಲದಿದ್ದರೂ ಮತ್ತೊಂದು ಜಿಲ್ಲೆಯಲ್ಲಿ ಇದ್ದೇ ಇರುತ್ತದೆ. ಆದ್ದರಿಂದ ಶಾಶ್ವತವಾಗಿ ದನಗಳ ಮೇವನ್ನು ಅಂದರೆ ಹುಲ್ಲಿನ ಅಭಾವವನ್ನು ನೀಗಿಸು ವುದಕ್ಕೆ ತಕ್ಕ ಪ್ರಯತ್ನಗಳನ್ನು ಸರ್ಕಾರದವರು ಕೂಡಲೇ ಮಾಡಬೇಕಾದುದು ಅಗತ್ಯ.

ಇನ್ನು ಕುಡಿಯುವ ನೀರಿನ ಅಭಾವವನ್ನು ನೀಗಬೇಕಾದರೆ ಸರ್ಕಾರದವರು ಕೊಟ್ಟ ಹೇಳಿಕೆ ಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ: We have also under consideration a proposal to purchase air-compressors, blasting equipment and trucks for the purpose of quick deepening of wells. ಇತ್ತೀಚೆಗೆ ಬಂದಿರತಕ್ಕ ರಷ್ಯನ್ ರಿಗ್ಸ್ ಒಂದು ಗಂಟೆಗೆ ಒಂದೊಂದು ಬೋರ್‌ವೆಲ್ಲನ್ನು 100 ಅಡಿಯಿಂದ 120 ಅಡಿಯವರೆಗೂ ತೆಗೆಯುತ್ತವೆ. ಈ ಯಂತ್ರಗಳನ್ನು ಒದಗಿಸುವ ವಿಚಾರವನ್ನು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಮತ್ತು ರಷ್ಯಾ ಸರ್ಕಾರಕ್ಕೆ ಕೇಂದ್ರದವರು ಬರೆದು ತರಿಸುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅವು ಬರುವವರೆಗೆ ಯೋಚನೆ ಮಾಡುತ್ತಾ ಕೂತುಕೊಳ್ಳಲು ಸಾಧ್ಯವಿಲ್ಲ. ನೀರಿನ ಬಾವಿಗಳನ್ನು ತೋಡುವುದಕ್ಕೆ ಕೇಂದ್ರ ಸರ್ಕಾರದವರು ಕೂಡಲೇ ಸಹಾಯ ಮಾಡಬೇಕು. ಸುಮಾರು 100 ರಿಗ್ಸನ್ನು ಯುದ್ಧ ನಡೆಯುವಾಗ ಯಾವ ರೀತಿ ವಿಮಾನಗಳನ್ನು ತರಿಸುತ್ತಾರೋ, ಅದೇ ರೀತಿ ನಮಗೆ ಕಳುಹಿಸಲಿ. ಅದಕ್ಕಾಗಿ ನಮ್ಮ ಸರ್ಕಾರದವರು ಒಬ್ಬ ಮಂತ್ರಿಗಳನ್ನು ಡೆಪ್ಯೂಟ್ ಮಾಡಲಿ. ಕೇಂದ್ರ ಸರ್ಕಾರ ದಲ್ಲಿ ರಷ್ಯನ್ ಡೀಲರ್ಸ್ ಜೊತೆಯಲ್ಲಿ ವ್ಯವಹರಿಸಿ ಅಲ್ಲಿಂದ ಅಂತಹ 20ರಿಂದ 50ರವರೆಗೆ ಯಂತ್ರೋಪ ಕರಣಗಳನ್ನು ತೀವ್ರವಾಗಿ ತರಿಸಿ ಬಾವಿಗಳನ್ನು ತೋಡಿದರೆ ಒಂದು ಅಥವಾ 2 ತಿಂಗಳೊಳಗಾಗಿ ಈಗಿರತಕ್ಕ ಕುಡಿಯುವ ನೀರಿನ ಅಭಾವವನ್ನು ನೀಗಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆ. ಹಾಗಿಲ್ಲದೆ ನಾವು ಏನೇನೋ ಯೋಚನೆ ಮಾಡುತ್ತಿದ್ದೇವೆ, ಅಲ್ಲಿಂದ ತರಿಸಿಕೊಡುತ್ತೇವೆಂದು ನಿಧಾನ ಮಾಡಿ ದರೆ, ಈಗಿನ ಪರಿಸ್ಥಿತಿಯನ್ನು ತೀವ್ರವಾಗಿ ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಕೊನೆಯದಾಗಿ ಒಂದು ವಿಚಾರವನ್ನು ನಾನು ಸರ್ಕಾರಕ್ಕೆ ತಿಳಿಸುವುದೇನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣ ಅಥವಾ ಹೇಳಿಕೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ನಾವೆಲ್ಲರೂ ಗಮನಿಸಬೇಕಾದುದು ಅಗತ್ಯ. ಆದು ಈ ರೀತಿ ಇದೆ: Government will award exemplary punishment to officers or others guilty of selfseeking in this hour of trial. ಆದ್ದರಿಂದ ಸರ್ಕಾರದ ವತಿಯಿಂದ ಚೆನ್ನಾಗಿ ಕೆಲಸವಾಗುವ ವಿಚಾರದಲ್ಲಿ ತೀವ್ರವಾಗಿ ಗಮನ ಕೊಡಬೇಕಾಗಿ ಬರುತ್ತದೆ. ಆಡಳಿತದಲ್ಲಿ ಬರುಬರುತ್ತಾ ರೆಡ್‌ಟೇಪಿಜಂ ಬಹಳ ಇದೆ, ಅದನ್ನು ನೀಗಿಸಬೇಕೆಂದು ಹೇಳಿದ್ದಾರೆ. ಅದರ ಜೊತೆಗೆ ಅಧಿಕಾರಿಗಳು ಮತ್ತು ಮಧ್ಯವರ್ತಿ ಜನಗಳು ಅನೇಕ ಕಡೆ ಕೊಟ್ಟಂಥ ಹಣವನ್ನು ದುರುಪಯೋಗ ಮಾಡಿದ್ದಾರೆಂದು ಹೇಳಿದ್ದಾರೆ. ಅವರು ಹೇಳತಕ್ಕದ್ದು ಒಪ್ಪತಕ್ಕ ಮಾತು. ತಪ್ಪುಮಾಡತಕ್ಕವರಿಗೆ ಶಿಕ್ಷೆಯನ್ನು ವಿಧಿಸು ತ್ತೇವೆಂದು ಹೇಳಿದ್ದಾರೆ. ಈ ಕೆಲಸಕ್ಕೆ ನಾವು ಸಹಕಾರ ಕೊಡೋಣ. ಸಹಕಾರ ಕೊಡುತ್ತಾರೋ ಇಲ್ಲವೋ ಎನ್ನುವ ಒಂದು ಅನುಮಾನ ಇದೆ. ಏಕೆಂದರೆ ಶಿಕ್ಷೆಯನ್ನು ಕೊಡುವುದು ಅಷ್ಟು ಸುಲಭ ವಲ್ಲ. ಕರಪ್ಷನ್ ಎನ್ನುವುದು ದುಡ್ಡು ತೆಗೆದುಕೊಳ್ಳುವುದೇ ಕರಪ್ಷನ್ ಅಲ್ಲ. ನಮ್ಮ ದೇಶದಲ್ಲಿ ಕರಪ್ಷನ್ ನಾನಾ ತರಹ ಇದೆ. ಈಗ ಯಾರಾದರೂ ಒಬ್ಬರೂ ಚುನಾವಣೆಗೆ ನಿಂತಿರುತ್ತಾರೆ. ಆಗ ನಮ್ಮ ಅಧಿಕಾರಿಗಳು, ಮತ್ತು ನಮ್ಮ ದೇಶದಲ್ಲಿರತಕ್ಕ ಅನೇಕ ದೊಡ್ಡ ಮನುಷ್ಯರು ಆ ಅಭ್ಯರ್ಥಿಗೆ ಸಹಾಯ ಮಾಡುತ್ತಾರೆ. ಮತ್ತು ಚುನಾವಣೆಯಲ್ಲಿ ಅಭ್ಯರ್ಥಿಯ ಪರವಾಗಿ ಮಧ್ಯವರ್ತಿಯಾಗಿ ಅವರು ಕೆಲಸ ಮಾಡುತ್ತಾರೆ. ಕಂಟ್ರಾಕ್ಟರುಗಳು ಇನ್ನೊಂದು ರೀತಿಯಲ್ಲಿ

ಆ ಅಭ್ಯರ್ಥಿಗೆ ಸಹಾಯ ಮಾಡುತ್ತಾರೆ. ಈ ರೀತಿ ಲಂಚ ಎನ್ನುವುದು ನಾನಾ ತರಹ ಇದೆ. ಹೀಗೆ ಅಧಿಕಾರಿ ಚುನಾವಣೆಯ ಸಮಯದಲ್ಲಿ ಅಭ್ಯರ್ಥಿಯ ಪರವಾಗಿ ಕೆಲಸ ಮಾಡಿ ಭ್ರಷ್ಟಾಚಾರ ನಡೆಸಿದರೂ ಅವನನ್ನು ಹತ್ತಿಕ್ಕುವುದಕ್ಕೆ ದಾರಿಯಿಲ್ಲ. ಇನ್ನೊಂದು ವಿಚಾರ. ಈಗ ಯಾರೋ ಒಬ್ಬ ಅಧಿಕಾರಿ ಲಂಚ ತೆಗೆದುಕೊಂಡೋ ಅಥವಾ ಇನ್ನು ಯಾವುದೋ ಒಂದು ತಪ್ಪು ಮಾಡುತ್ತಾನೆ ಸಿಕ್ಕಿಹಾಕಿಕೊಳ್ಳುತ್ತಾನೆ. ಆಗ ಅವನು ಏನು ಮಾಡುತ್ತಾನೆ ಎಂದರೆ 10 ಜನರನ್ನು ಕಟ್ಟಿಕೊಂಡು ಯಾರೋ ತಮಗೆ ಬೇಕಾದ ಒಬ್ಬರು ಎಂ. ಎಲ್. ಎ. ಹತ್ತಿರ ಬಂದು ಅವನನ್ನು ಬಿಡಿಸಬೇಕು ಎಂದು ಕೇಳಿದಾಗ ಅವನನ್ನು ಬಿಡಿಸುವುದಕ್ಕಾಗುವುದಿಲ್ಲ ಎಂದು ಹೇಳಿದರೆ ನಾಳೆ ಚುನಾವಣೆಗೆ ಸೊನ್ನೆ ಬೀಳುತ್ತದೆ. ಈಗ ನಾನು ಹೇಳಿದ್ದು ಎಲ್ಲರಿಗೂ ಅನ್ವಯಿಸುತ್ತದೆ. ಇಂಥಾ ಜನರು ಮಧ್ಯವರ್ತಿಗಳಾಗಿದ್ದಾರೆ. ಕರಪ್ಟ್ ಜನಗಳಾಗಿದ್ದಾರೆ. ಇಂಥಾದ್ದರಲ್ಲಿ ಜಾತೀಯತೆಯನ್ನೂ ಉಪಯೋಗಿಸಿಕೊಳ್ಳುತ್ತಾರೆ. ಆಯಾ ಜಾತಿಯವರು ಆಯಾ ಜಾತಿಯ ಎಂ.ಎಲ್.ಎ.ಗಳ ಹಾಗೂ ಮಂತ್ರಿಗಳ ಹತ್ತಿರ ಹೋಗಿ ತಾವು ಮಾಡಿರುವ ತಪ್ಪನ್ನು ಮನ್ನಾ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ನನ್ನ ಜಾತಿಯ ವೋಟು ಇಲ್ಲದೆ ನೀನು ಹೇಗೆ ಮಾಡುತ್ತೀಯಾ ಎಂದರೆ ಆ ತಪ್ಪನ್ನು ಮನ್ನಾ ಮಾಡದೆ ಇರುವುದಕ್ಕೆ ಯಾವ ಮಂತ್ರಿಗಳಿಗೆ ಧೈರ್ಯ ಬರುತ್ತದೆ ? ಒಬ್ಬ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಹೋಗಿದ್ದರು. ಅವರು ಅಲ್ಲಿಗೆ ಹೋಗುವುದಕ್ಕೆ ನನ್ನ ಅಡ್ಡಿ ಏನೂ ಇಲ್ಲ. ಅವರು ಅಲ್ಲಿಗೆ ಪ್ರವಾಸ ಹೋದಾಗ ಒಂದು ಮರ ಕೊಯ್ಯುವ ಸಾಮಿಲ್ಲಿನ ಮಾಲೀಕರಿಂದ ಟೀ ಪಾರ್ಟಿಗೆ ಆಮಂತ್ರಣ ಬಂತು. ಮಂತ್ರಿಗಳು ಹೊಸಬರು ಪಾಪ ಅವರಿಗೆ ಅಲ್ಲಿನ ವಿಚಾರ ಏನು ಎನ್ನುವುದು ಗೊತ್ತಿಲ್ಲ. ಮಂತ್ರಿಗಳು ಟೀಪಾರ್ಟಿಗೆ ಒಪ್ಪಿಕೊಂಡು ಅಲ್ಲಿಗೆ ಹೋದರು. ಆ ಸಾಮಿಲ್ಲಿನ ಮಾಲೀಕ ಪುಣ್ಯಾತ್ಮ, ದೊಡ್ಡ ಮನುಷ್ಯ. ಎಂದರೆ ಹರಿಜನಗಳಿಗೆ ಮನೆಗಳನ್ನು ಕಟ್ಟಲು ಸರ್ಕಾರದವರು ಕೊಟ್ಟಂತಹ ಮರಗಳನ್ನು ಫಾರೆಸ್ಟ್ ಇಲಾಖೆಯ ಅಧಿಕಾರಿಗಳ ಸಂಚಿನಿಂದ ಅಕ್ರಮವಾಗಿ ಕಾರ್ಖಾನೆಗೆ ಸಾಗಿಸಿಕೊಂಡು ಅದನ್ನು ಕೆಲವರು ಸೇರಿಕೊಂಡು ಮಾರಾಟ ಮಾಡಿ ದುಡ್ಡು ಸಂಪಾದನೆ ಮಾಡಿಕೊಳ್ಳುತ್ತಿದ್ದರು. ತೇಗ, ಹೊನ್ನೆ, ಮತ್ತಿ ಸಾವಿರಾರು ರೂಪಾಯಿಗಳ ಬೆಲೆ ಬಾಳತಕ್ಕದ್ದು ಇಂಥಾ ಮರಗಳನ್ನು ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಕೊಟ್ಟರೆ, ಅವರು ಅದನ್ನು ಕೆಲವರು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಿಲ್ಲ. ಹರಿಜನರ ಪೈಕಿ ಕೆಲವರು ಸಾವಿರ ರೂಪಾಯಿಗಳು ಬರುವ ಕಡೆ 100 ರೂಪಾಯಿಗಳು ಬಂದರೂ ಸಾಕು ಎಂದು ಹೇಳುವವರು ಇದ್ದಾರೆ. ಇದಕ್ಕೆ ಅನುಕೂಲವಾಗಿ ಮಧ್ಯವರ್ತಿ ದಳ್ಳಾಳಿಗಳು ಇರುತ್ತಾರೆ. ಆ ಮಿಲ್ಲಿನ ಮಾಲೀಕರು ಮೊದಲು ಸಾಧಾರಣವಾಗಿದ್ದರು. ಈಗ ಒಳ್ಳೆಯ ಕಾರು ಇಟ್ಟುಕೊಂಡು ಅನುಕೂಲಸ್ಥರಾಗಿದ್ದಾರೆ. ಆ ಮಿಲ್ಲಿಗೆ ಮಂತ್ರಿಗಳು ಹೋಗಿ ಟೀ ಪಾರ್ಟಿ ಮಾಡಿಕೊಂಡು ಬಂದಮೇಲೆ, ಸಚಿವರು ಹೋದ ಕಾರ್ಖಾನೆಯಲ್ಲಿ ಅಕ್ರಮ ನಡೆಯುತ್ತಿದ್ದರೆ ಅಕ್ರಮ ವ್ಯವಹಾರದ ವಿರುದ್ಧ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ಧೈರ್ಯವಿರುತ್ತದೆಯೇ ? ಇದೂ ಒಂದು ರೀತಿಯ ಭ್ರಷ್ಟಾಚಾರ. ಮಂತ್ರಿಗಳು ಪ್ರವಾಸ ಹೋದಾಗ ಅವರನ್ನು ಕೆಲವರು ಕಾಫಿಗೆ ಕರೆದುಕೊಂಡು ಹೋಗಿ ಹಾರ ತುರಾಯಿ ಹಾಕುವುದಕ್ಕೆ ಬರುತ್ತಾರೆ. ಅಂಥಾ ಕಡೆ ಹೋಗಬೇಕಾದರೆ ಅಂಥಾ ದೊಡ್ಡ ಮನುಷ್ಯರು ಅವರು ಯಾರು ಹೇಗೆ ಎಂಬುದನ್ನು ಸ್ವಲ್ಪ ಹುಡುಕಿ ವಿಚಾರ ಮಾಡಿ ನೋಡಬೇಕು. ಏತಕ್ಕೆಂದರೆ ಅಕ್ರಮ ವ್ಯವಹಾರಗಳು ನಡೆಯುವ ಸಂಘ ಸಂಸ್ಥೆಗಳಿಗೆ, ಕಾರ್ಖಾನೆಗಳಿಗೆ ಕಂಪೆನಿಗಳಿಗೆ ಮಂತ್ರಿಗಳನ್ನು ಕರೆದುಕೊಂಡು ಹೋಗಿ ಅತಿ ವಿನಯದಿಂದ ಸತ್ಕಾರ ಮಾಡಿ ಹಾರ ತುರಾಯಿ ಹಾಕಿ ಹೊಗಳಿ ಕಳುಹಿಸುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ್).—ತಾವು ಮಂತ್ರಿಗಳಾಗಿದ್ದಾಗ ಬೆಂಗಳೂರು ಹಾಲಿನ ಡೈರಿಯಲ್ಲಿ ಅಕ್ರಮ ನಡೆದಿದೆ, ಕರಪ್ಷನ್ ನಡೆದಿದೆ ಎಂದು ಪತ್ರಿಕೆಯಲ್ಲಿ ಬಂದಿತ್ತು. ಆಗ ತಾವು ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿರಿ ?

ಶ್ರೀ ಡಿ. ದೇವರಾಜ ಅರಸ್.—ಪತ್ರಿಕೆಯಲ್ಲಿ ಬಂದದ್ದು ಪ್ರೂವ್ ಆದಮೇಲೆ ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಅಧಿಕಾರದಲ್ಲಿರುವವರು ತಾತ್ವಿಕವಾಗಿ ನಡೆಯಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಾನು ಅಧಿಕಾರದಲ್ಲಿದ್ದಾಗ ತಪ್ಪು ಮಾಡಿದ್ದರೆ ನನ್ನದು ತಪ್ಪಿಲ್ಲ ಎಂದು ನಾನು ಹೇಳುತ್ತಿಲ್ಲ. ನಾನು ಕರಪ್ಟ್ ಆಫೀಸರನ್ನು ಕ್ರಮ ತೆಗೆದುಕೊಳ್ಳದೆ ಬಿಟ್ಟಿದ್ದರೆ ಅದನ್ನು ತೋರಿಸಿ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಬಿಟ್ಟಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಬಿಟ್ಟಿದ್ದರೆ ತೋರಿಸಿ, ಒಪ್ಪಿಕೊಳ್ಳುತ್ತೇನೆ. ಈ ವಿಷಯಗಳನ್ನು ತ್ವರಿತವಾಗಿ ತೀವ್ರತೆಯಿಂದ ನೋಡಬೇಕಾದ್ದು ಅಗತ್ಯ. ದೇಶದಲ್ಲಿ ಅನೀತಿ ನಡೆಯುತ್ತಿದೆ. ಇದಕ್ಕೆ ಕಾರಣರು ಮಧ್ಯವರ್ತಿ ಜನಗಳೂ ಇದ್ದಾರೆ, ಮಂತ್ರಿಗಳು ಹೆದರದೆ, ದಾಕ್ಷಿಣ್ಯಕ್ಕೆ ಒಳಗಾಗದೆ ಕೆಲಸ ಮಾಡುವುದಾದರೆ ಲಂಚವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂದು ಸರ್ಕಾರಕ್ಕೆ ಮನವಿ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ದೇಶದಲ್ಲಿರುವಂಥಾ ಅಭಾವ ಪರಿಸ್ಥಿತಿಯ ಬಗ್ಗೆ ಈ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿದ್ದಾರೆ. ಭಾರತದಲ್ಲಿ ಇರುವಂತಹ ರಾಜ್ಯಗಳಲ್ಲಿ ರಾಜಾಸ್ಥಾನವನ್ನು ಬಿಟ್ಟರೆ ಮೈಸೂರು ರಾಜ್ಯವೇ ಕನಿಷ್ಟ ರಾಜ್ಯ, ಬಡದೇಶ. ಈಗ ದೇಶದಲ್ಲಿರತಕ್ಕ ಅಭಾವ ಪರಿಸ್ಥಿತಿ ಕೇವಲ ಆಕಸ್ಮಿಕ ವೇನೂ ಅಲ್ಲ. 1950ನೇ ಇಸವಿಯಿಂದಲೂ ಇಲ್ಲಿಯವರೆಗೂ ಪ್ರಕೃತಿ ನಮ್ಮ ಮೇಲೆ ಮುನಿಸಿದಿರುವುದನ್ನು ನೋಡಿದರೆ ಈಗ ನಾವೇನೂ ಆಶ್ಚರ್ಯ ಪಡಬೇಕಾದ್ದಿಲ್ಲ. ಒಂದಲ್ಲ ಒಂದು ಭಾಗದಲ್ಲಿ ಅಭಾವ ಪರಿಸ್ಥಿತಿ ಇದ್ದೇ ಇದೆ. ಪ್ರಕೃತಿ ಮುನಿದುಕೊಂಡರೆ ಮಾನವ ತನ್ನ ಬುದ್ಧಿ ಬಲದಿಂದ ಅದನ್ನು ಪಡೆದುಕೊಳ್ಳುವ ಯೋಚನೆಯನ್ನು ಮಾಡಬೇಕಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ ಇಸ್ರೇಲ್ ಮರಳುಗಾಡು. ಅಲ್ಲಿನ ಜನಗಳು ತಮ್ಮ ಬುದ್ಧಿ ಬಲದಿಂದ, ಸಾಧನೆ ಮತ್ತು ಶ್ರಮದ ಬಲದಿಂದ ತಮ್ಮ ರಾಜ್ಯವನ್ನು ನಂದನ ವನವನ್ನಾಗಿ ಮಾಡಿಕೊಂಡಿದ್ದಾರೆ. ಅಮೇರಿಕಾದಲ್ಲಿ ಅನೇಕ ಕಡೆ ಮಳೆ ಬಹಳ ಕಡಿಮೆ ಬಿದ್ದರೂ ಕೂಡ ಅಲ್ಲಿನ ಜನಗಳು ತಮ್ಮ ಬುದ್ಧಿ ಬಲದಿಂದ ಅವರು ಒಂದು ಸಮೃದ್ಧಿಯಾದ ರಾಷ್ಟ್ರವನ್ನು ಕಟ್ಟಿದ್ದಾರೆ. 1950ನೇ ಇಸವಿಯಿಂದ ಇಲ್ಲಿಯವರೆಗೂ ಕೂಡ ಜನತೆ ನಾನಾ ರೂಪದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ಸಹಾಯ ಮಾಡಿದರೂ ಕೂಡ ಈ ಅಭಾವ ಪರಿಸ್ಥಿತಿಗೆ ಪರಿಹಾರವನ್ನು ಹುಡುಕದೇ ಇರುವುದಕ್ಕೆ ಕಾಂಗ್ರೆಸ್ ಸರ್ಕಾರವೇ ಜವಾಬ್ದಾರರು ಎಂದು ಹೇಳಬೇಕಾಗುತ್ತದೆ. ಇದಕ್ಕೆ ಶಾಶ್ವತ ಪರಿಹಾರವನ್ನು ಸರ್ಕಾರದವರು ಯೋಚನೆ ಮಾಡದೆ "ಸಂಕಟ ಬಂದಾಗ ವೆಂಕಟರಮಣ" ಎನ್ನುವ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇವರು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಅನುಸರಿಸತಕ್ಕ ನೀತಿಯೂ ಒಂದು ಅಭಾವಕ್ಕೆ ಕಾರಣವಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ ಘಟಾಪ್ರಭಾ ಯೋಜನೆಯಲ್ಲಿ ಸುಮಾರು 71 ಮೈಲಿ ಉದ್ದದ ಕಾಲುವೆಯನ್ನು ತೆಗೆಯುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೂ ಆ ಪ್ರದೇಶದಲ್ಲಿರತಕ್ಕ ಜಮೀನಿಗೆ ನೀರು ಕೊಟ್ಟಿಲ್ಲ. ಇದೇ ರೀತಿ ತುಂಗಭದ್ರಾ ಯೋಜನೆ ದೊಡ್ಡ ಯೋಜನೆ. ಅದನ್ನು ಕಟ್ಟುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೂ ಸಹ ಆ ಪ್ರದೇಶದಲ್ಲಿರತಕ್ಕ ಎಲ್ಲಾ ಜಮೀನುಗಳಿಗೂ ನೀರನ್ನು ಒದಗಿಸಿಕೊಟ್ಟಿಲ್ಲ. ಟೈಲ್ ಎಂಡಿನಲ್ಲಿರತಕ್ಕ ಜಮೀನುಗಳಿಗೆ ನೀರನ್ನು ಒದಗಿಸಿ ಕೊಟ್ಟಿಲ್ಲ. ಹೇಮಾವತಿ ಯೋಜನೆಯನ್ನು ತೆಗೆದುಕೊಂಡು ಅದನ್ನು ಕಾರ್ಯಗತ ಮಾಡಿಲ್ಲ. ಕಾವೇರಿ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ನಮಗೂ ಮದ್ರಾಸಿನವರಿಗೂ ತೀವ್ರ ಜಿಜ್ಞಾಸೆ ಇದೆ. 1974ನೇ ಇಸವಿಯ ಒಳಗಾಗಿ ನಾವು ನಮ್ಮ ಭಾಗದ ನೀರನ್ನು ಉಪಯೋಗಿಸಿಕೊಳ್ಳದೇ ಹೋದರೆ ನಮ್ಮ ಹಕ್ಕು ಹೊರಟುಹೋಗುತ್ತದೆ ಎಂದು ಸರ್ಕಾರದವರು ತಿಳಿದಿದ್ದರೂ ಕೂಡ ಈ ಹೇಮಾವತಿ ಯೋಜನೆಯನ್ನು ಕಾರ್ಯಗತ ಮಾಡಿಲ್ಲ. ಈ ಯೋಜನೆ 30–40 ಕೋಟಿ ರೂಪಾಯಿಗಳ ದೊಡ್ಡ ಯೋಜನೆ. ಈ ಯೋಜನೆಯನ್ನು ಪ್ರಾರಂಭ ಮಾಡಿ 3–4 ವರ್ಷಗಳಾದುವು. 30-40 ಕೋಟಿ ರೂಪಾಯಿಗಳ ದೊಡ್ಡ ಯೋಜನೆಗೆ ಕೇವಲ 17 ಲಕ್ಷ ರೂಪಾಯಿಗಳನ್ನು ಬರೀ ಸಿಬ್ಬಂದಿ ವರ್ಗದವರಿಗೆ ಮಾತ್ರ ಖರ್ಚು ಮಾಡಿದ್ದಾರೆ. ಸರ್ಕಾರದವರು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಯಾವರೀತಿ ಪ್ರಯತ್ನ ಮಾಡಿದ್ದಾರೆ ಎಂಬುದು ಇದರಿಂದಲೇ ಅರ್ಥವಾಗುತ್ತದೆ. ಇದರ ಜೊತೆಗೆ ಹಾರಂಗಿ ಯೋಜನೆಯನ್ನು ಮಾಡಿದ್ದರೆ ಸುಮಾರು ಎಂಬತ್ತು ಸಾವಿರ ಎಕರೆಗಳಷ್ಟು ಭೂಮಿಗೆ ಅನುಕೂಲ ಸಿಗುತ್ತಿತ್ತು. ಕೇಂದ್ರದಿಂದ ಕೇವಲ 2. 5 ಕೋಟಿಯಷ್ಟು ಹಣ ಮಾತ್ರ ಪರಿಹಾರಕಾರ್ಯಗಳಿಗಾಗಿ ಕೊಟ್ಟಿದ್ದಾರೆ. ಕಳೆದ ಸಾಲಿನಲ್ಲಿ ಸುಮಾರು ಐದು ಕೋಟಿಯಷ್ಟು ಸಹಾಯ ಮಾಡಿದ್ದರು ಅಲ್ಲದೆ ನಮ್ಮ ರಾಜ್ಯಕ್ಕೆ ಎಷ್ಟು ಅಭಾವ ಸ್ಥಿತಿ ಇದೆ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಲು ಸಹ ಜೂನ್ ತಿಂಗಳಲ್ಲಿ ಒಂದು ಸ್ಟಡೀ ಟೀಂ ಇಲ್ಲಿಗೆ ಬಂದಿತ್ತು. ನಮ್ಮ ರಾಜ್ಯಕ್ಕೆ ಹೊರಗಿನವರು ಬಂದು ನೋಡುವುದಾದರೂ ಏನಿದೆ? ನಮ್ಮ ರಾಜ್ಯದಲ್ಲಿ ಕ್ಷಾಮದ ಪರಿಸ್ಥಿತಿ ಇದೆ ಎಂದು ಇವರು ಸಮರ್ಥಿಸುವುದಕ್ಕಾಗಿ ಬಂದಿದ್ದರು ಎಂದು ಹೇಳಬಹುದು. ಆದರೆ ಈ ಸ್ಟಡೀ ಟೀಂ ನವರಿಗೆ ನಮ್ಮ ರಾಜ್ಯದವರೇ ಎಲ್ಲ ಅಂಕಿ ಅಂಶಗಳನ್ನೂ ಕೊಡುವಾಗ ಇವರು ಹೊಸದಾಗಿ ಬಂದು ಇಲ್ಲಿ ಮಾಡುವುದೇನೂ ಇರಲಿಲ್ಲ. ನಮ್ಮ ರಾಜ್ಯದವರು ಏನು ವಿವರಗಳನ್ನು

ಕೊಡುತ್ತಾರೋ ಅದನ್ನೇ ತೆಗೆದುಕೊಂಡು ಅದರ ಬಗ್ಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹೊರಗಿನವರು ಇಲ್ಲಿಗೆ ಬರುವುದು ಅಪ್ರಕೃತ. ನಾವು ಕೇಂದ್ರದವರನ್ನು ಸುಮಾರು 8.3 ಕೋಟಿಗಳಷ್ಟು ಪರಿಹಾರಕಾರ್ಯಗಳಿಗಾಗಿ ಸಹಾಯ ಬೇಕು ಎಂದು ಕೇಳಿದರೂ ಅವರು ಮಂಜೂರು ಮಾಡಿರುವುದು ಕೇವಲ 2. 5 ಕೋಟಿಯಷ್ಟು ಮಾತ್ರ. ಉಳಿದ ಹಣವನ್ನು ನಮ್ಮ ಸ್ಟೇಟು ಪ್ಲಾನುಗಳಲ್ಲಿ ಮಾಡಿರುವುದರಲ್ಲಿ ಇದಕ್ಕೆ ತಕ್ಕಂತೆ ಅಳವಡಿಸಿಕೊಳ್ಳಬೇಕೆಂದು ಸೂಚನೆಗಳನ್ನು ಕಳುಹಿಸಿದ್ದಾರೆ. ಹೀಗೆ ಕೇಂದ್ರದವರು ಸ್ಟೇಟು ಪ್ಲಾನಿನೊಳಗೆ ಇದನ್ನೆಲ್ಲಾ ಒದಗಿಸಿಕೊಳ್ಳಬೇಕು ಎಂದು ಹೇಳುವುದು ಸಾಧುವಾದ ವಾದವಲ್ಲ. ಸರಕಾರ ಈ ಪರಿಸ್ಥಿತಿಯನ್ನು ಸರಿಯಾಗಿ ಎದುರಿಸದೇ ಹೋದರೆ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ರೀತಿಯ ಅಲ್ಲಕಲ್ಲೋಲವಾಗಬಹುದು ಎಂದು ಹೇಳುವುದು ಸರಿಯಲ್ಲ. ಇದರ ಪರಿಣಾಮ ಇಡೀ ದೇಶದಮೇಲೆ ಬೀಳುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳುವಾಗ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಉಪಯೋಗವಾಗುವಂತೆ ಸುಮಾರು ಹತ್ತು ಸಾವಿರ ರೂಪಾಯಿ ಬೆಲೆಯ ಜೋಳವನ್ನು ಕೂಲಿ ಮಾಡುವ ಜನಕ್ಕೆ ಕಡಿಮೆ ಬೆಲೆಯಲ್ಲಿ ಒದಗಿಸಬೇಕೆಂದಿದ್ದೇವೆ ಎಂದು ಹೇಳಿದರು. ಇದರ ಲೆಕ್ಕ ನೋಡಿದರೆ ಒಬ್ಬರಿಗೆ ಕೇವಲ ಎರಡು ಕೆ.ಜಿ. ಯಷ್ಟು ಸಿಗಬಹುದು ಎಂದು ಇಟ್ಟುಕೊಂಡರೂ ಇದಕ್ಕಾಗಿ ಸುಮಾರು 30—40 ಸಾವಿರ ಟನ್ನುಗಳಷ್ಟು ಧಾನ್ಯ ಹೆಚ್ಚಾಗಿ ಬೇಕಾಗುತ್ತದೆ ಇಷ್ಟನ್ನೂ ಒದಗಿಸಿಕೊಡುವ ಜವಾಬುದಾರಿ ಸರಕಾರದ ಮೇಲಿದೆ. ಆ ಜವಾಬುದಾರಿ ಸರಕಾರದ ಮೇಲಿಲ್ಲ ಎಂದು ಅವರು ಪೂರ್ತಿಯಾಗಿ ಹೇಳಲು ಸಿದ್ಧವಿಲ್ಲ. ಇಂದು ಕೋಟ್ಯಂತರ ಬಡ ಜನರು ಈ ಕ್ಷಾಮದ ಪರಿಸ್ಥಿತಿಯಿಂದ ಮತ್ತು ದಿನನಿತ್ಯ ಜನತೆಗೆ ಬೇಕಾಗುವ ಪದಾರ್ಥಗಳ ಬೆಲೆಗಳು ವಿಪರೀತವಾಗಿ ಏರುತ್ತ ಹೋಗುತ್ತಿರುವುದರಿಂದ ಇದನ್ನು ಸರಕಾರ ತಡೆಗಟ್ಟುವುದಕ್ಕಾಗುತ್ತಿಲ್ಲ. ಹಿಂದೆ ಈ ಬೆಂಗಳೂರು ನಗರದಲ್ಲಿ ಎಣ್ಣೆ ಬೆಲೆ ಬಹಳ ಏರಿದೆ ಎಂದು ಹೇಳಿದಾಗ ಅದನ್ನು ತಗ್ಗಿಸಲು ತಕ್ಕ ಕ್ರಮ ಕೈಗೊಂಡಿದ್ದರು. ಆದರೆ ಇಂದು ಕಡ್ಲೆಕಾಯಿ ಎಣ್ಣೆ ಬೆಲೆ ನೋಡಿದರೆ ಒಂದು ಕೆ ಜಿ ಗೆ ಸುಮಾರು ಐದು ರೂಪಾಯಿಗೆ ಮೇಲ್ಪಟ್ಟು ಮಾರುತ್ತಿದ್ದಾರೆ. ಇಂತಹ ಸಣ್ಣ ಸಣ್ಣ ಪದಾರ್ಥಗಳ ಬೆಲೆ ಏರುತ್ತಿರುವುದನ್ನು ತಡೆಗಟ್ಟುವುದಕ್ಕೆ ಆಗುತ್ತಿಲ್ಲ. ಸರಕಾರ ಇದರ ಗಮನ ಕೊಡಬೇಕಾಗಿದೆ. ಇಂತಹ ಸಣ್ಣ ವಿಚಾರಗಳನ್ನೇ ಎದುರಿಸುವುದಕ್ಕಾಗದೇ ಇರುವಾಗ ಈ ಸರಕಾರದವರು ಕ್ಷಾಮದ ಪರಿಸ್ಥಿತಿಯನ್ನು ಹೇಗೆತಾನೇ ಎದುರಿಸುತ್ತಾರೆ ? ಕ್ಷಾಮ ಈ ದೇಶದಲ್ಲಿ ಬಂದಿದೆ ಎಂದು ನಮ್ಮ ಮುಂದೆ ಒಂದು ಪಟ್ಟಿಯನ್ನೂ ಇಟ್ಟಿದ್ದಾರೆ. ಹಿಂದೆ ಧಾತು ಈಶ್ವರ ಸಂವತ್ಸರದಲ್ಲಿ ಒಂದು ರೀತಿಯಾಗಿ ಘೋರ ಕ್ಷಾಮ ಬಂತು. ಆಗ ಎಷ್ಟೋ ಜನ ಗೆಡ್ಡೆ ಗೆಣಸುಗಳನ್ನು ತಿಂದು ಎಷ್ಟೋ ಜನರು ಸತ್ತರು ಎಂದು ನಾವು ಚರಿತ್ರೆಗಳನ್ನು ಓದುವುದರಿಂದ ತಿಳಿದುಕೊಂಡಿದ್ದೇವೆ. ಅದೇ ರೀತಿ ಇಂದು ಬಂದಿರುವ ಕ್ಷಾಮದ ಪರಿಸ್ಥಿತಿಯಿಂದಲೂ ಅನೇಕ ಕಡೆ ಹಳ್ಳಿಗಳಲ್ಲಿನ ಜನರು ಗೆಡ್ಡೆ ಗೆಣಸುಗಳನ್ನು ತಿಂದು ಸತ್ತಿದ್ದಾರೆ. ಇದರ ವಿಚಾರಗಳನ್ನು ನಮಗೆ ತಿಳಿಸದೇ ಸರಕಾರದವರು ಮುಚ್ಚಿಡುತ್ತಿದ್ದಾರೆ. ಕ್ಷಾಮ ಬಂದಿರುವ ಈ ಸಮಯದಲ್ಲಿ ಯಾವ ರೀತಿಯ ಸಂಶಯವೂ ನಮಗೆ ಬೇಡ. ಹಿಂದೆ ಬಂದಿರುವ ನಮ್ಮ ಅನುಭವದ ಪ್ರಕಾರ ನೋಡಿದರೆ ಯಾವ ರೀತಿಯಾಗಿ ಮಳೆಗಾಗಿಯೇ ನಂಬಿಕೊಂಡು ಬೀಜವನ್ನು ಬಿತ್ತಿ ಉತ್ತು ಬೆಳೆಯುತ್ತಿದ್ದರು ಎನ್ನುವುದು ಸುಮಾರು ಇಪ್ಪತ್ತು ವರ್ಷಗಳ ಸೈಕಲ್ ನಮ್ಮ ಮುಂದೆ ಸಿಗುತ್ತದೆ. ಆ ರೀತಿಯಾಗಿ ಮಳೆ ಬರುತ್ತದೋ ಇಲ್ಲವೋ ಎನ್ನುವುದನ್ನು ನೋಡಿಕೊಂಡು ಶಾಶ್ವತವಾದ ಪರಿಹಾರ ಕ್ರಮಗಳನ್ನು ಯಾವ ರೀತಿಯಾಗಿ ಮಾಡಬೇಕು ಎನ್ನುವುದನ್ನು ಕಂಡುಹಿಡಿಯಲು ಪ್ರಯತ್ನ ಮಾಡಬೇಕು. ಮತ್ತು ಇದರ ಬಗ್ಗೆ ಒಂದು ಧೈರ್ಯವಾದ ಹೆಜ್ಜೆಯನ್ನು ಇಟ್ಟು ಸರಕಾರ ಮುಂದುವರಿಯಬೇಕು ಎಂದು ಸರಕಾರವನ್ನು ಕೇಳಿಕೊಳ್ಳಬೇಕಾಗಿದೆ. ಅಲ್ಲದೆ ಇದರಲ್ಲಿ ಹೇಳಿರುವಂತೆ ಕ್ಷಾಮದ ಪರಿಸ್ಥಿತಿಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳು ಸರಕಾರದ ಆಜ್ಞೆಗೆ ಸರಿಯಾದ ಮನ್ನಣೆ ಕೊಡುತ್ತಿಲ್ಲ. ಇಂಥ ಅಧಿಕಾರಿಗಳ ವರ್ತನೆ ಸರಿಯಾದ್ದಲ್ಲ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು.

ಇನ್ನು ಬಾವಿಗಳಿಗಾಗಿ ಸಾಲಗಳನ್ನು ಕೊಡುತ್ತಿದ್ದಾರೆ. ಇವರು ಮಾಡುವ ಕೆಲಸಗಳು ಹೇಗಾಗಿದೆ ಎಂದರೆ ನೆಲ ಹರಿದೇ ಇರುವ ಜಾಗದಲ್ಲಿ ಮಣ್ಣಿನ ಕೆಲಸ ಮಾಡುವುದು ನೀರು ಬಾರದೇ ಇರುವ ಜಾಗದಲ್ಲಿ ಬಾವಿಗಳನ್ನು ತೆಗೆಸುವುದು ಇತ್ಯಾದಿ ಕೆಲಸಗಳಿಗಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಹೀಗೆ ಅವಶ್ಯಕತೆ ಇಲ್ಲದೇ ಇರುವ ಕೆಲಸಗಳಿಗಾಗಿ ಖರ್ಚು ಮಾಡುವುದಕ್ಕೆ ಹೋದರೆ ಅದರಿಂದೇನೂ ಅನುಕೂಲವಾಗುವುದಿಲ್ಲ ಎಂದು ಸ್ಪಷ್ಟವಾಗಿ ಇಲ್ಲಿ ನಾನು ಹೇಳುತ್ತೇನೆ. ತಾತ್ಕಾಲಿಕವಾಗಿ ಇಲ್ಲಿ ಒಂದು ಪಟ್ಟಿ ಕೊಟ್ಟು ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಅಂಕಿ ಅಂಶಗಳನ್ನು ಹೇಳಿದ್ದಾರೆ. ಇದರ ಬಗ್ಗೆ ಅನೇಕರು ಮಾತನಾಡಿದ್ದಾರೆ. ಈಗೇನೋ ಅಲ್ಪಾವಧಿ, ಸಾಲ ಕೊಟ್ಟು ಪಂಪು ಸೆಟ್ಟುಗಳನ್ನು ಹಾಕಿಸಿ ಹೆಚ್ಚು ಉತ್ಪನ್ನ

(ಶ್ರೀ ಎಚ್. ಬಿ. ಜ್ವಾಲನಯ್ಯ)

ಮಾಡಲು ಸಹಾಯ ಮಾಡಬೇಕೆಂದು ಮಾಡುತ್ತಿದ್ದಾರೆ. ಆದರೆ ಇಂದು ರೈತ ಅಷ್ಟು ಹಣ ಕೊಟ್ಟು ಅದನ್ನು ತೆಗೆದುಕೊಳ್ಳಲು ಶಕ್ತಿ ಇಲ್ಲ. ಇದಕ್ಕಾಗಿ ಸರಕಾರದವರೇ ಹಳ್ಳಿಗಾಡಿನ ರೈತರಿಗೆ ಅನುಕೂಲವಾಗುವಂತೆ ಪವರು ಲೈನನ್ನು ಎಲ್ಲೆಲ್ಲಿ ಎಳೆಯಲು ಸಾಧ್ಯವೋ ಅಲ್ಲೆಲ್ಲಾ ಎಳೆದು ಎಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ಪಂಪುಸೆಟ್ಟುಗಳನ್ನು ನೀವೇ ಹಾಕಿಸಿಕೊಡಬೇಕು. ಈಗೇನೋ ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕು ಎಂದು ಮಾಡಿ ಅದರ ಮೂಲಕ ರೈತ ತೆಗೆದುಕೊಳ್ಳಬೇಕು ಎಂದು ಮಾಡಿದ್ದಾರೆ. ಆದರೆ ನಮ್ಮ ರಾಜ್ಯದ ರೈತರು, ತಿಳುವಳಿಕೆ ಇಲ್ಲದುದರಿಂದ, ಸಾಲಕ್ಕಾಗಿ ಸುತ್ತಿ ಸುತ್ತಿ ಬಹಳ ಕಷ್ಟಪಡುತ್ತಿದ್ದಾರೆ. ಇದನ್ನು ತಪ್ಪಿಸಿ ಅವರಿಗೆ ಸಹಾಯ ಒದಗುವ ವ್ಯವಸ್ಥೆ ಮಾಡಬೇಕು.

ಇನ್ನು ಬರಗಾಲಕ್ಕೆ ಅನುಕೂಲವಾಗುವಂತೆ ನಮ್ಮಲ್ಲಿರುವ ಸಣ್ಣ ಹಾಗೂ ದೊಡ್ಡ ನದಿಗಳಿಗೆ ಪ್ರವಾಹ ಕಾಲದಲ್ಲಿ ಹೆಚ್ಚು ನೀರು ಬಂದು ಅವು ಸಣ್ಣ ಕರೆಗಳಿಗೆ ಹರಿದು ಹೋಗುತ್ತವೆ ಮತ್ತು ಕೆಲವು ಕಡೆ ಇರುವ ಕೆರೆಯ ಅಂಗಳದಲ್ಲಿ ನೀರು ನಿಲ್ಲದೆ ನಾಶವಾಗಿ ಹೋಗುತ್ತದೆ. ಇಂತಹ ಸಣ್ಣ ಕೆರೆಗಳ ತೂಬುಗಳನ್ನು ಹಾಗೂ ಒಡೆದು ಹೋಗಿರುವ ಕೆರೆಗಳನ್ನು ರಿಪೇರಿ ಮಾಡಬೇಕು. ಇದರ ಬಗ್ಗೆ ಮೊದಲು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈಗ ಸರಕಾರ ಕೆಲಸಗಳನ್ನು ಹೇಗೆ ಮಾಡುತ್ತಿದೆ ಎಂದರೆ ಎಲ್ಲ ಕಡೆಗಳಲ್ಲೂ ಕೆಲಸಗಳನ್ನು ಬೇಗನೆ ಮಾಡಬೇಕೆಂದು ಕೆಲಸಗಳನ್ನು ಆರಂಭ ಮಾಡುತ್ತಾರೆ. ಆದರೆ ಯಾವ ಕೆಲಸವನ್ನೂ ಪೂರ್ತಿಯಾಗಿ ಮಾಡಿ ಮುಗಿಸುವುದಿಲ್ಲ. ಎಲ್ಲವನ್ನೂ ತಿರುಪತಿ ಕ್ಷೌರ ಮಾಡುವಂತೆ ಮಾಡುತ್ತಿದ್ದಾರೆ. ಹೀಗೆ ನೋಡಿದರೆ ಯಾವ ಯಾವ ಕೆಲಸಗಳನ್ನು ಪೂರ್ತಿಯಾಗಿ ಮಾಡಬೇಕು ಎನ್ನುವುದರ ಟಾರ್ಜೆಟ್ ಒಂದನ್ನೂ ಸರಿಯಾಗಿ ಇಟ್ಟುಕೊಂಡಿಲ್ಲ. ಯಾವ ಕೆಲಸಗಳನ್ನು ಆರಂಭ ಮಾಡಿದ್ದೀರೋ ಅವನ್ನು ಮೊದಲು ಮಾಡಿ ಮುಗಿಸದೇ ಇದ್ದರೆ ಅದು ಹಣದ ಮೇಲೆ ಹಾಕಿದಂತಾಗುತ್ತದೆ ಎಂದು ನಾನು ಹೇಳುತ್ತೇನೆ. ರಾಜ್ಯದಲ್ಲಿ ಭೂಗರ್ಭದಲ್ಲಿ ಎಷ್ಟು ನೀರಿನ ಅಂಶ ಸಿಗುತ್ತದೆ ಎನ್ನುವುದರ ಅಂಕೆ ಅಂಶಗಳನ್ನು ಪರಿಶೀಲಿಸಿ ಆ ನೀರನ್ನು ಉಪಯೋಗ ಮಾಡಬೇಕು ಎಂದರೆ ಅದಕ್ಕೆ ಹಣವಿಲ್ಲ ಎಂದು ಹೇಳುವುದು ಸರಿಯಲ್ಲ. ಅಲ್ಲದೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಸರಕಾರದವರು ಒಂದು ರಸ್ತೆಯನ್ನೂ ಸರಿಯಾಗಿ ಮಾಡುತ್ತಿಲ್ಲ. ಹಾಸನ ಮತ್ತು ಮಂಗಳೂರು ರಸ್ತೆಯನ್ನು ''ಓರ್ ಕ್ಯಾರೀಯಿಂಗು ರೋಡು'' ಎಂದು ಮತ್ತು ಇದಕ್ಕೆ ಮೈನ್ ಓನರುಗಳೇ ಒತ್ತಾಯ ತಂದುದರಿಂದ ಮಿನರಲ್ ಡೆವಲಪ್‌ಮೆಂಟು ಬೋರ್ಡಿನವರು ಸುಮಾರು 4.92 ಲಕ್ಷದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಹಾಗೇ ಸರಕಾರ ಬಸ್ಸು ರಾಷ್ಟ್ರೀಕರಣ ಮಾಡಬೇಕೆಂದು ದಕ್ಷಿಣ ಕನ್ನಡ ಮಂಗಳೂರು ಹಾಗೂ ಶಿವಮೊಗ್ಗ ಇಲ್ಲಿ ಬಸ್ಸುಗಳ ರಾಷ್ಟ್ರೀಕರಣ ಮಾಡಲು ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಹೀಗೆ ಹೊಸ ಹೊಸದಾದ ಉದ್ಯಮಗಳನ್ನು ಈ ಮಂತ್ರಿಮಂಡಲದವರು ಮಾಡುವುದರ ಅವಶ್ಯಕತೆಯಾದರೂ ಏನಿತ್ತು? ಸುಮ್ಮನೆ ಬಡ ಜನತೆಗೆ ಅನುಕೂಲವಾಗದಂತಹ ಕೆಲಸಗಳನ್ನು ಮಾಡುವುದು ಬಿಡಬೇಕು. ಮುಂದಿನ ಡಿಸೆಂಬರು ತಿಂಗಳಲ್ಲಿ ಎಲ್ಲ ತಾಲ್ಲೂಕು ಬೋರ್ಡುಗಳಲ್ಲೂ ಚುನಾವಣೆಗಳು ನಡೆಸಬೇಕು ಎಂದು ಇದಕ್ಕಾಗಿ ಹೆಚ್ಚು ಹಣ ವೆಚ್ಚಮಾಡಬೇಕು ಎನ್ನುವ ಭಾವನೆ ಈ ಸರಕಾರಕ್ಕಿದೆ ಎಂದು ಜನತೆ ಅಲ್ಲಲ್ಲಿ ಹೇಳುತ್ತಾ ಬರುತ್ತಿದ್ದಾರೆ. ಇದನ್ನು ಮಾಡುವುದಕ್ಕಾಗಿ ರೆವೆನ್ಯೂ ಡಿಪಾರ್ಟ್‌ಮೆಂಟಿಗೆ ಇಷ್ಟೊಂದು ಭಾರಿ ಕೆಲಸಗಳನ್ನು ಮಾಡಬೇಕೆಂದು ಹಣ ಒದಗಿಸಿ ಆ ಹಣವನ್ನು ತಾಲ್ಲೂಕು ಬೋರ್ಡುಗಳ ಚುನಾವಣೆಗೆ ಉಪಯೋಗಿಸಬೇಕೆಂದು ಮಾಡಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದರ ಜೊತೆಗೆ ಮಂತ್ರಿಮಂಡಲದವರು ಒಂದು ತೀರ್ಮಾನ ಕೈಗೊಂಡಿದ್ದಾರೆ. ಪ್ರತಿಯೊಂದು ಜಿಲ್ಲೆಯನ್ನೂ ಒಬ್ಬೊಬ್ಬ ಮಂತ್ರಿಗಳ ನೇತೃತ್ವದಲ್ಲಿ ಕೆಲಸ ಮಾಡಲು ಅವರಿಗೆ ಅಧಿಕಾರ ವಹಿಸಬೇಕೆಂದು ಹೇಳುತ್ತಿದ್ದಾರೆ. ಈ ರೀತಿ ಮಾಡಲು ಅವರುಗಳು ಪ್ರವಾಸ ಹೋಗಬೇಕಾಗುತ್ತದೆ. ಇಂತಹ ಪ್ರವಾಸಗಳನ್ನು ಮಾಡುವುದು ಬಿಟ್ಟು ಇದರಿಂದ ಉಳಿಯುವ ದುಡ್ಡನ್ನು ಅಲ್ಲಲ್ಲಿ ಗಂಜೀ ಕೇಂದ್ರಗಳನ್ನು ತೆರೆಯಲು ಸಹಾಯ ಮಾಡಿ ಅಲ್ಲಿನ ಬಡ ಜನರಿಗಾಗಿ ಖರ್ಚು ಮಾಡುವುದು ಸೂಕ್ತವಾಗಿರುತ್ತದೆ. ಇಂತಹ ಅಭಾವದ ಪರಿಸ್ಥಿತಿಗೆ ನಮ್ಮ ರಾಜ್ಯದಲ್ಲಿರುವ ಮಂತ್ರಿಮಂಡಲದ ನೀತಿಯೇ ಕಾರಣ ಎಂದು ನಾನು ಸರಕಾರದ ಮೇಲೆ ಚಾರ್ಜು ಮಾಡುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿರುವ ಅಭಾವ ಪರಿಸ್ಥಿತಿಯನ್ನು ಕುರಿತು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಠರಾವು ತಂದು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ರಾಜ್ಯದಲ್ಲಿ ಬರಗಾಲ ಎನ್ನುವುದು ಮೊದಲಿನಿಂದಲೂ

ಅಂದರೆ ಬ್ರಿಟಿಷರ ಕಾಲದಿಂದ ಹಿಡಿದು ಇಲ್ಲಿಯವರೆಗೂ ಒಂದಲ್ಲ ಒಂದು ಭಾಗದಲ್ಲಿ ಬರುತ್ತಲೇ ಇದೆ. ದೇಶದಲ್ಲಿ ನಾವು ಕೈಕೊಂಡ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಮಾಡಿದ್ದರೆ ಇಂದು ಈ ಕ್ಷಾಮದ ಪರಿಸ್ಥಿತಿ ಹೋಗಬಹುದಾಗಿತ್ತು. ಈಗಿರುವ ಜನರಲ್ಲಿ ಬಡತನ ಬಹುಮಟ್ಟಿಗೆ ಕಡಿಮೆಯಾಗುತ್ತಿತ್ತು. ಈ ಯೋಜನೆಗಳ ಉದ್ದೇಶ ಬಡತನ ಹೋಗಬೇಕೆಂದು ಇದ್ದರೂ ಅದು ಕಾರ್ಯಗತವಾಗದೇ ಕಾರಣಾಂತರದಿಂದ ಇಲ್ಲಿಯವರೆಗೆ ಸಾಧ್ಯವಾಗಿಲ್ಲ. ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಈ ದೇಶ ಇಟ್ಟುಕೊಂಡಿದ್ದರೂ ಬರಗಾಲ ಎನ್ನುವುದು ನಮ್ಮ ದೇಶದಲ್ಲಿ ಬೆಳೆದಿದೆ. ಬೆಳೆಯುತ್ತಿದೆ. ಕೇಂದ್ರ ಸರ್ಕಾರದವರೂ ಅಭಿವೃದ್ಧಿ ಕಾರ್ಯಗಳಿಗೆ ಸಾಲ ಎತ್ತಿ ಅದರ ಗಾತ್ರ ದಿನೇ ದಿನೇ ಬೆಳೆಯುತ್ತಿದೆ. ಆದರೆ ಯೋಜನೆಗಳಿಂದ, ಯಾರಿಗೆ ಆನಂದವಾಗಿದೆ, ದನಕರುಗಳಿಗೆ ಮೇವಿನ, ನೀರಿನ ದಾಹ, ಜನಗಳಿಗೆ ಅನ್ನದ, ನೀರಿನ ದಾಹ ಇತ್ಯಾದಿಗಳು ಇನ್ನೂ ದೊರೆಯುದೇ ಇರುವುದು ಬಹಳ ದುಃಖಕರವಾದ ಅಂಶ. ಇಂದಿನ ಈ ಅಭಾವದ ಪರಿಸ್ಥಿತಿ ಹೋದ ವರ್ಷಕ್ಕಿಂತ ಇಂದು ಪರಿಣಾಮಕಾರಿಯಾಗಿ ಬರುತ್ತಿದೆ ಎಂದು ಹೋದ ಸಾರಿ ಕೂಡ ಇಲ್ಲಿ ಚರ್ಚೆ ಮಾಡಿದೆವು, ಪುನಃ ಪುನಃ ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ಬಂದಿದೆ ಮತ್ತು ಇದಕ್ಕೆ ತಕ್ಕ ಏರ್ಪಾಡೂ ಉಂಟಾಗಬೇಕು.

ನಮ್ಮ ರಾಜ್ಯದಲ್ಲಿ ಸಾಕಷ್ಟು ನದಿಗಳಿವೆ, ಅಣೆಕಟ್ಟುಗಳನ್ನು ಕೆರೆ ಬಾವಿಗಳನ್ನು ಕಟ್ಟಿಸಿದರೆ ನಮ್ಮಲ್ಲಿ ನೀರಿನ ಅಭಾವವಾಗಲಿ ಕೊರತೆಯಾಗಲಿ ಇದೆಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ನಾವು ಅವುಗಳನ್ನು ಹೇಗೆ ಉಪಯೋಗ ಮಾಡಬೇಕು ಎಂಬ ರೀತಿ ನೀತಿಗಳನ್ನು ಮಾತ್ರ ಮರೆತಿದ್ದೇವೆ. ನಮ್ಮ ರಾಜ್ಯದಲ್ಲಿ ಎಷ್ಟೋ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಆದಾಗ್ಯೂ ನಾವು ವರ್ಷಂ ಪ್ರತಿ ಬರಗಾಲದ ಬಗ್ಗೆ ಎರಡು—ಮೂರು ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದು ಮಾತ್ರ ತಪ್ಪಲಿಲ್ಲ. ಮೇಲಾಗಿ ನಾವು ಪ್ರತಿ ವರ್ಷವೂ ನಮ್ಮ ರಾಷ್ಟ್ರ ಸಂಪತ್ತೂ ಮತ್ತು ರಾಜ್ಯಗಳ ಸಂಪತ್ತೂ ಹೆಚ್ಚುತ್ತಾ ಇದೆ ಎಂದು ಅಂಕೆ ಸಂಖೆಗಳನ್ನೂ ಕೊಡುತ್ತಿದ್ದೇವೆ. ಆದರೇನು ಬಡವ ಮತ್ತಿಷ್ಟು ಬಡವನಾಗುತ್ತಿದ್ದಾನೆ; ಮಧ್ಯಮ ವರ್ಗದ ಜನ ಕೂಲಿಗಾರರಾಗುತ್ತಿದ್ದಾರೆ. ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ. ಅಂಥ ಪರಿಸ್ಥಿತಿಯುಂಟಾಗಿದೆ. ಈ ದಿವಸ ಯಾವ ಗ್ರಾಮಕ್ಕೇ ಹೋಗಲಿ ಸಾಲವಿಲ್ಲದ ವ್ಯಕ್ತಿಯಿಲ್ಲ. ಪ್ರತಿಯೊಬ್ಬ ದೊಡ್ಡ ದೊಡ್ಡ ಜಮೀನ್ದಾರನೂ ತನ್ನ ಆಸ್ತಿಯನ್ನು ಯಾವುದಾದರೊಂದು ಬ್ಯಾಂಕಿಗೋ ಅಥವಾ ಸೊಸೈಟಿಗೋ ಆಧಾರ ಮಾಡಿರುತ್ತಾನೆ. ಆತನಲ್ಲಿ ಸಾಲಕ್ಕೆ ಸಿಗದೆ ಭೂಮಿ ಒಂದು ಅಂಗುಲ ಸಹಾ ಉಳಿದಿಲ್ಲ. ಇದು ಏನನ್ನು ಸೂಚಿಸುತ್ತಿದೆ ಎಂದರೆ ರಾಜ್ಯದಲ್ಲಿ ಬಡತನ ಹೆಚ್ಚುತ್ತಿದೆ ಎಂಬುದನ್ನು ತೋರಿಸುತ್ತದೆ. ನಾವು ಇಂಥ ಪರಿಸ್ಥಿತಿಯಲ್ಲಿ ಜನತೆಗೆ ನಿಜವಾಗಿಯೂ ಒಂದು ಕಲ್ಯಾಣವನ್ನು ಉಂಟು ಮಾಡಬೇಕಾಗಿದ್ದರೆ ನಾವು ಅಭಾವ ಎಂಬ ಶಬ್ದವನ್ನು ತೆಗೆದು ಮೊದಲು ರಾಜ್ಯ ಕ್ಷಾಮ ಪೀಡಿತ ರಾಜ್ಯ ಎಂಬುದಾಗಿ ಡಿಕ್ಲೇರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹಿಂದೆ ಚೈನಾ ಪಾಕೀಸ್ಥಾನಗಳು ಧಾಳಿ ನಡೆಸಿದ್ದ ಕಾಲಕ್ಕೆ ದೇಶದಲ್ಲಿ ತುರ್ತು ಪರಿಸ್ಥಿಯೆಂದು ಡಿಕ್ಲೇರ್ ಮಾಡಲಾಗಿತ್ತೋ ಅದೇ ತುರ್ತುಪರಿಸ್ಥಿತಿಯನ್ನು ಇಂದೂ ಕೂಡ ಡಿಕ್ಲೇರ್ ಮಾಡಬೇಕು. ರಾಜ್ಯದಲ್ಲಿರತಕ್ಕ ರೈತನ ಪರಿಸ್ಥಿತಿ ಉತ್ತಮವಾಗುವವರೆಗೂ ತುರ್ತುಪರಿಸ್ಥಿತಿಯನ್ನು ಮುಂದುವರಿಸಬೇಕು.

5-00 P.M.

ನಮಗೆ ಈಗ ಒದಗಿರತಕ್ಕ ಕ್ಷಾಮದ ದವಡೆಯಿಂದ ಪಾರಾಗಬೇಕಾಗಿದ್ದರೆ ಇನ್ನೂ ಬಹಳ ಕಾಲಬೇಕು. ಆಹಾರದ ವಿಷಯದಲ್ಲಿ ನಾವು ಸ್ವಾವಲಂಬಿಗಳಾಗುವತನಕ ರಾಜ್ಯದಲ್ಲಿ ಈ ಎಮರ್ಜೆನ್ಸಿ ಇರುತ್ತದೆಂದು ಸಾರಬೇಕು. ಬರಗಾಲ ಬಂದಾಗಲೆಲ್ಲಾ ಪರಿಹಾರಕಾರ್ಯಗಳಿಗಾಗಿ ಹೀಗೆ ಖರ್ಚು ಮಾಡುವ ಬದಲು ನಾವು ಮೊದಲಿಂದಲೂ ಒಂದು ಶಾಶ್ವತವಾದ ಪರಿಹಾರ ಮಾರ್ಗಕ್ಕೆ ಕೈಹಾಕಿದ್ದರೆ ಹೀಗಾಗುತ್ತಿರಲಿಲ್ಲ. ನಾವು ಈ ದಿವಸ ಅಪ್ಪರ್ ಕೃಷ್ಣಾ ಯೋಜನೆಯನ್ನು ಕೈಗೊಂಡಿದ್ದೇವೆ ಎಂದು ಹೇಳುತ್ತಿದ್ದೇವೆ. ಅಲ್ಲಿ ಎರಡು ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಆದರೆ ಆ ಹಣವನ್ನು ಕಾಲ್ವೆ, ನಾಲೆಗಳಿಗೆ ಉಪಯೋಗ ಮಾಡದೆ ಅಧಿಕಾರಿಗಳ ಹಾಗೂ ನೌಕರರ ವಸತಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ವೆಚ್ಚ ಮಾಡಿದ್ದಾರೆ. ಈ ದಿವಸ ಎಷ್ಟು ಜನ ಬಡವರು ಗುಡಿಸಲುಗಳಲ್ಲಿ ಇಲ್ಲಾ? ಆಫೀಸರು ಎಂದು ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ, ನೀರಿಗೆ, ಲೈಟಿಗೆ ಹಣವನ್ನು ವೆಚ್ಚ ಮಾಡತಕ್ಕದ್ದು ಅನುಚಿತ. ಹೀಗಾದರೆ ಕೆಲಸಗಳು ಎಷ್ಟು ವರ್ಷಗಳಾದರೂ ಮುಗಿಯುವುದಿಲ್ಲ. ಈ ಕಾರ್ಯಗಳನ್ನು ಒಂದು ವಾರ್ ಫುಟಿಂಗ್ ಮೇಲೆ ನಡೆಸಬೇಕು. ಹಾಗೆ ಮಾಡದಿದ್ದರೆ ರಾಜ್ಯಕ್ಕೆ ಕ್ಷೇಮವಿಲ್ಲ. ಆಗಲೇ ಶ್ರೀಮಾನ್ ದೇವರಾಜ್

(ಶ್ರೀ ಎಸ್. ಎಂ. ಗುರೆಡ್ಡಿ)

ಅರಸ್ ಅವರು ಹೇಳಿದಂತೆ ರೈತನ ಸಂಪತ್ತು ಎಂದರೆ ಅದು ದನಕರುಗಳೇ ಅವನ ಸಂಪತ್ತು—ಗೋಸಂಪತ್ತು. ಅಂಥ ಗೋಸಂಪತ್ತಿನ ಕಡೆಗೆ ಈ ದಿವಸ ಸರ್ಕಾರದವರು ಲಕ್ಷ್ಯಕೊಟ್ಟಿಲ್ಲ. ಇವತ್ತು ಈ ದನಗಳ ರೋಗ ನಿವಾರಣೆಗೆ ಏನು ಕ್ರಮ ಕೈಗೊಂಡಿದ್ದಾರೆ ? ಅವುಗಳಿಗೆ ಹೊಟ್ಟೆಗೆ ಸರಿಯಾಗಿ ಮೇವೇ ಇಲ್ಲ. ರಾಜ್ಯದ ಮೂಲೆ ಮೂಲೆಯಲ್ಲೂ ಬರಗಾಲದ ಸುದ್ದಿಗಳು ಬರುತ್ತಿವೆ. ಹೀಗಾದಾಗ ನಮ್ಮ ಸರ್ಕಾರದವರು ಅಲ್ಲಲ್ಲೇ ಕೈಗೊಂಡಿರತಕ್ಕ ಯೋಜನೆಗಳಿಂದ ರಾಜ್ಯಕ್ಕೆ ಬರತಕ ಪ್ರತಿಫಲವೇನು ಎಂಬುದನ್ನು ನಾವೀಗ ವಿಚಾರ ಮಾಡಬೇಕಾಗಿದೆ. ಸರ್ಕಾರದವರು ಒಂದು ಕಡೆ ರಾಜ್ಯದಲ್ಲಿರತಕ್ಕ ಅಭಾವ ಪರಿಸ್ಥಿತಿಯನ್ನು ನೀಗಲಿಕ್ಕೆ ಕೇಂದ್ರ ಸರ್ಕಾರದವರು ಸರಿಯಾಗಿ ಸಾಕಷ್ಟು ರೊಕ್ಕವನ್ನು ಕೊಡುತ್ತಿಲ್ಲ ಎಂದು ಹೇಳುತ್ತಿದ್ದು, ಇನ್ನೊಂದು ಕಡೆ ಪರಿಹಾರ ಕಾಮಗಾರಿಗಳಿಗಾಗಿ ಕೊಟ್ಟ ಹಣವನ್ನು ಖರ್ಚುಮಾಡದೆ ಹಾಗೆ ಉಳಿದಿರತಕ್ಕ ಸಂದರ್ಭಗಳೂ ಇವೆ. ಇದನ್ನೆಲ್ಲಾ ಆಲೋಚಿಸಿದರೆ ಇದರಲ್ಲಿ ಎಲ್ಲಿಯೋ ನಾವು ತಪ್ಪನ್ನು ಮಾಡುತ್ತಿದ್ದೇವೆಂಬುದಾಗಿ ನನಗೆ ಅನಿಸುತ್ತಿದೆ. ಅಧಿಕಾರಿಗಳ ಆಲಸ್ಯ ಮನೋಭಾವದಿಂದ ನಡೆಸಬೇಕಾಗಿದ್ದ ಕೆಲಸಗಳು ನಡೆಯದೆ ಇದ್ದ ಪ್ರಯುಕ್ತ ಅಲ್ಲಿ ಖರ್ಚಾಗಬೇಕಾಗಿದ್ದ ರೊಕ್ಕ ಖರ್ಚಾಗದೆ ಹಾಗೇ ಉಳಿತಾಯವಾಯಿತು. ನಮ್ಮ ಸರ್ಕಾರದವರು ಹೀಗೆ ಒಂದು ಕಡೆ ಉಳಿತಾಯನ್ನೂ ತೋರಿಸುತ್ತಾ ಇನ್ನೊಂದು ಕಡೆ ನಮ್ಮಲ್ಲಿ ಹಣವಿಲ್ಲ, ನಾವು ಕೇಂದ್ರ ಸರ್ಕಾರದವರನ್ನು ಕೇಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದವರು ನಮಗೆ ಮೂರು—ನಾಲ್ಕು ಕೋಟಿ ಕೊಟ್ಟಾಗ ನಾವಿಲ್ಲಿ ಐದು—ಆರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೆ ತಾನೆ ಅವರು ಹೆಚ್ಚು ಕೊಡತಕ್ಕ ಅಗತ್ಯ ಉಂಟಾಗುವುದು ! ನಾವು ಈ ದಿವಸ ನಮ್ಮ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಬಗ್ಗೆ ಹೆಚ್ಚು ಹಣವನ್ನು ಖರ್ಚುಮಾಡುವುದಕ್ಕೆ ನಮಗೆ ಸಾಮರ್ಥ್ಯವಿಲ್ಲದೆ ಇರುವಾಗ ನಾವು ಇವುಗಳಿಗೆ ಹೆಚ್ಚು ಹಣಬೇಕು ಎಂದರೆ ಯಾರೇ ಆಗಲಿ ಹೇಗೆ ಕೊಡುತ್ತಾರೆ; ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸದೆ !

ಇನ್ನು ಕುಡಿಯುವ ನೀರಿನ ವಿಚಾರಕ್ಕೆ ಬಂದರೆ ಈಗಾಗಲೇ ಶ್ರೀಮಾನ್ ಡಿ. ದೇವರಾಜ ಅರಸರು ಹೇಳಿದ ಹಾಗೆ ನಾವು ಜನರಿಗೆ ಸ್ವಾತಂತ್ರ್ಯ ಬಂದು 20 ವರ್ಷಗಳ ಮೇಲಾದಾಗ್ಯೂ ಕುಡಿಯುವುದಕ್ಕೆ ನೀರನ್ನು ಕೂಡ ಒದಗಿಸುವುದಕ್ಕಾಗಲಿಲ್ಲಾ ಎಂದಾಗ ನಾವು ರಾಷ್ಟ್ರದ ಸ್ವಾತಂತ್ರ್ಯ ಗಳಿಸಿದ್ದರೂ ಗಳಿಸದ ಹಾಗೆ; ಎಂದು ಹೇಳಿದ್ದು ಸರಿ. ಪರಿಸ್ಥಿತಿ ಹೀಗೇ ಮುಂದುವರಿದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಗ್ರಾಮೀಣ ಜನರು ಸ್ವರಾಜ್ಯ ಎಂಬುದಕ್ಕೆ ಯಾವ ಮನ್ನಣೆಯನ್ನೂ ಕೊಡುವುದಿಲ್ಲ; ಗೌರವವೂ ಸಹಾ ಇರುವುದಿಲ್ಲ. ಆದ್ದರಿಂದ 1972 ರೊಳಗಾಗಿ ಆದರೂ ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರಿನ ಬಾವಿಯನ್ನು ಒದಗಿಸಲೇಬೇಕು ಎಂದು ಹೇಳುತ್ತೇನೆ. ಈ ಬಾವಿಗಳನ್ನು ತೆಗೆಸತಕ್ಕ ಬಗ್ಗೆ ಗ್ರಾಮೀಣ ಜನಕ್ಕೆ ಕಾಂಟ್ರಿಬ್ಯೂಷನ್ ಕೊಡಲು ಸಾಧ್ಯವಿಲ್ಲ. ಹಾಗೇ ಈ ದಿವಸ ಸಣ್ಣ ನೀರಾವರಿ ಕಾಮಗಾರಿಗಳನ್ನು ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ನಡೆಸಬೇಕೆಂದಿವೆ. ಆದರೆ ಅವರಲ್ಲಿ ಸಾಕಷ್ಟು ಹಣವಿಲ್ಲ—ಆ ಕೆಲಸಗಳು ನಡೆಯುವಂತಿಲ್ಲ. ಪರಿಸ್ಥಿತಿ ಹೀಗಿರುವುದರಿಂದ ಸರ್ಕಾರದವರೇ ಇವುಗಳ ವೆಚ್ಚವನ್ನೆಲ್ಲಾ ವಹಿಸಿಕೊಂಡು ಈ ಕಾರ್ಯಗಳನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಈ ದಿವಸ ತಾಲ್ಲೂಕ್ ಬೋರ್ಡುಗಳಿಗೆ ಸಣ್ಣ ನೀರಾವರಿ ಕಾಮಗಾರಿಗಳನ್ನು ಒಪ್ಪಿಸಬೇಕೆಂದಿದ್ದಾರೆ ಅಂದರೆ ಈ ಪರಿಹಾರ ಕಾರ್ಯಕ್ರಮವನ್ನು ಅವರಿಗೆ ವಹಿಸಿ ಕೊಡಬೇಕೆಂದಿದ್ದಾರೆ. ಆದರೆ ಈ ದಿವಸ ನಮ್ಮಲ್ಲಿ ದೊಡ್ಡ ದೊಡ್ಡ ಕೆರೆಗಳಲ್ಲಿಯೇ ಆಗಲಿ ಬಾವಿಗಳಲ್ಲೇ ಆಗಲಿ ನೀರಿಲ್ಲ ಎನ್ನುವಾಗ ಸಣ್ಣ ಕೆರೆಗಳ ದುರಸ್ತಿಯಿಂದ ಆಗತಕ್ಕ ಪ್ರಯೋಜನವಾದರೂ ಏನು ! ಆದ್ದರಿಂದ ನಾವು ಕೃಷ್ಣ, ಮಲಪ್ರಭ, ಘಟಪ್ರಭ ಮೊದಲಾದ ಯೋಜನೆಗಳನ್ನು ತೀವ್ರಗತಿಯಿಂದ ಮುಗಿಸಬೇಕಾದ್ದು ಅವಶ್ಯಕ. ನಮಗೆ ನಮ್ಮ ಕೇಂದ್ರ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಧನ ಸಹಾಯವನ್ನು ನೀಡಲೇಬೇಕಾಗಿದೆ. ನಮ್ಮ ಅರ್ಥಿಕ ಮಂತ್ರಿಗಳು ಕೇಂದ್ರ ಆಯೋಜನ ಉಪಾಧ್ಯಕ್ಷರಾದ ಶ್ರೀ ಗಾಡ್ಗಿಲ್‌ರ ಸಂಗಡ ಮಾತನಾಡಿ ನಮ್ಮಲ್ಲಿ ನಡೆಯಬೇಕಾಗಿರತಕ್ಕ ನೀರಾವರಿ ಯೋಜನೆಗಳ ಬಗ್ಗೆ ಕೊಟ್ಟಿರತಕ್ಕ ಹಣ ಬಹಳ ಕಡಮೆ ಆಗಿದೆ, ನಮಗೆ ಪ್ರತಿ ವರ್ಷವೂ ಹೀಗೇ ಆಗುತ್ತಿರುವುದರಿಂದ ನಾವು ಇನ್ನುಳಿದ ರಾಜ್ಯಗಳಿಗೆಲ್ಲಾ ನೀರಾವರಿಯಲ್ಲಿ ಹಿಂದೆ ಬೀಳುವುದಕ್ಕೆ ಇದೇ ಕಾರಣವಾಗಿದೆ ಎಂಬುದಾಗಿ ತಿಳಿಸಿದ್ದರೆ ಅವರ ಪ್ರಯತ್ನದಿಂದ ನಮಗೆ ಹೆಚ್ಚು ಸಹಾಯ ದೊರೆಯಲೇಬೇಕು. ಆಂಧ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ ನೀರಾವರಿ ಆಗತಕ್ಕ ಭೂಮಿಯ ಪ್ರಮಾಣ ಶೇಕಡ 35-40ಕ್ಕೆ ಹೋಗಿದ್ದರೆ ನಮ್ಮಲ್ಲಿ ಅದು ಶೇಕಡ ಎಂಟರಷ್ಟು ಮಾತ್ರ ಇದೆ. ನೋಡಿದರೆ ಮದರಾಸಿನಲ್ಲಿ ನದಿಗಳ ಪ್ರಮಾಣ ಕಡಿಮೆ ನಮ್ಮಲ್ಲಿ ಅದಕ್ಕಿಂತ ಸ್ವಲ್ಪ ಉತ್ತಮ ಪರಿಸ್ಥಿತಿ ಇದ್ದೂ ಇಲ್ಲಿ ಇಷ್ಟು ಕಡಿಮೆ ಪ್ರಮಾಣದಲ್ಲಿರುವುದು ಬಹಳ ದುಃಖದಾಯಕ, ಅಕ್ಷಮ್ಯ. ಅದರಿಂದಲೇ ನಮ್ಮ ರಾಜ್ಯದಲ್ಲಿ ಪದೇ ಪದೇ ಇಂಥ ಕ್ಷಾಮ ಬರಲಿಕ್ಕೆ

ಹತ್ತಿದೆ. ಶ್ರೀ ದೇವರಾಜ ಅರಸರು ಹೇಳಿದಂತೆ ಬಾವಿಗಳ ಕೆಲಸ ತೀವ್ರ ಗತಿಯಲ್ಲಿ ನಡೆಯಬೇಕು. ನಾವು ಐದು ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದರೆ ಒಂದು ದಿನದಲ್ಲಿ ಒಂದು ಬಾವಿಯನ್ನು ತೋಡತಕ್ಕ ಯಂತ್ರಗಳು ಬಂದಿವೆ ಎಂದು ಹೇಳುತ್ತಾರೆ, ಆ ವಿಧಾನವನ್ನು ಸರ್ಕಾರದವರು ಕೈಗೊಂಡು ಈ ಕಾರ್ಯವನ್ನು ನೆರವೇರಿಸುವಂತೆ ಇಲ್ಲಿ ನಾವು ಈ ದಿನ ಒಂದು ನಿರ್ಣಯ ಮಾಡಬೇಕಾಗಿದೆ.

ಇನ್ನು ರಾಜ್ಯದಲ್ಲಿ ನಾವು ಅಧಿಕಾರ ವಿಕೇಂದ್ರೀಕರಣವಾಗಬೇಕು ಎಂದು ಒಂದು ಕಡೆ ಹೇಳುತ್ತಿದ್ದರೆ, ಅದೇ ಕಾಲದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ತಾಲ್ಲೂಕ್ ಬೋರ್ಡ್‌ಗಳಿಗೆ ಪರಿಹಾರ ಕಾಮಗಾರಿಗಳನ್ನು ಕೊಡುವುದು ಬೇಡ ಎಂದು ಹೇಳುತ್ತಿದ್ದಾರೆ. ಅಲ್ಲಿ ಹಣ ದುರುಪಯೋಗವಾಗುತ್ತದೆ ಎನ್ನುತ್ತಾರೆ. ತಾಲ್ಲೂಕ್ ಬೋರ್ಡಿನಲ್ಲಿರತಕ್ಕ ಸದಸ್ಯರೂ ಕೂಡ ಯಾರು ? ಅವರನ್ನು ಅಲ್ಲಿಗೆ ಕೆಲಸ ಮಾಡಲು ಆರಿಸಿ ಕಳುಹಿಸಿದವರು ಜನರಲ್ಲವೇ ! ಇವರನ್ನೇ ನಾವು ಅನುಮಾನ ಮಾಡುತ್ತಾ ಹೋದರೆ ಕೆಲಸಗಳಾಗುವುದಾದರೂ ಹೇಗೆ ? ನಮ್ಮ ಸದಸ್ಯರುಗಳನ್ನೇ ನಂಬದ ನಾವು ಇನ್ನು ಅಧಿಕಾರಿಗಳನ್ನು ಹೇಗೆ ನಂಬುತ್ತೇವೆ ? ಹೀಗೆಲ್ಲಾ ವಾದ ಮಾಡುವುದು ಸರಿಯಲ್ಲ. ನಮ್ಮ ಕೆಲಸಗಳಾಗಬೇಕಾದರೆ ನಾವು ಆ ಕಾರ್ಯಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಲೇಬೇಕು. ಅಲ್ಲಿ ಅವರಿಗೆ ಹಣದ ಅಭಾವ ಉಂಟಾದಾಗ 40-50 ಸಾವಿರ ರೂಪಾಯಿಗಳನ್ನು ಅವರ ಕಾಲದಲ್ಲಿ ಕೊಟ್ಟು ಕೆಲಸಗಳನ್ನು ನಿರ್ವಹಿಸಲು ತಿಳಿಸಬೇಕು ಹಣವಿಲ್ಲದ್ದರಿಂದ ಎಷ್ಟೋ ತಾಲ್ಲೂಕು ಬೋರ್ಡಿನವರು ಕೆಲಸಗಳನ್ನು ತೆಗೆದುಕೊಳ್ಳಲು ಹಿಂದೆ ಮುಂದೆ ನೋಡುತ್ತಿದ್ದಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಎಲ್ಲ ಕಡೆಗಳಲ್ಲೂ ತಾಲ್ಲೂಕ್ ಬೋರ್ಡುಗಳು ಸತ್ತು ಎಷ್ಟೋ ದಿನಗಳಾಯಿತಲ್ಲವೇ !

ಶ್ರೀ ಎಸ್. ಎಂ. ಗುರಡ್ಡಿ.—ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ಇವತ್ತು ಜನರು ಆರಿಸಿ ಕಳುಹಿಸಿದಂತಹ ಆ ಜನರ ಮೇಲೆ ಸಂಶಯಪಟ್ಟುಕೊಂಡರೆ ಈ ಸಭೆಯ ಸದಸ್ಯರ ಮೇಲೂ ಕೂಡ ಏಕೆ ಸಂಶಯಪಟ್ಟುಕೊಳ್ಳಬಾರದು ? ಆದ್ದರಿಂದ ವ್ಯಕ್ತಿಗತವಾಗಿ ವಿಚಾರ ಮಾಡುವುದು ಒಳ್ಳೆಯದಲ್ಲ ನಿಜವಾಗಿಯೂ ಯಾವುದೇ ಕಾರ್ಯವಾಗಬೇಕಾದರೆ, ಹಳ್ಳಿಗಳ ಉದ್ಧಾರವಾಗಬೇಕಾದರೆ ತಾಲ್ಲೂಕು ಬೋರ್ಡುಗಳ ಮುಖಾಂತರವೇ ವಿನಾ ಮತ್ತೆ ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳಿ ಒಂದೆರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ರಾಜ್ಯದ 19 ಜಿಲ್ಲೆಗಳಲ್ಲಿ ಸುಮಾರು 15 ಜಿಲ್ಲೆಗಳಲ್ಲಿ ಈ ಕ್ಷಾಮದ ಪರಿಸ್ಥಿತಿ ಉಂಟಾಗಿದೆ. ದೇಶದಲ್ಲಿ ಮಳೆಬೆಳೆಗಳು ಇಲ್ಲದೆ ರೈತರು ಈಗ ದುಸ್ಥಿತಿಯಲ್ಲಿದ್ದಾರೆ. ಈಗ ರಾಜ್ಯದಲ್ಲಿರುವ ಪರಿಸ್ಥಿತಿಯನ್ನು ಅವಲೋಕನ ಮಾಡಿದರೆ ಆಹಾರದ ಅಭಾವ, ರೈತನ ದುಸ್ಥಿತಿ ಹಾಗೂ ಕೆಲಸ ಮಾಡುವವರಿಗೆ ಕೆಲಸ ಇಲ್ಲದೇ ತೊಂದರೆಯಾಗಿರತಕ್ಕ ಸಂಗತಿಗಳು ಎಲ್ಲೆಲ್ಲೂ ಎದ್ದು ಕಾಣುತ್ತಾ ಇವೆ. ಈ ಪರಿಸ್ಥಿತಿಯನ್ನು ಅರಿತು ಸರ್ಕಾರದವರು ಎಲ್ಲಾ ಕಡೆಗೂ ಕೂಡ ಕ್ಷಾಮ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಲಿಕ್ಕೆ ಹಣವನ್ನು ಒದಗಿಸಿದ್ದಾಗ್ಯೂ ಕೂಡ ಕೆಲವು ಕಡೆ ಆ ಹಣ ಸಾಕಾದಷ್ಟು ಇಲ್ಲದೇ ತೊಂದರೆಯಾಗುವ ಪರಿಸ್ಥಿತಿ ಒದಗಿದೆ. ಇನ್ನು ಕೆಲವು ಕಡೆ ಈ ಹಣವನ್ನು ಖರ್ಚುಮಾಡುವುದಕ್ಕೆ ಸರ್ಕಾರದವರು ಏರ್ಪಡಿಸಿರುವ ಈ ನಿಯಮಾವಳಿಗಳು ಸರಿಯಾಗಿಲ್ಲದೇ ಇದ್ದು ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಅಧಿಕಾರಿಗಳು ಅದನ್ನು ಇಂಟರ್‌ಪ್ರಿಟ್ ಮಾಡಿ ಹಣವನ್ನು ಖರ್ಚು ಮಾಡದೇ ಇರತಕ್ಕ ಪರಿಸ್ಥಿತಿ ಇವತ್ತು ಒದಗಿದೆ. ಈ ಬಗ್ಗೆ ಕೆಲವು ಅಂಶಗಳನ್ನು ಸರ್ಕಾರದವರ ಗಮನಕ್ಕೆ ಈ ಸಂದರ್ಭದಲ್ಲಿ ತರಬಯಸುತ್ತೇನೆ. ಮೊದಲನೆಯದಾಗಿ ಈ ಫ್ಯಾಮಿನ್ 64 ಬಗ್ಗೆ ಕೊಟ್ಟಿರತಕ್ಕ ಹಣವನ್ನು ಖರ್ಚು ಮಾಡುವುದಕ್ಕೆ ಒಂದು ರೂಲ್‌ನ್ನು ಹಾಕಿದ್ದಾರೆ, ಅದರಲ್ಲಿ ಪಿ ಡಬ್ಲ್ಯು ಡಿ ರೇಟ್‌ಗನುಗುಣವಾಗಿ ಕೊಡತಕ್ಕ ರೇಟು ಅದರಲ್ಲಿ ಇಲ್ಲ, ನಾಮಿನಲ್‌ರೋಲ್ ಮೇಲೆ ಜನ ಕೆಲಸ ಮಾಡಬೇಕು ಮತ್ತು ಕೆಲಸಕ್ಕೆ ಕೊಡತಕ್ಕ ಕೂಲಿ ಕೂಡ ಪಿ ಡಬ್ಲ್ಯು ಡಿ ಅವರು ಒಂದು ಗಂಡಾಳು ಅಥವಾ ಹೆಣ್ಣಾಳಿಗೆ ಕೊಡತಕ್ಕ ಕೂಲಿಗಿಂತ ಕಡಿಮೆಯಾಗಿದೆ. ಇಂತಹ ಒಂದು ನೀತಿಯನ್ನು ರೂಪಿಸಿದ್ದಾರೆ. ಏನಾದರೂ ಸ್ವಲ್ಪ ಹಣವನ್ನು ಕೊಟ್ಟಂತೆ ಮಾಡಿ ಹಣವನ್ನು ಖರ್ಚುಮಾಡಿದಂತೆ ಮಾಡಲಿಕ್ಕೆ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದಾರೆಯೇ ಹೊರತು ಅನುಕೂಲವಾಗತಕ್ಕ ರೀತಿಯಲ್ಲಿ ಇಲ್ಲ. ನಮ್ಮ ಜಿಲ್ಲೆಯ ಎರಡು ತಾಲ್ಲೂಕುಗಳು ಈ ಪರಿಸ್ಥಿತಿಗೆ ಒಳಗಾಗಿವೆ. ನಮಗೆ ಕೊಟ್ಟಿರತಕ್ಕ ಎರಡು ಲಕ್ಷ ರೂಪಾಯಿಗಳಲ್ಲಿ ಹತ್ತು ಸಾವಿರ ರೂಪಾಯಿಗಳೂ ಕೂಡ ಇವತ್ತಿನ ದಿವಸ ಖರ್ಚಾಗಿಲ್ಲ. ಅಧಿಕಾರಿಗಳಿಗೆ ಕೇಳಿದರೆ ನಮಗೆ ಸರ್ಕಾರದವರು ಹಾಕಿರತಕ್ಕ

(ಶ್ರೀ ಎಂ. ಮಲ್ಲಪ್ಪ)

ನಿಬಂಧನೆಗಳಿಗನುಗುಣವಾಗಿ ಕೆಲಸ ಮಾಡಬೇಕೆಂದರೆ — ಪಿ ಡಬ್ಲ್ಯು ಡಿ ರೇಟ್ ಕೊಡಲಿಕ್ಕೆ — ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದಾರೆ. ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕು. ಏಕೆಂದರೆ ದೇಶಕ್ಕೆ ಕಷ್ಟ ಬಂದಿದೆ, ಜನಗಳಿಗೆ ಕೆಲಸ ಇಲ್ಲ. ದಿ ಲೇಬರರ್ ಷುಡ್ ನಾಟ್ ಬಿ ಎಕ್ಸ್‌ಪ್ಲಾಯಿಟೆಡ್ ಬೈ ದಿ ಗವರ್ನಮೆಂಟ್. ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಒಬ್ಬ ಗಂಡಾಳಿಗೆ ಎಷ್ಟು ಕೂಲಿ ಕೊಟ್ಟರೆ ಎರಡು ಹೊತ್ತು ಊಟ ಅಥವಾ ಸಾಮಾನ್ಯ ಜೀವನ ನಡೆಸಬಹುದೋ ಅದಕ್ಕಿಂತ ಕಡಿಮೆ ಕೊಡುವುದು ನ್ಯಾಯವಲ್ಲ. ಸರ್ಕಾರದವರು ಅದಕ್ಕೆ ಪ್ರೋತ್ಸಾಹ ಕೊಡಕೂಡದು ಎಂಬ ಉದ್ದೇಶದಿಂದ ಈ ಒಂದು ಸಲಹೆಯನ್ನು ಮಾಡುತ್ತಾ ಇದ್ದೇನೆ. ಲೋಕೋಪಯೋಗಿ ಇಲಾಖೆಯವರ ಷೆಡ್ಯೂಲ್ ಪ್ರಕಾರ ಯಾವ ರೇಟ್ ಇದೆ ಅದಕ್ಕನುಗುಣವಾಗಿ ಫ್ಯಾಮಿನ್ ರಿಲೀಫ್ ವರ್ಕ್ಸ್‌ಗೂ ಕೂಡ ಗಂಡು ಮತ್ತು ಹೆಣ್ಣಾಳುಗಳಿಗೆ ಕೂಲಿಯನ್ನು ಕೊಡಬೇಕು. ಆ ರೀತಿ ಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಖಂಡಿತವಾಗಿಯೂ ಅನುಕೂಲವಾಗಲಿಕ್ಕಿಲ್ಲ ಎಂಬುದನ್ನು ಒತ್ತಿ ಹೇಳಬಯಸುತ್ತೇನೆ. ಎರಡನೆಯದಾಗಿ ಪಿ ಡಬ್ಲ್ಯು ಡಿ ರೂಲ್ಸ್‌ಗನುಸಾರವಾಗಿ ಅಂದಾಜುಗಳನ್ನು ತಯಾರು ಮಾಡಿಸಿ ಅವುಗಳನ್ನು ಕಂಟ್ರಾಕ್ಟ್‌ದಾರರುಗಳ ಮೂಲಕ ಮಾಡಿಸಿದರೆ ಮಾತ್ರ ಈ ಕೆಲಸಗಳು ಆಗುವುದಕ್ಕೆ ಸಾಧ್ಯವಾಗುತ್ತದೆ, ಹಾಗಲ್ಲದೇ ಆ ಪ್ರದೇಶದಲ್ಲಿರತಕ್ಕ ಜನರಿಗೆ ನಾಮಿನಲ್ ರೋಲ್ ಪ್ರಕಾರ ಕೂಲಿ ಕೊಟ್ಟು ಕೆಲಸ ಮಾಡಿಸುತ್ತೇವೆ ಅಂತ ಹೇಳುವುದಾದರೆ ಭ್ರಷ್ಟಾಚಾರ ತಲೆದೋರಿ, ಹಣ ದುರುಪಯೋಗವಾಗಿ ತಾಲ್ಲೂಕು ಬೋರ್ಡಿನವರಾಗಲಿ ಅಥವಾ ಬೇರೆ ಯಾರು ಮುಂದೆ ಬಂದು ಕೆಲಸ ಮಾಡಿಸುತ್ತೇವೆ ಎಂದು ಹೇಳುತ್ತಾರೋ ಅವರಿಗೆ ಕೆಟ್ಟ ಹೆಸರು ಬರುತ್ತದೆ. ಅಧಿಕಾರಿಗಳಿಗೂ ಕೂಡ ಕೆಟ್ಟ ಹೆಸರು ಬರಬಹುದು. ಆದ್ದರಿಂದ ಈ ನಿಯಮಾವಳಿಗಳನ್ನು ಬದಲಾವಣೆ ಮಾಡಿ ಹಣ ಖರ್ಚಾಗಲಿಕ್ಕೆ ಮತ್ತು ಕೆಲಸಕಾರ್ಯಗಳು ಜಾಗ್ರತೆ ಕಾರ್ಯರೂಪಕ್ಕೆ ಬರುವಂತೆ ಮಾಡಲು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮತ್ತೊಂದು ಸಲಹೆಯನ್ನು ನೀಡಬಯಸುತ್ತೇನೆ. ಈಗಿನ ನಿಯಮದ ಪ್ರಕಾರ ಒಂದು ನಿಗದಿಯಾದ ವೇಳೆಗಿಂತ ಜಾಸ್ತಿ ಕೆಲಸ ಮಾಡಿದರೂ ಕೂಡ ಒಂದು ರೂಪಾಯಿ 25 ಪೈಸೆಗಿಂತ ಹೆಚ್ಚಾಗಿ ಕೊಡುವ ಹಾಗೆ ಇಲ್ಲ, ಇದು ಒಂದು ಎಕ್ಸ್‌ಪ್ಲಾಯಿಟೇಷನ್ ಆಫ್ ಲೇಬರ್, ಇಂತಹ ಒಂದು ನಿಯಮವನ್ನು ಸರ್ಕಾರದವರು ಅನುಸರಿಸಬಾರದು ಎಂದು ಒತ್ತಾಯಪಡಿಸುತ್ತೇನೆ ಮತ್ತು ಹೆಚ್ಚು ಕೆಲಸ ಮಾಡಿದರೆ ಅದಕ್ಕೆ ಸಾಕಾದಷ್ಟು ಕೂಲಿ ದೊರಕುವಂತೆ ನಿಯಮಾವಳಿಗಳನ್ನು ಬದಲಾಯಿಸಬೇಕು. ಇವತ್ತಿನ ದಿವಸ ಎಲ್ಲಾ ವಿಚಾರದಲ್ಲೂ ರೈತರಿಗೆ ಅನುಕೂಲವಾಗತಕ್ಕ ಕೆಲಸ ಎಂದರೆ ಸಾಯಿಲ್ ಕನ್‌ಸರ್ವೇಷನ್ ವರ್ಕ್. ಇಲಾಖೆಯಿಂದ ಆ ಕೆಲಸವನ್ನು ಮಾಡಿಸಿಕೊಡುತ್ತಾ ಇದ್ದೀರಿ, ಅಲ್ಲೂ ಕೂಡ ಪಿ ಡಬ್ಲ್ಯು ಡಿ ಷೆಡ್ಯೂಲ್‌ನಂತೆ ಕೂಲಿಯನ್ನು ಕೊಡುವುದಕ್ಕೆ ನಿಯಮಾವಳಿಗಳನ್ನು ಸಡಿಲಗೊಳಿಸಬೇಕೆಂದು ಈ ಸಮಯದಲ್ಲಿ ಒತ್ತಿ ಹೇಳುತ್ತೇನೆ.

ಇವತ್ತಿನ ದಿವಸ ನೀರಾವರಿ ಬಾವಿಗಳಿಗೆ 5,000, ರೂಪಾಯಿಗಳಿಗೆ ಮೀರದಂತೆ ಹಣವನ್ನು ಒಬ್ಬ ರೈತನಿಗೆ ಕೊಡಲಿಕ್ಕೆ ಅವಕಾಶವಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮತ್ತು ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಯಾರಾದರೂ ರೈತರು ಮುಂದೆ ಬಂದರೆ, ಎಸ್ಟಿಮೇಟ್ ಆಗಬೇಕು, ಟೆಕ್ನಿಕಲ್ ಸಜೆಸ್ಟಿಗೆ ಕೊಡಬೇಕು ಹಾಗೆ ಹೀಗೆ ಅಂತ ಹೇಳಿ ರೈತರನ್ನು ಡಿಸ್ಕರೇಜ್ ಮಾಡತಕ್ಕ ಪಾಲಿಸಿ ಅಧಿಕಾರಿಗಳಲ್ಲಿ ಇದೆ. ನಮಗೆ ಇದು ಒಂದು ಸಮಸ್ಯೆಯಾಗಿದೆ. ನಿಜವಾಗಿಯೂ ಹಣ ಕೊಡುತ್ತಾರೋ ಇಲ್ಲವೋ ಅಂತ ಹೇಳಿ ಅನುಮಾನಕ್ಕೂ ಕೂಡ ಆಸ್ಪದವಾಗಿದೆ. ಸಾರ್ವಜನಿಕ ಮುಖಂಡರು ಬಂದು ಹೇಳಿದರೂ ಕೂಡ ಆಗಲಾರದಂತಹ ಒಂದು ಕಷ್ಟಪರಿಸ್ಥಿತಿ ಇದೆ. ಬೇಕಾದಷ್ಟು ಹಣವನ್ನು ಬಳಸಲಿಕ್ಕೆ ಸಿದ್ಧವಾಗಿದ್ದೇವೆ. ಎಷ್ಟು ಹಣವನ್ನು ಬೇಕಾದರೂ ಖರ್ಚು ಮಾಡಿ ಎಂದು ಒಂದು ಕಡೆ ಹೇಳುತ್ತೀರಿ. ಆದರೆ ತಾವು ಹಾಕಿರತಕ್ಕ ನಿಯಮಾವಳಿಗಳನ್ನು ರೈತರ ಕೆಲಸಕ್ಕೆ ವಿರುದ್ಧವಾಗಿ, ಅಭಿವೃದ್ಧಿ ಕಾರ್ಯಗಳಿಗೆ ವಿರುದ್ಧವಾಗಿ ಅಧಿಕಾರಿಗಳು ಇಂಟರ್‌ಪ್ರಿಟ್ ಮಾಡುತ್ತಾ ಇರುವುದನ್ನು ನೋಡಿದರೆ ಸಂಶಯ ಬರುತ್ತಾ ಇದೆ. ಆದ್ದರಿಂದ ನಿಜವಾಗಿಯೂ ದೇಶಕ್ಕೆ ಒದಗಿರತಕ್ಕ ಕಷ್ಟ ಕಾಲದಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಹಣವನ್ನು ಸರಿಯಾಗಿ ವಿನಿಯೋಗ ಮಾಡುತ್ತಾರೆಯೇ ಇಲ್ಲವೇ ಎಂಬುದನ್ನು ತಾವು ಕಣ್ಣು ತೆರೆದು ನೋಡಿ, ಅಕಸ್ಮಾತ್ತಾಗಿ ಎಲ್ಲಾದರೂ ದುರುಪಯೋಗ ಮಾಡಿದ್ದರೆ ಮಧ್ಯವರ್ತಿ ಜನರಾಗಲಿ, ಸರ್ಕಾರದ ಅಧಿಕಾರಿಗಳಾಗಲಿ ಅವರ ಮೇಲ್ವಿಚಾರಣೆಯಲ್ಲಿ ಏನಾದರೂ ಸಂಶಯಕಂಡು ಬಂದು ಹಣ ದುರುಪಯೋಗವಾಗುವುದು ಇದ್ದರೆ ಅಂಥವರ ಮೇಲೆ ಕ್ರಮ ಕೈಕೊಂಡು ಅವರನ್ನು ಉಗ್ರ ಶಿಕ್ಷೆಗೆ ಗುರಿಮಾಡಬೇಕು ಎಂದು ಹೇಳುತ್ತೇನೆ. ಇವತ್ತಿನ ದಿವಸ

ಬಡ ರೈತ, ಕೂಲಿಗಾರ ಹೊಟ್ಟೆಗೆ ಇಲ್ಲದೆ, ಕ್ಷಾಮದಿಂದ ಬಡತನದಿಂದ ಕಷ್ಟಪಡುತ್ತಾ ಇರಬೇಕಾದರೆ ಅವನ ಕಷ್ಟಕಾರ್ಪಣ್ಯಗಳನ್ನು ನೀಗಲು ನಿಜವಾಗಿಯೂ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀಮತಿ ನಾಗಮ್ಮ (ಕಲಮಾಲ).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿರುವ ಬರಗಾಲ ಪರಿಸ್ಥಿತಿ ಹೇಗಿದೆ ಎಂಬುದನ್ನು ಹೇಳಲು ಬಹಳ ನೋವಾಗುತ್ತದೆ. ಏಕೆಂದರೆ ಮೂರು ವರ್ಷಗಳಿಂದಲೂ ಕೂಡ ಮಳೆ ಸರಿಯಾಗಿ ಬರದೆ ದೇಶದಲ್ಲಿ ಅಲ್ಲಕಲ್ಲೋಲವಾಗಿದೆ. ಇದರಿಂದ ಎತ್ತುಗಳಿಗೆ ಮೇವಿಲ್ಲ, ಮನುಷ್ಯರಿಗೆ ಅನ್ನವಿಲ್ಲ. ಹೀಗಾಗಿ ಸಾಯುವ ಪರಿಸ್ಥಿತಿ ಬಂದಿದೆ. ಮಾನ್ಯ ಮಂತ್ರಿಗಳು ಕೇಂದ್ರ ಸರಕಾರದಿಂದ 8 ಕೋಟಿ ರೂಪಾಯಿಗಳನ್ನು ತರಿಸಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಈಗಾಗಲೆ ಎರಡೂವರೆ ಕೋಟಿ ರೂಪಾಯಿ ಕೊಡವುದಾಗಿ ಹೇಳಿದ್ದಾರೆ. ಮತ್ತು ಬೇಕಾದಷ್ಟು ಖರ್ಚುಮಾಡುವುದಾಗಿಯೂ ತಿಳಿಸಿದ್ದಾರೆ. ಆದರೆ ಬೇಕಾದ ಹಣ ಯಾವಾಗಲೋ ಬರುತ್ತದೆ ಎಂದರೆ ಆಗುವುದಿಲ್ಲ, ತಕ್ಷಣ ಮಂಜೂರಾಗಿರುವ ಹಣ ತೆಗೆದು ಕೊಂಡು ಬೇಗ ರಸ್ತೆ, ಬಾವಿ ಮುಂತಾದುವುಗಳ ಕೆಲಸ ಕೈಗೊಂಡರೆ ಅನುಕೂಲವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.. ನಮ್ಮ ರೈತರು ಬೇಕಾದಷ್ಟು ಬೆಳೆ ಇಟ್ಟರೂ ಕೂಡ ಅದು ಒಣಗಿಹೋಗಿದೆ, ದನಗಳಿಗೆ ಮೇವಿಲ್ಲ, ಕುಡಿಯಲು ನೀರಿಲ್ಲ, ಹೀಗೆ ಅನೇಕ ಕೊರತೆ ಇದೆ. ನಮ್ಮ ಊರಿನಲ್ಲಿ ಮಾತ್ರವಲ್ಲದೆ 19 ಜಿಲ್ಲೆಗಳಲ್ಲಿ 3 ಜಿಲ್ಲೆಗಳನ್ನು ಬಿಟ್ಟರೆ ಉಳಿದ ಕಡೆಗಳಲ್ಲೆಲ್ಲಾ ಒಂದೇ ರೀತಿ ಕಷ್ಟ ಪರಿಸ್ಥಿತಿ ಇದೆ, 3 ಜಿಲ್ಲೆಗಳಲ್ಲಿ ಅನುಕೂಲವಿರಬಹುದು. ಇದಕ್ಕಾಗಿ ಬೇಕಾದಷ್ಟು ಹಣ ಕೊಟ್ಟು ರಸ್ತೆ, ಕೆರೆ, ಬಾವಿ ಮಾಡಿಸಬೇಕು ಎಂದು ಒತ್ತಾಯಮಾಡಿ ಹೇಳುತ್ತೇನೆ. ತಕ್ಷಣ ಈ ಕೆಲಸ ಮಾಡಿದರೆ ಸಹಾಯವಾಗುತ್ತದೆ, ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಎರಡು ತಿಂಗಳಾದಮೇಲೆ ಮಾಡುವುದಾದರೆ ಸಾರ್ಥಕವಾಗುವುದಿಲ್ಲ. ಇದರ ಸಲುವಾಗಿ ಸರಕಾರದವರು ಬೇಗನೆ ಜಿಲ್ಲಾಧಿಕಾರಿಗಳು, ಪಬ್ಲಿಕ್‌ವರ್ಕ್ಸ್ ಇಲಾಖೆಯವರು, ತಾಲ್ಲೂಕು ಬೋರ್ಡಿನವರು ಮುಂತಾದವರಿಗೆ ಕೆಲಸಗಳನ್ನು ವಹಿಸಿ ಲಗೂನೆ ಮಾಡಿಸಬೇಕು. ತಾಲ್ಲೂಕು ಬೋರ್ಡು ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಮಾನ್ಯ ಸದಸ್ಯರು ಕೆಲವರು ಹೇಳುತ್ತಿದ್ದಾರೆ. ಆದರೆ ಅದು ಎಷ್ಟೋ ಕೆಲಸಮಾಡಿದೆ, ರಾಯಚೂರು ಜಿಲ್ಲೆಯಲ್ಲಿ ಸಿಂಧನೂರು ತಾಲ್ಲೂಕು ಮುಂತಾದ ಕಡೆಗಳಲ್ಲಿ ಬೇಕಾದಷ್ಟು ಕೆಲಸಮಾಡಿದೆ. ಅದಕ್ಕೆ ಹಣ ಸಾಲದು ಸರಕಾರ ಸಾಕಷ್ಟು ಕೊಟ್ಟಿಲ್ಲ, ಸರಕಾರ ಕೊಡಬೇಕು ಎಂದು ಮನವಿಮಾಡುತ್ತೇನೆ. ಹಣ ಸಾಕಾದಷ್ಟು ಕೊಟ್ಟರೆ ಬೇಕಾದಷ್ಟು ಕೆಲಸವಾಗುತ್ತದೆ. ಈಗ ಕೆಲಸ ಪ್ರಾರಂಭವಾಗಿದೆ, ಅಧಿಕಾರಿಗಳೂ ಒಳ್ಳೆಯವರು ಬಂದಿದ್ದಾರೆ, ಆದುದರಿಂದ ಚೆನ್ನಾಗಿ ಆಗುತ್ತದೆ. ವಿರೋಧ ಪಕ್ಷದವರು ತಾಲ್ಲೂಕ ಬೋರ್ಡು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಹೇಳಬಹುದು. ಆದರೆ ಅದು ಸರಿಯಲ್ಲ, ಬೇಕಾದಷ್ಟು ಕೆಲಸಮಾಡಿದೆ. ಈಗಾಗಲೆ ಬಾವಿ, ಕಟ್ಟಡ ಮುಂತಾದುವನ್ನು ಬೇಕಾದಷ್ಟು ಕಟ್ಟಿಸಿದ್ದಾರೆ. ಕೆಲಸ ಮಾಡುವವರು ಮುಂದೆ ಬಂದರೆ ಅವರಿಗೆ ಬೇಕಾದಷ್ಟು ಹಣ ಕೊಡಬೇಕು. ನಮ್ಮ ತಾಲ್ಲೂಕು ಬೋರ್ಡಿಗೆ ಒಬ್ಬ ಅಸಿಸ್ಟೆಂಟ್ ಎಂಜಿನಿಯರನ್ನು ಕೊಡಬೇಕು. ಏಕೆಂದರೆ ಎಸ್ಟಿಮೇಟ್ ಮಾಡಲು ಪಿ ಡಬ್ಲ್ಯು ಇಲಾಖೆಗೆ ಕಳಿಸಬೇಕಾಗುತ್ತದೆ, ಅವರ ಕೆಲಸವೇ ಜಾಸ್ತಿಯಾಗಿರುವಾಗ ಅವರು ಬೇಗ ಅದನ್ನು ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ತಾಲ್ಲೂಕುಬೋರ್ಡಿನ ಕೆಲಸ ಹಿಂದುಮುಂದಾಗುತ್ತದೆ. ಆದುದರಿಂದ ತಾಲ್ಲೂಕುಬೋರ್ಡಿಗೇ ಒಬ್ಬ ಅಸಿಸ್ಟೆಂಟ್ ಎಂಜಿನಿಯರನ್ನು ಕೊಟ್ಟು ಜಾಗ್ರತೆ ಅಂದಾಜು ಮುಂತಾದ್ದನ್ನು ಮಾಡಲು ಅವಕಾಶಮಾಡಬೇಕು.

ರೈತರ ಎತ್ತುಗಳಿಗೆ ಮೇವಿಲ್ಲ, ಅದನ್ನು ಒದಗಿಸಬೇಕು. ಬೆಳೆ ಒಣಗಿರುವುದರಿಂದ 3 ವರ್ಷಗಳಿಂದ ದನಗಳಿಗೆ ಮೇವಿಲ್ಲ. ಆದುದರಿಂದ ಸರಕಾರ ಮೇವನ್ನು ಎಲ್ಲಿಂದಲಾದರೂ ತಂದು ಲಾರಿಗಳಲ್ಲಿ ಸಾಗಿಸಿ ಒದಗಿಸಬೇಕು.

ಕೊನೆಯದಾಗಿ ಒಂದು ವಿಷಯವನ್ನು ಹೇಳುತ್ತೇನೆ. ನಮ್ಮ ಚಂದ್ರಬಂಡೆ ಸರ್ಕಲ್ಲಿಗೆ ಒಂದು ಕೆನಾಲ್ ಕೊಡಬೇಕು, ನಮ್ಮದು ಬಹಳ ಬಡತನದ ಭಾಗ. ಅದನ್ನು ಕೊಡದಿದ್ದರೆ ಅಲ್ಲಿ ಜನರೇ ಇರುವುದಿಲ್ಲ, ಆ ಭಾಗ ಆಂಧ್ರಕ್ಕೆ ಸೇರುತ್ತದೆ. ಅಲ್ಲಿನ ಜನರು ಆಂಧ್ರಕ್ಕೆ ಸೇರಲು ಅವಕಾಶ ಕೊಡದೆ ಆ ಭಾಗಕ್ಕೆ ಒಂದು ಕೆನಾಲ್ ಕೊಡಬೇಕು. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[Mr. Deputy Speaker in the Chair]

† ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ರಾಜ್ಯದಲ್ಲಿ ಇರುವ ಭೀಕರ ಬರಗಾಲ ಪರಿಸ್ಥಿತಿಯ ಬಗ್ಗೆ ಈಗಾಗಲೆ ಕೈಗೊಂಡಿರುವ ಪರಿಹಾರ ಕಾರ್ಯಗಳನ್ನು ತಿಳಿಸಿ ಮುಂದೆ ಕೈಕೊಳ್ಳಬೇಕಾದ ಕೆಲಸಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಅಭಿಪ್ರಾಯವನ್ನು ಸೂಚಿಸಬೇಕೆಂದು ಮುಖ್ಯ ಮಂತ್ರಿಗಳು ಕೇಳಿರುವುದು ಸ್ವಾಗತಾರ್ಹವಾಗಿದೆ. ಈ ದೇಶದಲ್ಲಿ ಬರಗಾಲ ಮೇಲಿಂದ ಮೇಲೆ ಬರುವ ಪರಿಸ್ಥಿತಿಯಿದೆ. ಬರಗಾಲ ಬಂದಾಗಲೇನೋ ಸರಕಾರದವರು ತಾತ್ಕಾಲಿಕವಾಗಿ ಕೆಲವು ಕಾರ್ಯಕ್ರಮಗಳನ್ನು ಕೈಕೊಂಡು ಅಲ್ಲಲ್ಲಿ ಜನರಿಗೆ ಅಲ್ಪಸ್ವಲ್ಪ ಸೌಲತ್ತುಗಳನ್ನು ಕೊಡುತ್ತಿದ್ದಾರೆ. ಶಾಶ್ವತವಾದ ಪರಿಹಾರವೊದಗಿಸಲು ಇದುವರೆಗೆ ಸರಿಯಾದ ಕಾರ್ಯಕ್ರಮ ಕೈಕೊಂಡಿಲ್ಲ. ಮೊಟ್ಟ ಮೊದಲನೆಯದಾಗಿ ಸ್ವಾತಂತ್ರ್ಯ ಬಂದನಂತರ ಮೂರು ಯೋಜನೆಗಳಲ್ಲಿ ಒಕ್ಕಲತನಕ್ಕೆ ಯಾವ ಸ್ಥಾನ ಕೊಡಬೇಕಾಗಿತ್ತೋ ಅದನ್ನು ಕೊಡದೇ ಹೋದ್ದರಿಂದ ಈಗ ಕಷ್ಟವೊದಗಿದೆ. ಒಕ್ಕಲತನಕ್ಕೆ ಪ್ರಥಮ ಪ್ರಾಶ ್ತ್ಯ ಕೊಡದೇ ಚಿಕ್ಕ ನೀರಾವರಿ ಯೋಜನೆಗಳನ್ನು ಕೈಕೊಳ್ಳದೆ ಸರಕಾರದವರು ಅಲಕ್ಷ್ಯ ಮಾಡಿದ್ದರಿಂದ ನಾವು ಈ ದುರವಸ್ಥೆಗೆ ಈಡಾಗಬೇಕಾಯಿತು.

5-30 P.M.

ಮೊಟ್ಟಮೊದಲನೆಯದಾಗಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಕ್ಕಲುತನಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು ದೇಶದ ರಕ್ಷಣೆಗಾಗಿ ಖರ್ಚು ಮಾಡುವಷ್ಟೇ ಹಣವನ್ನು ಒಕ್ಕಲುತನದ ಸಲುವಾಗಿ ಖರ್ಚು ಮಾಡುವುದು ಅವಶ್ಯವಿದೆ. ಈ ಬಗ್ಗೆ ನಾವು ವಿಚಾರ ಮಾಡತಕ್ಕ ಮತ್ತೊಂದು ಮಹತ್ವದ ಕೆಲಸ ಎಂದರೆ ನಮ್ಮಲ್ಲಿರುವ ಜನಬಲವನ್ನು ಉಪಯೋಗ ಮಾಡುವುದು. ನಾವು ಮಾತನಾಡುವಾಗ ಪರದೇಶದಿಂದ ಸಹಾಯ ದೊರೆಯಬೇಕು, ಯಂತ್ರಗಳನ್ನು ತರಬೇಕು, ಬಾವಿಯನ್ನು ಅಗೆಯಲು ಯಂತ್ರಗಳನ್ನು ತರಬೇಕು, ಅದಕ್ಕೆ ಹಣ ಬೇಕು, ಹಣವಿಲ್ಲದೆ ಯೋಜನೆಗಳೆಲ್ಲ ವ್ಯರ್ಥವಾಗುತ್ತವೆ ಎಂದು ಹೇಳುತ್ತೇವೆ. ನಮ್ಮಲ್ಲಿರತಕ್ಕ ಜನಬಲವನ್ನು ಸರಿಯಾಗಿ ಉಪಯೋಗ ಮಾಡಬೇಕು. ಇದಕ್ಕೆ ಸರ್ಕಾರದವರು ಮತ್ತು ಜನನಾಯಕರು ಜನತೆಯಲ್ಲಿ ಹೊಸ ವಾತಾವರಣ, ಹೊಸ ವಿಚಾರವನ್ನು, ಕ್ರಾಂತಿಯನ್ನು ತರಬೇಕಾಗಿದೆ. ಪ್ರತಿಯೊಬ್ಬ ಮನುಷ್ಯನೂ ಹಳ್ಳಿಯಲ್ಲಿರುವ ಜನಬಲ ಸರಿಯಾಗಿ ಉಪಯೋಗ ಆಗುವಂತೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಬಾವಿ ತೆಗೆಯುವುದಕ್ಕೆ ಯಂತ್ರಬೇಕು ಎಂದು ಹೇಳುವುದಕ್ಕೆ ಬದಲಾಗಿ ಸಾವಿರಾರು ಜನ ತರುಣರು ಸರಿಯಾಗಿ ಒಂದು ವಾರ ಕೆಲಸ ಮಾಡಿದರೆ ಆ ಊರಿಗೆ ಬೇಕಾದ ಬಾವಿಯಾಗುತ್ತದೆ, ರಸ್ತೆ ಬೇಕು ಎಂದರೆ ರಸ್ತೆ ಆಗುತ್ತದೆ, ಗ್ರಾಮಾಂತರದಲ್ಲಿ ಪ್ರತಿಯೊಬ್ಬರೂ ಸರಿಯಾಗಿ ಕೆಲಸ ಮಾಡಿದರೆ ಒಂದೇ ವಾರದಲ್ಲಿ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ರಸ್ತೆಯಾಗುತ್ತದೆ. ಅದೇ ರೀತಿ ಒಕ್ಕಲುತನದ ಅಭಿವೃದ್ಧಿ ಸಲುವಾಗಿಯೂ ಮಾಡಬೇಕಾಗಿದೆ. ಸಾಲ ತಂದು ಜನಗಳಿಗೆ ಆಹಾರವನ್ನು ಒದಗಿಸುವ ಕಾರ್ಯಕ್ರಮವನ್ನು ಇಟ್ಟುಕೊಂಡರೆ ಅದರಿಂದ ಯಾವ ಪರಿಹಾರವೂ ಆಗುವುದಿಲ್ಲ. ಶಾಶ್ವತ ಪರಿಹಾರದ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಲು ಒಂದು ಸಮಿತಿಯನ್ನು ನೇಮಿಸಬೇಕು. ಈ ಸಭೆಯ ಸದಸ್ಯರು, ಅಧಿಕಾರಿಗಳು ಇವರನ್ನೊಳಗೊಂಡ ಒಂದು ಕಮಿಟಿಯನ್ನು ಮಾಡಿ ಅವರ ಸಲಹೆ ಪ್ರಕಾರ ತೀವ್ರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಡುತ್ತೇನೆ.

ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಕೊಟ್ಟ ಹಣವನ್ನೂ ಅಧಿಕಾರಿಗಳು ಖರ್ಚು ಮಾಡಿಲ್ಲ, ಎಷ್ಟೋ ಸಲ ಅಧಿಕಾರಿಗಳು ಮತ್ತು ದಳ್ಳಾಳಿಗಳ ಕಡೆಯಿಂದ ಹಣದ ದುರುಪಯೋಗವಾಗುವ ಸಂಭವಿದೆ ಎನ್ನುವ ಮಾತನ್ನೂ ಹೇಳಿದ್ದಾರೆ. ಆ ಬಗ್ಗೆ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಅವರು ಅಂಥ ಅಧಿಕಾರಿಗಳ ಬಗ್ಗೆ ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಮಾತ್ರ ಹೇಳಲಿಲ್ಲ. ಅದನ್ನು ಸಭೆಯ ಮುಂದೆ ತಮ್ಮ ಉತ್ತರದಲ್ಲಿ ತಿಳಿಸಬೇಕು. ನಮಗೆ ಇನ್ನೂ ಒಂದು ಅನುಭವ ಏನು ಬಂದಿದೆ ಎಂದರೆ ಮಂತ್ರಿಗಳು ಭಾಷಣ ಮಾಡುತ್ತಾರೆ ಹೇಳಿದ್ದನ್ನೇ ಹೇಳಿಕೊಂಡು ಹೋಗುತ್ತಾರೆ, ನಾವು ಮಾಡುವ ಕೆಲಸಗಳನ್ನು ನಾವು ಮಾಡುವ ರೀತಿಯಲ್ಲಿಯೇ ಮಾಡಬಹುದು ಎನ್ನುವ ಭಾವನೆ ಬಂದಿದೆ. ನನಗೆ ತಿಳಿದ ಮಟ್ಟಿಗೆ ಸ್ವಾತಂತ್ರ್ಯ ಬಂದ ನಂತರ ದಿವಂಗತ ಜವಹರಲಾಲ್ ನೆಹರೂ ಅವರು ಹೇಳಿದರು, ಎಲ್ಲಿ ಕಾಳಸಂತೆಕೋರರಿದ್ದಾರೆ ಅವರನ್ನೆಲ್ಲ ಗಲ್ಲಿಗೆ ಏರಿಸಬೇಕು ಎಂದು ಇಷ್ಟೆಲ್ಲ ಹೇಳಿದ್ದರೂ

ಒಬ್ಬರ ಮೇಲೂ ಯಾವುದೇ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ತಪ್ಪು ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆ, ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಯುದ್ಧಕಾಲದಲ್ಲಿ ಯಾವರೀತಿ ತುರ್ತು ಪರಿಸ್ಥಿತಿ ಎಂದು ಹೇಳಿ ಕೆಲಸ ಮಾಡಿದರು ಅದೇ ರೀತಿಯಾಗಿ ಪರಿಹಾರಕಾರ್ಯ ನಡೆಯಬೇಕು. ನಾನು ನಮ್ಮ ಭಾಗದಲ್ಲಿ ಎರಡು ತಿಂಗಳಿಂದ ಪ್ರವಾಸ ಮಾಡುತ್ತಿದ್ದೇನೆ, ಬರಗಾಲದ ಕಾಮಗಾರಿಗಳು ಯಾವರೀತಿ ನಡೆಯುತ್ತಿವೆ ಎಂದು ನೋಡುತ್ತಿದ್ದೇನೆ. ತಾಲ್ಲೂಕು ಕಮಿಟಿಯಿಂದ ಅಸಿಸ್ಟೆಂಟ್ ಕಮಿಷನರ್, ಡೆಪ್ಯುಟಿ ಕಮಿಷನರ್‌ಗೆ ಹೋಗಿ, ಎಕ್ಸಿಕ್ಯೂಟಿವ್ ಇಂಜಿನಿಯರಿಂದ ಪ್ಲಾನ್ ಮತ್ತು ಎಸ್ಟಿಮೇಟುಗಳು ಬರಬೇಕು, ಅದೆಲ್ಲ ಬಂದ ಮೇಲೆ ಕೆಲಸಕ್ಕೆ ಆರ್ಡರ್ ಕೊಡಬೇಕು. ಇದರಿಂದ ಎರಡು ಮೂರು ತಿಂಗಳವರೆಗೆ ವಿಳಂಬವಾಗುತ್ತದೆ. ಅಭಾವ ಇರುವ ಸಂದರ್ಭದಲ್ಲಿ ಕೆಲಸಗಳನ್ನು ಮಾಡಿಸುವುದರಲ್ಲಿ ಹೀಗೆ ವಿಳಂಬವಾದರೆ ಜನ ಹೇಗೆ ಬದುಕಬೇಕು ? ಈಗಾಗಲೇ ಅನೇಕ ಸದಸ್ಯರು ರೇಟುಗಳ ಬಗ್ಗೆ ಹೇಳಿದ್ದಾರೆ. ಷೆಡ್ಯೂಲ್ ರೇಟ್ ಏನಿದೆ ಅದು 10 ವರ್ಷಗಳ ಹಿಂದೆ ಲೋಕೋಪಯೋಗಿ ಖಾತೆ ರಿವೈಸ್ ಮಾಡಿದ್ದು ಇದುವರೆಗೂ ಹಾಗೆಯೇ ಇದೆ. ಅವರು ಗೊತ್ತು ಮಾಡಿರುವ ದರಕ್ಕೆ ಕೆಲಸ ಮಾಡಲು ಜನ ಬರುವುದಿಲ್ಲ. ಕೆಲಸದ ರೀತಿಯೂ ಬಹಳ ವಿಚಿತ್ರವಾಗಿದೆ. ಅನ್ನವಿಲ್ಲದೆ ದಿನೇ ದಿನೇ ಜನ ಸಾಯುವ ಸ್ಥಿತಿಯಲ್ಲಿದ್ದಾರೆ. ಅಂಥವರ ಸಲುವಾಗಿ, ಪ್ರತಿನಿತ್ಯ ಅನ್ನ ಅಂಥವರಿಗೆ ಸಿಕ್ಕುವ ಸಲುವಾಗಿ ಈ ಕೆಲಸಗಳನ್ನು ಮಾಡಬೇಕಾಗಿದೆ. ಅಂಥದ್ದರಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು 15 ದಿವಸ ಕೆಲಸ ಮಾಡಿ ಮೆಷರ್‌ಮೆಂಟ್ ತೆಗೆದುಕೊಂಡು, ಮೇಲಿನವರ ಅಪ್ರೂವಲ್ ತೆಗೆದುಕೊಂಡು ಆ ಮೇಲೆ ಹಣ ಕೊಡುತ್ತೇವೆ ಎಂದು ಹೇಳುತ್ತಾರೆ. ಪ್ರತಿನಿತ್ಯ ದುಡಿದವನಿಗೆ ಹಣ ಸಿಕ್ಕದೆ ಹೋದರೆ ಅವನು ಬದುಕುವುದು ಕಷ್ಟ. ಆದುದರಿಂದ ಪ್ರತಿನಿತ್ಯ ಬರಗಾಲದಲ್ಲಿ ಕೆಲಸ ಮಾಡತಕ್ಕ ಕೂಲಿಗಾರರಿಗೆ, ಬಡ ಜನಗಳಿಗೆ ಅದೇ ದಿವಸ ಆಹಾರದ ರೂಪದಲ್ಲಿ ಸಂಬಳ ಸಿಕ್ಕಬೇಕು. ಇಲ್ಲದೆ ಹೋದರೆ ಅವರು ಬದುಕುವುದಕ್ಕೆ ಸಾಧ್ಯವಿಲ್ಲ.

ಕುಡಿಯುವ ನೀರಿನ ಬಗ್ಗೆ ಧಾರವಾಡ ಜಿಲ್ಲೆಯಲ್ಲಿ ಕೆಲವು ಹಳ್ಳಿಗಳಲ್ಲಿ ದಾರುಣ ಪರಿಸ್ಥಿತಿ ಇದೆ. ನನ್ನ ತಾಲ್ಲೂಕಿನಲ್ಲಿ 8–10 ಗ್ರಾಮಗಳಲ್ಲಿ ನೀರಿನ ತೊಂದರೆ ಬಹಳವಾಗಿದೆ ಅಲ್ಲಿರುವ ಕೆರೆಗಳಲ್ಲಿ ನೀರು ಬತ್ತಿ ಹೋಗಿದೆ. ಒಂದು ಗುಂಡಿ ತೆಗೆದರೆ ರಾತ್ರಿಯೆಲ್ಲ ಕಾದು ಬೆಳಗಾಗುವವರೆಗೂ ಇದ್ದರೆ ಒಂದು ಕೊಡ ನೀರು ಸಿಕ್ಕುತ್ತದೆ. ಅದನ್ನು ಯಾರಾದರೂ ಬಂದು ತೆಗೆದುಕೊಂಡು ಹೋಗುತ್ತಾರೆ ಎಂದು ಜನ ಗುಡಿಸಲು ಹಾಕಿಕೊಂಡು ಅಲ್ಲಿಯೇ ಕುಳಿತಿರುತ್ತಾರೆ. ಅಲ್ಲದೆ ಐದಾರು ಮೈಲಿಯಿಂದ ನೀರು ಬರಬೇಕು. ಅಲ್ಲಿಗೆ ನೀರು ಒದಗಿಸುವ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಅಧಿಕಾರಿಗಳಿಗೆ ತಿಳಿಸಿದ ಮೇಲೆ ಟ್ರಕ್‌ನಲ್ಲಿ ನೀರನ್ನು ಒಯ್ಯುವ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಅವರಿಗೆ ಎರಡು ತಿಂಗಳಾದರೂ ಇದುವರೆಗೂ ಹಣ ಸಿಕ್ಕಿಲ್ಲ. ಷೆಡ್ಯೂಲ್ ರೇಟುಗಳು ಇನ್ನೂ ಬಂದಿಲ್ಲ, ಅದಕ್ಕೆ ಬರೆದಿದ್ದೇವೆ ಎಂದು ಹೇಳುತ್ತಾರೆ. ಕುಡಿಯುವ ನೀರನ್ನು ಒದಗಿಸಿದಂಥ ಟ್ರಕ್ ಮಾಲೀಕರಿಗೆ ಎರಡು ಮೂರು ತಿಂಗಳವರೆಗೆ ಹಣ ಕೊಡದೆ ಇದ್ದರೆ ಯಾರು ಆ ಕೆಲಸಕ್ಕೆ ಮುಂದೆ ಬರುತ್ತಾರೆ. ಈ ರೀತಿಯ ಅವ್ಯವಸ್ಥೆ ಬರಗಾಲ ಪರಿಹಾರ ಕ್ರಮದಲ್ಲಿ ನಡೆಯುತ್ತಿದೆ. ಇದಕ್ಕೆ ನನ್ನ ಸೂಚನೆ ಏನೆಂದರೆ ತಾಲ್ಲೂಕು ಮಟ್ಟದಲ್ಲಿ ಪರಿಹಾರ ಸಮಿತಿಗಳು ಎಂದು ಏನಿವೆ—ತಾಲ್ಲೂಕು ಬೋರ್ಡೂ ಬೇಡ, ಅಧಿಕಾರಿಗಳೂ ಬೇಡ—ತಾಲ್ಲೂಕು ರಿಲೀಫ್ ಕಮಿಟಿಗಳಿಗೆ ಈ ಅಧಿಕಾರವನ್ನು ಕೊಡಬೇಕು ; ಅವರು ಹೆಚ್ಚು ಹಣ ಖರ್ಚು ಮಾಡಿ ಕೆಲಸಮಾಡುವಂಥ ವ್ಯವಸ್ಥೆ ಆಗಬೇಕು. ಹೀಗೆ ಮಾಡಿದರೆ ತೀವ್ರವಾಗಿ ಕ್ರಮ ಅಮಲಿನಲ್ಲಿ ಬರುತ್ತದೆ.

ನಮ್ಮ ಭಾಗದಲ್ಲಿ ಒಂದು ವಿಚಿತ್ರವಿದೆ. ಅಲ್ಲಿ ಕೆರೆಗಳಿಲ್ಲ, ರಸ್ತೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಜನಗಳಿಗೆ ಕೆಲಸ ಕೊಡುವ ರೀತಿ ಎಂದರೆ ರೈತರು ತಮ್ಮ ಹೊಲಗಳಲ್ಲಿ ಒಡ್ಡು ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಸರ್ಕಾರದವರೂ ಈ ಕೆಲಸವನ್ನು ತೆಗೆದುಕೊಳ್ಳುತ್ತಿಲ್ಲ. ಸರ್ಕಾರದವರಿಂದ ತೆಗೆದುಕೊಳ್ಳುವುದಕ್ಕಾಗದೆ ಇದ್ದರೆ ದೊಡ್ಡ ದೊಡ್ಡ ರೈತರು ತಮ್ಮ ತಮ್ಮ ಹೊಲಗಳಲ್ಲಿ ಒಡ್ಡು ಹಾಕುವ ಕೆಲಸವನ್ನು ಬರಗಾಲ ಕಾಮಗಾರಿಯನ್ನಾಗಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು, ಅದಕ್ಕೆ ಸರ್ಕಾರದಿಂದ ಹಣ ಕೊಡುವ ವ್ಯವಸ್ಥೆಯಾಗಬೇಕು. ಆ ಭಾಗದಲ್ಲಿ ಕೆರೆಗಳಿಲ್ಲದೆ ಬಾವಿ ತೆಗೆಯಲಿಕ್ಕೆ ಸಾಧ್ಯವಿದೆ. ಕೂಲಿ ಮಾಡುವ ಜನರು ಕೆಲಸವಿಲ್ಲದೆ ಉಪವಾಸ ಸಾಯುವ ಪರಿಸ್ಥಿತಿ ಇರುವುದರಿಂದ ತೀವ್ರ ಒಂದು ವ್ಯವಸ್ಥೆ ಮಾಡಿ ಜಮೀನು ಮಾಲೀಕರು ತಮ್ಮ ತಮ್ಮ ಜಮೀನು ಅಭಿವೃದ್ಧಿಯ ಸಲುವಾಗಿ ಮಾಡುವ ಕೆಲಸವನ್ನು ಬರಗಾಲ ಕಾಮಗಾರಿಯಂತೆ ಮಾಡುವ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು.

(ಶ್ರೀ ಎಸ್. ಆರ್. ಬೊಮ್ಮಾಯಿ)

ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಧಾರವಾಡ ಜಿಲ್ಲೆಯಲ್ಲಿ ಸುಮಾರು ಒಂದು ಸಾವಿರ ಹಳ್ಳಿಗಳಿಗೆ ಸಂಬಂಧಪಟ್ಟ ಹಾಗೆ ಯೋಜನೆಗಳು ತಯಾರಾಗಿವೆ. ಆದರೆ ಕಾರ್ಯಗತವಾಗದೆ 20 ವರ್ಷಗಳಲ್ಲಿ ಕೇವಲ 10 ಕೆಲಸಗಳಾಗಿರುವಾಗ ಎಲ್ಲ ಬಾವಿಗಳನ್ನೂ ಎಷ್ಟು ಕಾಲದಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಆದ್ದರಿಂದ ತೀವ್ರತರವಾಗಿ ಕುಡಿಯುವ ನೀರನ್ನು ಒದಗಿಸಲು ಸರ್ಕಾರದವರು ಹಣವನ್ನು ಒದಗಿಸಬೇಕು ಮತ್ತು ಆ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈ ಸಮಯದಲ್ಲಿ ಸೂಚನೆ ಕೊಡಬಯಸುತ್ತೇನೆ.

ಅಧ್ಯಕ್ಷರು ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳು ದೇಶದಲ್ಲಿರುವ ಅಭಾವ ಪರಿಸ್ಥಿತಿಯ ಬಗ್ಗೆ ಮಾಡಿರುವ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾರೆ :

> "There is no human problem that cannot be sloved by determination and dedicated effort."

ಎರಡನೆಯದಾಗಿ :

> "Government have therefore suggested that relief works of an estimated cost of twice or thrice the total funds available may be authorised for execution so that relief may go to the people promptly from out of the funds available."

ಎಂದು ಹೇಳಿದ್ದಾರೆ. ಈ ಎರಡು ದಿಟ್ಟತನದ ಮಾತನ್ನು ಅವರು ಪ್ರಸ್ತಾಪಿಸಿರುವುದಕ್ಕಾಗಿ ಅವರನ್ನು ಅಭಿನಂದಿಸಿ ನಾಲ್ಕು ಮಾತನ್ನಾಡುವುದಕ್ಕೆ ಅಪೇಕ್ಷಪಡುತ್ತೇನೆ.

ಸ್ವಾಮಿ, ಈಗ ಸ್ಕೇರ್ಸಿಟಿ ಬಗ್ಗೆ ಮಾನ್ಯ ಮಿತ್ರರುಗಳೆಲ್ಲರೂ ಪ್ರಸ್ತಾಪ ಮಾಡಿದ್ದಾರೆ. ನಾನು ಇದರ ವಿಷಯವಾಗಿ ಹೆಚ್ಚು ಹೇಳುವುದಕ್ಕೆ ಹೋಗದೇ ಒಂದು ಪ್ರಯಾರಿಟಿ ಬೇಸಿಸ್ ಮೇಲೆ ನಾಲ್ಕು ಮಾತುಗಳನ್ನು ಆಡುತ್ತೇನೆ. ಪ್ರಥಮತಃ ಇದರ ಬಗ್ಗೆ ಯಾವ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದರೆ ಆಹಾರಧಾನ್ಯಗಳ ಬೆಲೆಗಳು ದಿನೇ ದಿನೇ ಗಗನಕ್ಕೆ ಏರಿ ಹೋಗುತ್ತಾ ಇರುವುದರಿಂದ ಇದನ್ನು ಸರಿಯಾದ ಒಂದು ಹತೋಟಿಯಲ್ಲಿ ಇಡುವಂತೆ ಮಾಡಬೇಕು. ಈಗ ಒಬ್ಬ ಕೂಲಿಗಾರನು 4 ದಿವಸ ದುಡಿದರೂ, ಅದರಿಂದ ಬರುವ ದುಡ್ಡು ಒಂದು ದಿವಸಕ್ಕೂ ಸಾಲದು. 4—6 ವರ್ಷಗಳ ಹಿಂದೆ ಒಬ್ಬ ರೈತನು ಏನು ಒಂದು ಸುಖಜೀವನ ಮಾಡಬಹುದಾಗಿತ್ತೋ ಅಂತಹ ಸುಖಜೀವನವನ್ನು ಈ ಸ್ಕೇರ್ಸಿಟಿಯಿಂದ ಈ ದಿವಸ ಆಹಾರ ಧಾನ್ಯ ವಸ್ತುಗಳ ಬೆಲೆಗಳ ಏರಿಕೆಯಿಂದ ಮಾಡಲಾರದೆ ಬಹಳ ತೊಂದರೆಗೆ ಸಿಕ್ಕಿಕೊಂಡಿದ್ದಾನೆ. ಆದುದರಿಂದ ಸರ್ಕಾರದವರು ಆಹಾರಧಾನ್ಯಗಳು ಬಫರ್‌ಸ್ಟಾಕ್ ಮಾಡಿ ಅಥವಾ ಇನ್ನಾವುದೋ ಒಂದು ಕಾರ್ಯಕ್ರಮವನ್ನು ಹಾಕಿ ಆಹಾರವಸ್ತುಗಳ ಬೆಲೆ ಏರುವಿಕೆಯನ್ನು ತಡೆಗಟ್ಟುವಂತೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

[Mr. CHAIRMAN (DR. R. NAGAN GOUDA) took the Chair]

ಇನ್ನು ಡ್ರಿಂಕಿಂಗ್ ವಾಟರ್ ವೆಲ್ಸ್ ಮತ್ತು ಇರ್ರಿಗೇಷನ್ ವೆಲ್ಸ್ ವಿಷಯವಾಗಿ ಒಂದು ಮಾತನ್ನು ತಿಳಿಸಬಯಸುತ್ತೇನೆ. ಮೈಸೂರು ಸೀಮೆಗೆ 1968ನೇ ಇಸವಿ ಜೂನ್‌ವರೆಗೆ 29,822 ಬಾವಿಗಳಿಗೆ ಸ್ಯಾಂಕ್ಷನ್ ಮಾಡಿರುವ ಪೈಕಿ 5 ಸಾವಿರ ಬಾವಿಗಳು ಆಗಿವೆ. ಅಲ್ಲಿಗೆ 6/1 ಭಾಗವೂ ಕೂಡ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಬಾವಿಗಳಿಗೆ ಸಾಲವನ್ನು ಕೊಡುತ್ತೀರಿ ಅದನ್ನು ಖರ್ಚು ಮಾಡುವಂತೆ ಶೀಘ್ರವಾದ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬಾವಿಗಳನ್ನು ತೋಡಬೇಕಾದರೆ ಸವ್ಯವಸ್ಥಿತವಾದ ಮೆಶಿನ್ ಬೇಕು. ಈ ಮೆಷನ್ ತರಿಸಲು ಪತ್ರದ ಮೂಲಕ ವ್ಯವಹಾರಗಳು ನಡೆಯಬೇಕಾಗಿರುವುದರಿಂದ ಸರ್ಕಾರದವರು ತೀವ್ರವಾದ ಒಂದು ಕಾರ್ಯಕ್ರಮವನ್ನು ಕೈಗೊಂಡು ಬಾವಿ ತೋಡಿಸುವ ಮೆಷನ್ ತರಿಸಿಕೊಡುವ ಒಂದು ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಮೂರನೆಯದಾಗಿ ಸಾಯಿಲ್ ಕನ್‌ಸರ್ವೇಷನ್ ವಿಷಯ. ಇದಕ್ಕೆ ಕೇಂದ್ರ ಸರ್ಕಾರದವರು ವರ್ಷ ಒಂದಕ್ಕೆ 110 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಸುಮಾರು 6.5 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಆದರೆ ಮಳೆ ದೆಸೆಯಿಂದ ಇದನ್ನು ಇತರ ಕಾರಣಗಳಿಂದ ಬೆಳೆ ಬೆಳೆಯತಕ್ಕಂಥ ಜಮೀನಿನಲ್ಲಿ ಸಾಯಿಲ್ ಎರೋಷನ್ ಆಗುತ್ತದೆ. ಆ ಜಮೀನುಗಳಿಗೆ ಲಕ್ಷಾಂತರ ರೂಪಾಯಿ ಗೊಬ್ಬರ ಹಾಕುತ್ತಾರೆ. ಕಾಂಟೂರು ಬಂಡಿಂಗ್ ಕೆಲಸ ಸಾಕಷ್ಟು ಮಾಡದೆ ಇರುವುದರಿಂದ ಅವೆಲ್ಲಾ ಕೊಚ್ಚಿಕೊಂಡು ಹೋಗಿ ನಾಲೆಗಳಿಗೆ ಕೆರೆಗಳಿಗೆ ಸಮುದ್ರಕ್ಕೆ ಹೋಗಿ ಸೇರತ್ತದೆ. ಇದರಿಂದ ಜಮೀನಿನಲ್ಲಿರತಕ್ಕಂಥ ಭೂಸಾರವೆಲ್ಲಾ ಹೋಗುತ್ತಿದೆ. ಆದುದರಿಂದ ಇದಕ್ಕಾಗಿ ಸರ್ಕಾರದವರು ಖರ್ಚು ಮಾಡುವ 6.5 ಕೋಟಿ ರೂಪಾಯಿ ಮತ್ತು ಕೇಂದ್ರ ಸರ್ಕಾರದ ನೆರವು ಇವೆಲ್ಲವನ್ನೂ ಉಪಯೋಗಿಸಿ ಶಾಶ್ವತವಾದ ಒಂದು ಕೆಲಸವನ್ನು ಮಾಡಿ ಬಂದನೀರು ಭೂಮಿಯಲ್ಲೇ ನಿಲ್ಲುವ ಹಾಗೆ ಮಾಡಿದರೆ ಇದರಿಂದ ರೈತರು ಹೆಚ್ಚಿನ ಆಹಾರೋತ್ಪತ್ತಿಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಮೈನರ್ ಇರಿಗೇಷನ್, ಮೇಜರ್ ಇರ್ರಿಗೇಷನ್, ಸಾಯಿಲ್ ಕನ್‌ಸರ್ವೇಷನ್ ಕೆಲಸ ಬಹಳ ಮುಖ್ಯವಾದುದು. ಈ ಕೆಲಸವನ್ನು ತೆಗೆದುಕೊಂಡು ಕಾರ್ಯಗತ ಮಾಡಿದರೆ ಕೂಲಿಗಾರರಿಗೂ ಕೆಲಸ ಸಿಕ್ಕಿದಂತಾಗುತ್ತದೆ. ಮತ್ತು ರೈತರಿಗೂ ನೆರವಾದಂತಾಗುತ್ತದೆ. ಆದ್ದರಿಂದ ತಾತ್ಕಾಲಿಕವಾದ ನೆರವು ಏನು ಕೊಡುತ್ತಾರೋ ಅದರಲ್ಲಿ ಪ್ರಥಮತಃ ಈ ಸಾಯಿಲ್ ಕನ್‌ಸರ್ವೇಷನ್ನಿಗೆ ಆದ್ಯತೆ ಕೊಡಬೇಕೆಂದು ಸರ್ಕಾರದವರಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ.

ಇನ್ನು ನಾಲ್ಕನೆಯದಾಗಿ ಮೈನರ್ ಇರ್ರಿಗೇಷನ್ ವಿಚಾರವಾಗಿ ಅನೇಕ ಮಿತ್ರರು ಹೇಳಿದ್ದಾರೆ. ಇಲಾಖೆಯಲ್ಲಿ ಎಸ್ಟಿಮೇಟ್ ಆಗಬೇಕು, ಸ್ಯಾಂಕ್ಷನ್ ಆಗಬೇಕು ಎಂದು ಫೈಲುಗಳನ್ನು ಡಿಲೇ ಮಾಡುತ್ತಾರೆ ಎನ್ನುವ ವಿಚಾರ ಹೇಳಿದ್ದಾರೆ. ಆದುದರಿಂದ ನಾನು ಹೇಳುವುದು ಇಷ್ಟೆ. ರಿಲೀಫ್ ಕಮಿಟಿಯೊಳಗೆ ತಾಸೀಲ್ದಾರ್, ಅಸಿಸ್ಟೆಂಟ್ ಕಮಿಷನರು, ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು, ವಿಧಾನಸಭಾ ಸದಸ್ಯರು ಎಲ್ಲರೂ ಇದ್ದಾರೆ. ಆ ಕಮಿಟಿಗೆ ಇರತಕ್ಕಂತ ಅಧಿಕಾರವನ್ನು ಲಿಬರಲೈಸ್ ಮಾಡಿ ಶೀಘ್ರವಾಗಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಬಯಸುತ್ತೇನೆ.

ಇನ್ನೊಂದು ವಿಚಾರ ಏನೆಂದರೆ 9ನೇ ಪೇಜಿನಲ್ಲಿ ಸೂಚಿಸಿರುವ ಪ್ರಕಾರ ಏನು ಒಂದು ಎಸ್ಟಿಮೇಟ್ ಮಾಡಿದ್ದಾರೋ ಅದರ ಅರ್ಧ ಭಾಗವಾಗಲಿ ¼ ಭಾಗವಾಗಲಿ ಕೆಲಸ ಕಾರ್ಯಗಳು ನಡೆದಿಲ್ಲ. ಇದನ್ನು ಪೂರ್ಣವಾಗಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಮೇಜರ್ ಮತ್ತು ಮೈನರ್ ಇರ್ರಿಗೇಷನ್ ವರ್ಕ್ಸ್ ವಿಷಯ. ಸರ್ಕಾರದವರು ರೈತರಿಂದ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಪಡೆಯಬೇಕೆಂಬ ಏನು ಒಂದು ಅಂದಾಜನ್ನು ಹಾಕಿಕೊಂಡಿದ್ದಾರೋ ಅದನ್ನು ರೈತರು ಕೊಡುವುದಕ್ಕಾಗುವುದಿಲ್ಲ. ಬೇಕಾದರೆ ಅದನ್ನು ಮೊದಲು ಬ್ಯಾಂಕ್ ಮುಖಾಂತರ ಕೊಡಿಸಿ ಆಮೇಲೆ ಕೊಟ್ಟಿರತಕ್ಕ ಮೊಬಲಗನ್ನು ತೆಗೆದುಕೊಳ್ಳಬೇಕು. ಶ್ರೀಮಾನ್ ನಿಜಲಿಂಗಪ್ಪನವರೂ ಕೂಡ ಈ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಮೇಜರ್ ಮತ್ತು ಮೈನರ್ ಇರ್ರಿಗೇಷನ್ ಕೆಲಸಗಳನ್ನು ಕಾರ್ಯಗತ ಮಾಡಲು ಬ್ಯಾಂಕುಗಳು ಸಹಾಯಮಾಡಬೇಕು, ವ್ಯವಸಾಯ ಉದ್ಯೋಗ ಬಹಳ ಮುಖ್ಯವಾದುದು, ರೈತರು ಕೊಡಬೇಕಾದ ಕಾಂಟ್ರಿಬ್ಯೂಷನ್ ಮೊಬಲಗನ್ನು ಬ್ಯಾಂಕಿನವರಿಂದಲೇ ಕೊಡಿಸಬೇಕು ಎಂದು ಹೇಳಿದರು. ಇದು ಶಾಶ್ವತವಾದ ಒಂದು ಕಾರ್ಯ. ಇದರಿಂದ ರೈತನಿಗೆ ತುಂಬಾ ಪ್ರಯೋಜನವಾಗುತ್ತದೆ. ಇದನ್ನು ಕಾರ್ಯಗತಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನು ನನ್ನ ತಾಲ್ಲೂಕಿನ ಒಂದು ವಿಚಾರ ಹೇಳಬೇಕಾಗಿದೆ. ಚಾಮರಾಜ ಲೆಫ್ಟ್ ಬ್ಯಾಂಕ್ ನಾಲೆಗೆ ಪಿ. ಡಬ್ಲ್ಯು. ಡಿ. ಇಲಾಖೆಯವರು 11 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅಲ್ಲಿ 48 ಐ. ಪಿ. ಸೆಟ್ಸ್ ಮಾತ್ರ ಹಾಕಿದ್ದಾರೆ. ಟೈಲ್ ಎಂಡ್‌ನಲ್ಲಿರತಕ್ಕಂಥ ರೈತರಿಗೆ 4 ಸಾವಿರ ಎಕರೆ ಜಮೀನಿಗೆ ನೀರೇ ಸಾಕಾಗುವುದಿಲ್ಲ. ಇದರಿಂದ ಭತ್ತದ ಬೆಳೆ ಬಹಳ ಕಡಿಮೆಯಾಗಿದೆ. ಈ 11 ಲಕ್ಷ ರೂಪಾಯಿ ಖರ್ಚು ಮಾಡಿದರೂ ಏನೂ ಪ್ರಯೋಜನವಿಲ್ಲ. ರೈತರು ಕಾಂಟ್ರಿಬ್ಯೂಷನ್ ಮೊಬಲಗನ್ನು ಕೊಡಲಿಕ್ಕೆ ತಯಾರಾಗಿದ್ದಾರೆ. ಅದನ್ನು ಬ್ಯಾಂಕ್ ಮೂಲಕ ಕೊಡಿಸಿ 40 ಲಕ್ಷ ರೂಪಾಯಿ ವೆಚ್ಚದಲ್ಲಿ ಈ ಪ್ರಾಜೆಕ್ಟ್ ಕಾರ್ಯವನ್ನು ಕೈಗೊಂಡು ಪೂರ್ಣಗೊಳ್ಳುವಂತೆ ಮಾಡಿದರೆ ಸರ್ಕಾರಕ್ಕೂ ದುಡ್ಡು ಸಿಕ್ಕಿದ ಹಾಗಾಗುತ್ತದೆ, ಜನಗಳಿಗೂ ಈ ಅಭಾವ ಪರಿಸ್ಥಿತಿಯಲ್ಲಿ ಕೆಲಸವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಆದುದರಿಂದ ಈ ಕಾರ್ಯವನ್ನು ಜರೂರು

(ಶ್ರೀ ಎಂ. ಬಸವರಾಜು)

ಕೈಗೊಳ್ಳುವಂತೆ ಏರ್ಪಾಡು ಮಾಡಬೇಕು. ಇನ್ನೊಂದು ಸಂಗತಿ ಏನೆಂದರೆ ಅರಕಲಗೂಡು ತಾಲ್ಲೂಕು ಬೂದನೂರು ಟ್ಯಾಂಕ್‌ನಿಂದ ಎಷ್ಟೋ ನೀರು ಪೋಲಾಗಿ ಹೋಗುತ್ತಿದೆ. ಆ ನೀರು 1 ಸಾವಿರ 2 ಸಾವಿರ ಎಕರೆಯಲ್ಲಿ ಬೆಳೆ ಮಾಡಲು ಸಾಕಾಗುತ್ತದೆ. ಈಗ ಈ ನೀರು ಕಾವೇರಿ ಹೊಳೆಗೆ ಹೋಗುತ್ತದೆ. ಆದುದರಿಂದ ಪೋಲಾಗುವ ನೀರನ್ನು ತಡೆಗಟ್ಟಿ ಆ ಪ್ರದೇಶಕ್ಕೆ ಒಂದು ಫೀಡರ್ ಛಾನಲ್ ಮಾಡಿದರೆ ಕೆ. ಆರ್. ನಗರ ಒಂದರಲ್ಲೇ 1 ಸಾವಿರ ಎಕರೆ ಜಮೀನು ನೀರಾವರಿಯಾಗುತ್ತದೆ, ಜನಗಳಿಗೆ ಕೂಲಿಯೂ ಸಿಕ್ಕುತ್ತದೆ. ಇವೊತ್ತಿನ ದಿವಸ ಇರತಕ್ಕ ಅಭಾವಪರಿಸ್ಥಿತಿಯಲ್ಲಿ ಕೂಲಿಗಾರರಿಗೆ ನೆರವಾಗಿ ಜೀವನಕ್ಕೆ ಹಣ ಕೊಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಈ ಒಂದು ಸಂದರ್ಭದಲ್ಲಿ ಕೆ. ಆರ್. ನಗರದ ಸ್ಕೇರ್ಸಿಟಿ ಏರಿಯಾಕ್ಕೆ ಪ್ರಥಮ ಆದ್ಯತೆ ಕೊಟ್ಟು ಈ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಆಶೆಮಾಡುತ್ತೇನೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳುವಳಿಕೆ ನೀಡಿ, ಈ ಕೆಲಸವನ್ನು ಪೂರೈಸಬೇಕೆಂದು ನಿವೇದನೆ ಮಾಡಿಕೊಂಡು ಈ ಒಂದೆರಡು ಮಾತುಗಳನ್ನಾಡಲು ಅವಕಾಶಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದ ವಿಚಾರ ನಡೆಯುತ್ತಾ ಇರುವಾಗ ಕ್ಯಾಬಿನೆಟ್ಟಿನ ಮಂತ್ರಿಗಳು ಯಾರೂ ಇಲ್ಲದಿರುವುದು ಬಹಳ ವ್ಯಸನದ ವಿಚಾರ. ದೇಶದಲ್ಲಿರತಕ್ಕಂತಹ ಅಭಾವ ಪರಿಸ್ಥಿತಿಯನ್ನು ಕುರಿತು ಮಾನ್ಯ ಮುಖ್ಯಮಂತ್ರಿಯವರು ಒಂದು ವಿಷಯವನ್ನು ಮರೆ ಮಾಚದೆ ಹೇಳಿದ್ದಾರೆ. ಕೆಲವು ಕಾಲದಲ್ಲಿ ಹೊಟ್ಟೆಗಿಲ್ಲದೆ ಸತ್ತರು, ಎಂದು ಹೇಳದೆ ಪ್ಲೇಗ್ ಬಂದು ಸತ್ತರು, ಹಾವು ಕಡಿದು ಸತ್ತರು ಎಂದು ಹೇಳುತ್ತಿದ್ದರು. ಆದರೆ ಇವತ್ತು ಆ ಮಟ್ಟಕ್ಕೆ ಹೋಗದೆ, ಸಮಸ್ಯೆ ಇರುವುದನ್ನು ಇದ್ದ ಹಾಗೆ ಹೇಳಿದ್ದಾರೆ. ನಮ್ಮ ದೇಶದಲ್ಲಿ ಹಿಂದೆ ಇಂಗ್ಲಿಷರ ಆಳ್ವಿಕೆಯ ಕಾಲದಲ್ಲೂ ಕ್ಷಾಮಗಳು ತಲೆದೋರಿ, ಫ್ಯಾಮಿನ್ ಕಮಿಷನ್ ಕೂಡ ಆಗಿದೆ. ಎಲ್ಲಕ್ಕಿಂತಲೂ ಸ್ವಾತಂತ್ರ್ಯ ಬಂದಲಾಗಾಯಿತು ಪ್ರತಿ ವರ್ಷವೂ ಎರಡು ಮೂರು ಸಲ ಅಭಾವದ ಅನುಭವ ಬಂದಿದೆ. ಆದರೆ ಪ್ರತಿ ಸಲದ ಅಧಿವೇಶನದ ಕಾಲಕ್ಕೂ ಕೂಡ ಸದಸ್ಯರು ವಾಸ್ತವಾಂಶವನ್ನು ಇಟ್ಟಂತೆ ಮನವಿ ಮಾಡಿಕೊಂಡಿದ್ದಾರೆ; ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದಕ್ಕೆ ಪರಿಹಾರ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಒತ್ತಿ ಒತ್ತಿ ಹೇಳಿದ್ದಾರೆ. ಆದರೆ ನಮ್ಮ ಸರ್ಕಾರದವರು ಆ ಕಡೆಗೆ ಮನಸ್ಸು ಕೊಟ್ಟಿದ್ದರೆ ಖಂಡಿತವಾಗಿಯೂ ಇದು ಆಗುತ್ತಾ ಇರಲಿಲ್ಲ. ಏಕೆಂದರೆ 20 ವರ್ಷದಿಂದ ಈ ದೆಸೆಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರೆ, ಇಂಥ ಕಷ್ಟ ಬರುತ್ತಿರಲಿಲ್ಲ. ಪ್ರಕೃತಿಯ ವಿಕೋಪವೂ ಅದರಲ್ಲಿ ಸ್ವಲ್ಪ ಇದೆ. ಮಾನವ ದೃಷ್ಟಿಯಿಂದ ನೋಡುವುದಾದರೆ ಈ ಕಷ್ಟಕ್ಕೆ ಸರ್ಕಾರದವರೇ ಕಾರಣವೆಂದು ಹೇಳಬೇಕಾಗಿದೆ. ಇದನ್ನು ಅವರು ಒಪ್ಪಿಕೊಳ್ಳಲೇಬೇಕಾಗುತ್ತದೆ. ಕಳೆದ ವರ್ಷ ದಕ್ಷಿಣ ವಲಯದ ಅಂದರೆ ಮೈಸೂರು, ಮದ್ರಾಸ್ ಮತ್ತು ಆಂಧ್ರದ ಎಲ್ಲಾ ಮುಖ್ಯ ಮಂತ್ರಿಗಳ ಸಭೆಯು ತಿರುಪತಿಯಲ್ಲಿ ಜರುಗಿದಾಗ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಒಂದು ಶಾಶ್ವತವಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ.

Sri B. B. SAYANAK.—Sir, on a point of order. No Minister is here while the discussion is going on. Only the Deputy Ministers are here.

Sri MANIK RAO PATIL (Deputy Minister for Home).—Don't worry. There are four Deputy Ministers and they are also collectively responsible.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಮಾನ್ಯ ಡೆಪ್ಯೂಟಿ ಮಂತ್ರಿಯವರು 'ಡೋಂಟ್ ವರಿ' ಎಂದು ಹೇಳಿದರು. ನಾವು ಇಲ್ಲಿ ಬಂದಿರುವುದು ಸುಮ್ಮನೆ ಕೂತುಕೊಳ್ಳುವುದಕ್ಕೆ ಅಲ್ಲ; ಅಥವಾ ತಮಾಷೆಗೋಸ್ಕರ ಇಲ್ಲಿ ಕೂತಿಲ್ಲ. ಸಭೆಯ ಕಾರ್ಯಕಲಾಪಗಳು ಚೆನ್ನಾಗಿ ನಡೆಯಬೇಕೆಂದು. ಈ ಸಭೆಗೆ ಆಡಳಿತ ಪಕ್ಷದ ಮಂತ್ರಿಯವರು ಬಂದು ಇಲ್ಲಿರಬೇಕು, ಮತ್ತು ಇಲ್ಲಿ ಏನು ನಡೆಯುತ್ತಿದೆ ಮತ್ತು ಇಲ್ಲಿ ಏನೇನು ಅಂಶಗಳು ಸಭೆಯ ಮುಂದಿಡಲ್ಪಡುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಯವರು ಈ ವಿಷಯವನ್ನು ಸಭೆಯ ಮುಂದಿಡುವಾಗ ಹೇಳಿದಂತಹ ಅಂಶಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಇವರು ಈ ರೀತಿ 'ಡೋಂಟ್ ವರಿ' ಎಂದು

ಹೇಳುತ್ತಿರಲಿಲ್ಲ. ಅದಕ್ಕೆ ಬದಲಾಗಿ ಇವರು ಅದನ್ನು ತಮಾಷೆಯಾಗಿ ತೆಗೆದುಕೊಂಡಿದ್ದಾರೆಂದು ಕಾಣುತ್ತದೆ. ಇದಕ್ಕೆ ತಾವು ಒಂದು ಆದೇಶ ಕೊಡಬೇಕು ಮತ್ತು ಅವರು ಆ ರೀತಿ ಹೇಳುವುದು ಸರಿಯೇ ಎಂದು ಹೇಳಬೇಕು.

Mr. CHAIRMAN.—It is a very serious subject and I am informed that the Ministers are coming immediately. Now that Mr. Mohamed Ali is here.........

Sri M. S. KRISHNAN.—How can the Deputy Minister make that remark? He should not take it so lightly.

Sri K. H. PATIL.—May I make a request, Sir? When this House is considering this question seriously at least the Revenue Minister, though not the Hon'ble Chief Minister if it is not possible for him, or the Minister for Co-operation or the Minister for Food should be present. They are very necessary here. We are not concerned with other Ministers. The Transport Minister who is present here, at best can provide some buses. His presence will not help us. Therefore, I would like the Chair to give a direction to the Ministers, at least one of these three Ministers should be present. I have seen in the newspapers today the tour programme of the Minister for Co-operation who is going on tour of Dharwar District to have garlands. This shows that they have no interest in this very important matter. I am therefore appealing to the Hon'ble Chair to give a direction to the council of Ministers to be present, as far as possible.

Mr. CHAIRMAN.—I will communicate the opinion of this House to the Chief Minister. I believe, I can assure the Hon'ble Whip of the Opposition Party, that no Deputy Minister wants to take it very lightly, because this is too serious a matter and I will see that these views are communicated to the Chief Minister and that at least the Revenue Minister or the P. W. D. Minister or the Chief Minister himself is present here.

Sri B. L. NARAYANASWAMY.—Sir, I expressed myself in order to seek redress from the Government. But when the concerned Minister is not there, what is it that I get, is a matter for consideration. So Mr. Speaker, I respectfully submit that I may be permitted to continue my speech tomorrow when all the Ministers are present here.

Sri MOHAMED ALI.—May I submit, Sir, that we all work here under joint responsibility. The question of presence of other Ministers is not material. Whatever the member says I am going to take note of.

Mr. CHAIRMAN.—I can suggest to Sri Narayanaswamy, that his speech will be recorded and the concerned Ministers will look into it, and I would like him to continue his speech, so that let there not be any break in his thoughts.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಮಾನ್ಯ ಮಂತ್ರಿಯವರು ನಮಗೆ ಜಾಯಿಂಟ್ ರೆಸ್ಪಾನ್ಸಿಬಲಿಟಿ ಇದೆ, ಯಾರಾದರೂ ಇದ್ದರೆ ಸಾಕು ಎಂದು ಹೇಳಿದರು. ನಾವು ಈ ವಿಚಾರದಲ್ಲಿ ಕಾನೂನು ಪ್ರಕಾರ ಏನು ಇದೆ ಎಂದು ತಿಳಿದುಕೊಂಡಿದ್ದೇವೆ. ಇವತ್ತು ನಮಗೆ ಗೊತ್ತಿರುವ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಹಾಗೆ ಬಹಳ ಮುಖ್ಯವಾದ ವಿಷಯವನ್ನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ದೇಶದಲ್ಲಿ ಮಾನ್ಯ ಮುಖ್ಯ ಮಂತ್ರಿಯುವರು ಹೇಳಿರುವ ಹಾಗೆ 100 ತಾಲ್ಲೂಕುಗಳಲ್ಲಿ ಈ ಸಮಸ್ಯೆ ಉಂಟಾಗಿದೆ. ಇದನ್ನು ಹೇಗೆ ಬಗೆಹರಿಸಬೇಕು, ಪರಿಹಾರ ಹೇಗೆ ಒದಗಿಸಿಕೊಡಬೇಕು ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಅದು ಚರ್ಚೆಯಾಗುವಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲಿದ್ದು ಏನೇನು ವಿಷಯಗಳನ್ನು ಹೇಳುತ್ತಾರೆ, ಎಂಬುದನ್ನು ತಿಳಿಯುವುದು ಮುಖ್ಯ. ನಾಳೆ ರಿಪೋರ್ಟರ್ ಓದಿಕೊಂಡು ಬರಬಹುದು. ಆದರೆ ಇಲ್ಲಿ ಏನು ಹೇಳುತ್ತಾರೆ, ಯಾವ ರೀತಿಯ ಮನೋಭಾವ ಇಲ್ಲಿ ಇರುತ್ತದೆ ಎಂಬುವನ್ನು ತಿಳಿದುಕೊಳ್ಳುವುದಕ್ಕೆ ಅವರು ಖುದ್ದಾಗಿ ಹಾಜರಿರುವುದು ಅವಶ್ಯಕ. ಸುಮ್ಮನೆ ಕಾನೂನು ಪ್ರಕಾರ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ, ಯಾರಾದರೂ ಇದ್ದರೆ ಸಾಕು ಎಂದು ಹೇಳಿದರೆ, ಅದು ಸಭೆಯ ಗೌರವಕ್ಕೆ ತಕ್ಕಂತೆ ನಡೆದ ಹಾಗೆ ಆಗಿಲ್ಲ. ಸಂಬಂಧಪಟ್ಟ ಮಂತ್ರಿಯವರು ಯಾರು ಏನು ಹೇಳುತ್ತಾರೆಂಬುದನ್ನು ಮನಸ್ಸಿಟ್ಟು ಕೇಳಬೇಕು. ಅದನ್ನು ದಯವಿಟ್ಟು ಗಮನಿಸಬೇಕು.

Mr. CHAIRMAN.—I agree that it is too serious a matter. I would request the Ministers concerned, especially, the Revenue Minister, Public Works Minister and also the Industries Minister, because we will have to find out some way to help the poor people in all respects. The work has to be taken up now. The member may continue his speech now.

Sri M. S. KRISHNAN.—We thank very much for the sentiments expressed by you, in this behalf.

Sri B. L. NARAYANASWAMY.—Then Sir, I do obey the Chair.

6-00 P.M.

ಹಿಂದೆ ಕಂದಾಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಚಯ್ಯನವರು 100 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದರು ಆದರೆ ರೂಪರೇಷೆಗಳು ಏನಾದುವೋ ಆ ವಿಷಯವೆಲ್ಲ ಗೊತ್ತಾಗಲಿಲ್ಲ. ಈಗ 10 ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಕಳುಹಿಸಿದ್ದೇವೆಂದು ಮುಖ್ಯ ಮಂತ್ರಿಗಳು ಪ್ರಸ್ತಾಪಮಾಡಿದ್ದಾರೆ. ಆ 10 ಕೋಟಿ ರೂಪಾಯಿಗಳ ಯೋಜನೆಯನ್ನು ಸುಮಾರು ಎಂಟೂವರೆ ಕೋಟಿಗೆ ಇಳಿಸಿ ಇದರಲ್ಲಿ ಅರ್ಧ ಕೊಡುತ್ತಾರೆಯೋ ಏನೋ ಎಂಬ ಅರೆ ಮನಸ್ಸಿನ ಮನೋವೃತ್ತಿ ಇವರಿಗೆ ಬಂದಿದೆಯೆಂದು ನನಗೆ ಅರ್ಥವಾಗುತ್ತಿದೆ. ಇದು ಸರಿಯೋ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆಮಾಡಬೇಕಾಗಿದೆ. ಕಳೆದ ಅಧಿವೇಶನದಲ್ಲಿ ತಕ್ಷಣ ಒಂದು ಸಮಿತಿಯನ್ನು ರಚಿಸಿ, ಇರತಕ್ಕ ವಿದ್ಯಮಾನಗಳನ್ನು ಜಾಗ್ರತೆಯಾಗಿ ಪರಿಶೀಲಿಸಿ ಈಗಿನ ಕಷ್ಟಗಳನ್ನು ಪರಿಹಾರಮಾಡಲಾಗುವುದು ಎಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ದೇಶದಲ್ಲಿ ಕ್ಷಾಮ ಅಥವಾ ಅಭಾವ ಪರಿಸ್ಥಿತಿ ಬರುತ್ತದೆಂದರೆ, ಮೊಟ್ಟಮೊದಲನೆಯದಾಗಿ ಗಂಜಿ ಕೇಂದ್ರಗಳನ್ನು ಜಾಗ್ರತೆಯಾಗಿ ತೆರೆದರೆ ಇದು ಒಂದು ರೀತಿ ಶಮನಕ್ಕೆ ಬರುತ್ತದೆಂದು ಹೇಳುವುದು ಏನಿದೆ ಇದು ಹಿಂದೆ ಇಂಗ್ಲೀಷರ ಕಾಲದ ಪದ್ಧತಿಯಾಗಿತ್ತು. ಸರ್ಕಾರದವರು ಕಳೆದ 20 ವರ್ಷಗಳಿಂದ ಏನು ಮಾಡಿದರು? ಇದೇನು ಒಂದು ವರ್ಷದಲ್ಲಿ ಕೆಲಸ ಮಾಡಿ ಪೂರೈಸುವುದು ಅಲ್ಲ. ಎರಡು ವರ್ಷಗಳಲ್ಲಿ ಆಗುವುದೂ ಅಲ್ಲ. 10 ವರ್ಷಗಳ ಕೆಳಗೆ ಒಂದು ದೀರ್ಘ ಯೋಜನೆ ಈ ವಿಚಾರದಲ್ಲಿ ಹಾಕಿದರು. ಅದರಂತೆ ಮುಂದುವರಿದಿದ್ದರೆ ಇಂತಹ ಪರಿಸ್ಥಿತಿಗೆ ನಾವು ಬರುತ್ತಿರಲಿಲ್ಲ. ಈಗಲೂ ಶಾಶ್ವತವಾದ ಯೋಜನೆಯೊಂದನ್ನು ಹಾಕಿ, ಅದರಂತೆ ಮುಂದುವರಿದರೆ ನಮ್ಮ ಮಕ್ಕಳ ಹಾಗೂ ನಮ್ಮ ಮೊಮ್ಮಕ್ಕಳ ಕಾಲಕ್ಕೆ ಇಂತಹ ಕ್ಷಾಮದ ಭೀತಿಯೇ ಇಲ್ಲದೆ ಇರುತ್ತದೆ. ನಾವೂ ಆಗ ಆತ್ಮತೃಪ್ತಿಯಿಂದಲಾದರೂ ಪ್ರಾಣ ಬಿಡಬಹುದು. ಇಲ್ಲದೇ ಇದ್ದರೆ ಮಂತ್ರಿಗಳು ನಮ್ಮವರು ಎಂಬುದಾಗಿ ಏಕೆ ನಾವು ಸಂತೋಷಪಡಬೇಕು? ಮಾನ್ಯ ಮಂತ್ರಿಗಳು ಈಗ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಬೇಕೆಂದು ಒಂದು ಯೋಚನೆ ಮಾಡಿದ್ದಾರೆ. ಅದನ್ನು ತತ್ವಶಃ ಕಾರ್ಯರೂಪಕ್ಕೆ ತರಬೇಕು. ಇಲ್ಲಿರುವ ಕಷ್ಟಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಹಾಗೂ ಇರತಕ್ಕ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಇದು ಅಭಾವ ಪರಿಸ್ಥಿತಿಯಲ್ಲ. ಪರಿಪೂರ್ಣವಾಗಿ ಕ್ಷಾಮ

ವೆಂದು ತಿಳಿಯಬೇಕು. ಏಕೆಂದರೆ ಕುಡಿಯುವುದಕ್ಕೆ ನೀರೇ ಇಲ್ಲ. ಮನುಷ್ಯರಿಗೆ ಸಾಕಷ್ಟು ಆಹಾರ ಇಲ್ಲ. ದನಕರುಗಳಿಗೆ ಸಾಕಷ್ಟು ಮೇವು ಇಲ್ಲ. ಹಳ್ಳಿಗಾಡುಗಳಲ್ಲಿ ಕುರಿ, ಮೇಕೆಗಳು ಮೇಯುವುದಕ್ಕೆ ಏನೂ ಸಿಗುವುದಿಲ್ಲ. ಜನ ವಲಸೆ ಹೋಗುವಾಗ ಎಲ್ಲಿ ಕುರಿ, ಮೇಕೆಗಳು ಸತ್ತುಹೋಗುತ್ತವೋ ಎಂದು ಅವನ್ನು ಅರ್ಧ ಬೆಲೆಗೆ ಮಾರಿ ಜೀವಿಸುವಂಥ ದಾರುಣ ಪರಿಸ್ಥಿತಿಯನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಸದಸ್ಯರು ಕ್ಷಾಮ ಪರಿಸ್ಥಿತಿಯನ್ನು ಬಹಳ ವರ್ಷಗಳಿಂದ ನೋಡಿದ್ದಾರೆ. ಆ ಕಾರಣದಿಂದ ಅವರು ಸಲಹೆಗಳನ್ನು ಕೊಟ್ಟ ಪ್ರಕಾರ ಮಾನ್ಯ ಮಂತ್ರಿಗಳು ಆ ಕೆಲಸಗಳನ್ನು ಮಾಡಿದರೆ ತ್ವರಿತವಾಗಿ ಜನಗಳಿಗೆ ಅನುಕೂಲವಾಗುತ್ತದೆ. ಆದರೆ ನಮ್ಮ ಜಿಲ್ಲೆಯಲ್ಲಿಯೂ ಇದು ಮೊದಲನೆಯ ಸಲವಲ್ಲ. ಅನೇಕ ಸಾರಿ ಬಂದಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಅದಕ್ಕಾಗಿಯೇ ಜನಗಳಿಗೆ ಕಷ್ಟ ಬರುತ್ತಿದೆ. ಈ ಕಷ್ಟವೇನಾದರೂ ಜನಗಳಿಗೆ ಹೆಚ್ಚಿಗೆ ತಟ್ಟಿದರೆ ದೇವರು ಕನಿಕರಪಡುತ್ತಾನೆಂದು ನಾನು ಹೇಳುತ್ತೇನೆ. ಪರಿಸ್ಥಿತಿ ಹೀಗಿರುವಾಗ ಅಭಾವವೆಂದು ಹೇಳದೆ, ಇದನ್ನು ಕ್ಷಾಮ ಪರಿಸ್ಥಿತಿ ಎಂಬುದಾಗಿ ಪರಿಗಣಿಸಬೇಕೆಂಬುದಾಗಿ ನಾನು ಹೇಳುತ್ತೇನೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಫಲಕಾರಿಯಾಗಿವೆ, ಇದರಿಂದೇನೇನು ಆಗುತ್ತಿವೆಯೆಂಬುದು ಸರ್ಕಾರದವರ ಗಮನಕ್ಕೆ ಈಗಾಗಲೇ ಬಂದಿವೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಈ ವಿಚಾರದಲ್ಲಿ ಸತ್ಯವಾಗಿ ನಡೆಯುತ್ತಿರತಕ್ಕ ಸರ್ಕಾರಿ ಅಧಿಕಾರಿಗಳಾಗಲೀ, ಖಾಸಗಿ ದೊಡ್ಡ ಮನುಷ್ಯರೆಂದೆನಿಕೊಂಡಿರುವವರು ಎಷ್ಟು ಜನರಿದ್ದಾರೆಂದು ನೋಡುವುದಾದರೆ ಕೇವಲ ಸೇಕಡ ಐದರಷ್ಟೂ ಸಹ ಇಲ್ಲ. ಅಷ್ಟು ಈಗ ಮೋಸವಾಗಿದೆ. ಯಾವ ಬಡವ ಪರಿತಪಿಸುತ್ತಿದ್ದಾನೋ ಅಂತಹವನಿಗೆ ನಿಜವಾಗಿ ಪರಿಹಾರ ದೊರಕುತ್ತಾ ಇಲ್ಲ. ಮಧ್ಯೆ ಇರತಕ್ಕ ಸರ್ಕಾರಿ ಸಿಬ್ಬಂದಿವರ್ಗದವರ ವಿಚಾರವೇ ಬೇರೆ. ಈಗ ಸಾರ್ವಜನಿಕರ ಮುಂದೆ ಇರತಕ್ಕ ಪ್ರಶ್ನೆ ಬಡವರಿಗೆ ಇರತಕ್ಕ ಕಷ್ಟವನ್ನು ತಪ್ಪಿಸುವುದು. ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ ಕೂಲಿ ಎರಡು ರೂಪಾಯಿಗಳನ್ನು ಕೊಟ್ಟರೆ ಅದರಲ್ಲಿ ಮಧ್ಯವರ್ತಿಗಳು ಅವನಿಗೆ ಒಂದು ರೂಪಾಯಿ ಕೊಟ್ಟು ಮಿಕ್ಕ ಒಂದು ರೂಪಾಯಿಯನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಅಂಥಾದ್ದನ್ನು ಯಾವ ರೀತಿ ತಪ್ಪಿಸಬೇಕೆಂಬುದನ್ನು ಸರ್ಕಾರದವರು ಯೋಚನೆಮಾಡಬೇಕು. ಮಿನಿಮಂ ವೇಜಸ್ ಆಕ್ಟ್ 1956ರಲ್ಲಿ ಜಾರಿಯಲ್ಲಿ ಬಂದಿದೆ. 12 ವರ್ಷಗಳಿಂದಲೂ ಧಾರಣೆವಾಸಿಗಳು ಇಷ್ಟು ಜಾಸ್ತಿಯಾಗುತ್ತಿದ್ದರೂ ಅವನಿಗೆ ಸರಿಯಾದ ಕೂಲಿ ಕೊಡುತ್ತಿಲ್ಲ. ಪಿ.ಡಬ್ಲ್ಯು.ಡಿ. ಇಲಾಖೆಯ ಒಬ್ಬ ಕೂಲಿಗೆ ಏನು ಕೂಲಿ ದರವನ್ನು ಕೊಡುತ್ತೀರೋ ಅದೇ ದರವನ್ನು ಇತರ ಇಲಾಖೆಗಳಲ್ಲಿ ಕಾಮಗಾರಿ ಕೆಲಸಗಳನ್ನು ಮಾಡತಕ್ಕ ಕೂಲಿಗಳಿಗೂ ಕೊಡಬೇಕು. ಸಾಧ್ಯವಾದರೆ ಇನ್ನೂ ಜಾಸ್ತಿ ಕೊಡಿ. ಏಕೆಂದರೆ ಸರ್ಕಾರದಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಕಷ್ಟಕಾಲದಲ್ಲಿ ಒಬ್ಬ ಬಡವ ಕೇಳಿದರೆ ಅವನಿಗೆ ಉದಾರವಾಗಿ ಕೂಲಿ ಕೊಡಿ. ಸರ್ಕಾರದ ವತಿಯಿಂದಾಗತಕ್ಕ ಕೆಲಸಗಳನ್ನು ಸರ್ಕಾರದ ಏಜೆಂಟ್‌ರಿಂದ ಮಾಡಿಸುವುದೇ ಅಥವಾ ಬರೀ ಪೀಸ್ ವರ್ಕ್‌ನಲ್ಲಿ ಮಾಡುವುದೇ ಅದನ್ನು ಕೂಲಂಕಷವಾಗಿ ಯೋಚನೆಮಾಡಿ ಅದಕ್ಕೋಸ್ಕರ ಒಂದು ಸಮಿತಿಯನ್ನು ರಚಿಸಿ. ದಯವಿಟ್ಟು ಬಡವನಿಗೆ ಅವನ ಕಷ್ಟದ ಫಲ ದೊರಕುವ ಹಾಗೆ ಮಾಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ.

ಇನ್ನು ಸಾಯಿಲ್ ಕನ್ಸರ್‌ವೇಷನ್ ವಿಚಾರದಲ್ಲಿ ಕೋಲಾರ ಜಿಲ್ಲೆ ನತದೃಷ್ಟವಾದುದಾಗಿದೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಇದರ ಬಗ್ಗೆ ಏನೂ ಕೆಲಸವಾಗಿಲ್ಲ. ಅದನ್ನು ಮಾಡಿಸಬೇಕೆಂದು ಕಮಿಷನರನ್ನು ಕೇಳಿದೆ. ಅದಕ್ಕೆ ಅವರು ಹಣವಿಲ್ಲವೆಂದು ಹೇಳಿದ್ದಾರೆ. ಇನ್ನೂ ಕೆಲವು ನೋಟಿಫಿಕೇಷನ್ಸ್ ಜಿಲ್ಲಾಧಿಕಾರಿಗಳಿಂದ ಹೊರಡಬೇಕು ಎಂಬುದಾಗಿಯೂ ಹೇಳಿದ್ದಾರೆ. ಇದರಲ್ಲಿ ನಾನು ಹೇಳುವುದಿಷ್ಟು. ಕಾಮಗಾರಿಗಳನ್ನು ಕೈಗೊಳ್ಳುವಾಗ ಕೂಲಿಗಳಿಗೆ ಕೆಲಸ ಒದಗಿಸುವ ದೃಷ್ಟಿ ಇಟ್ಟುಕೊಂಡು ಕೆಲಸ ಮಾಡಬೇಕು. ಆ ರೀತಿ ಮಾಡದೆ ಇರುವುದರಿಂದಲೇ ಇವತ್ತು ಕೋಲಾರ ಜಿಲ್ಲೆಯಲ್ಲಿ ಶ್ರೀನಿವಾಸಪುರದಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಕೆಲಸ ಯಾವುದೂ ಆಗಿಲ್ಲ. ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಅವರು ಇಂತಹ ತುರ್ತು ಕಾರ್ಯಗಳಿಗಾಗಿ ಹಣವನ್ನು ಮೀಸಲಾಗಿಡಬೇಕು. 1 ಲಕ್ಷ 33 ಸಾವಿರ 600 ಮಂದಿಯ ಪೈಕಿ 72 ಸಾವಿರದ 325 ಮಂದಿಗೆ ಹಣ ಸಹಾಯ ಕೊಟ್ಟಿದ್ದೇವೆಂದು ಹೇಳುವುದರಿಂದ ಉಳಿದ 61 ಸಾವಿರದ 275 ಮಂದಿಗೆ ಈ ಯೋಜನೆಯಲ್ಲಿ ಸಹಾಯ ಮಾಡಲು ಹಣವನ್ನು ಮೀಸಲಾಗಿಡಬೇಕು. ಇದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಬೇಕು.

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಇನ್ನು ಕುಡಿಯುವ ನೀರಿನ ಅಭಾವ ಈಗ ಬಹಳವಾಗಿದೆ. ಕೆಲವು ಬಾವಿಗಳಲ್ಲಿ ಎಷ್ಟು ಆಳ ತೋಡಿದರೂ ನೀರು ಇಲ್ಲ. ನಮ್ಮಲ್ಲಿ ದುಡ್ಡು ಇಲ್ಲ. ಕೋಲಾರ ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರ, ಗೌರೀಬಿದನೂರು, ಶಿಡ್ಲಘಟ್ಟ—ಈ ಪ್ರತಿಯೊಂದು ತಾಲ್ಲೂಕಿಗೂ 400 ಬಾವಿಗಳನ್ನು ಮಂಜೂರು ಮಾಡಿ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ಚಿಂತಾಮಣಿಯಲ್ಲಿ 650 ನೀರಾವರಿ ಬಾವಿಗಳಿದ್ದರೂ ಅಷ್ಟು ಬಾವಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಸಂಬಂಧ ಪಟ್ಟ ಇಲಾಖೆಯವರು ಒಂದು ಟಾರ್ಜೆಟ್ಟನ್ನು ಇಟ್ಟುಕೊಂಡು ಕೇವಲ 40 ಬಾವಿಗಳಿಗೆ ಮಾತ್ರ ವಿದ್ಯುಚ್ಛಕ್ತಿ ಕೊಡಲು ನಿಗದಿಮಾಡಿದ್ದಾರೆ. ಉಪಸಚಿವರಾದ ಮಾನ್ಯ ಶ್ರೀ ಪರಮೇಶ್ವರಪ್ಪನವರು ನಮ್ಮ ತಾಲ್ಲೂಕಿಗೆ ದಯಮಾಡಿಸಿದ್ದರು. ಆಗ ನಮ್ಮ ತಾಲ್ಲೂಕಿಗೆ ಕೇವಲ 40 ಬಾವಿಗಳಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ನಿಗದಿಮಾಡಿದ್ದಾರೆ. ಪಕ್ಕದ ತಾಲ್ಲೂಕಿನಲ್ಲಿ 650 ಬಾವಿಗಳಿಗೆ ಅಗ್ರಿಕಲ್ಚರಲ್ ಫೈನಾನ್ಸಿಂಗ್ ಕಾರ್ಪೊರೇಷನ್ನಿನವರು ವಿದ್ಯುಚ್ಛಕ್ತಿ ಸರಬರಾಜಿಗೋಸ್ಕರ ಹಣ ಕೊಡುತ್ತಾರೆ. ಅದೇ ರೀತಿ ನಮಗೂ ಹಣ ಕೊಡಿಸಿ ಎಂಬುದಾಗಿ ಮಾನ್ಯ ಉಪಸಚಿವರನ್ನು ಕೇಳಿದೆವು. ಪಕ್ಕದ ತಾಲ್ಲೂಕು ಎಷ್ಟೋ ವೃದ್ಧಿಯಾಗುತ್ತಿದೆ. ನೀವು ಮಾಡಿದ ಪಾಪ ಏನೆಂಬುದಾಗಿ ಕೇಳಿದರು. ನಮ್ಮಲ್ಲಿ ಕ್ಷಾಮ ಇಲ್ಲವೆಂದು ಹೇಳಿದರೆ ಹೇಗೆ ? ಮುಂದೆ ಇದಕ್ಕಿಂತಲೂ ಕ್ರೂರವಾದ ಕ್ಷಾಮ ಬಂದೀತು ಎಂದು ನಾನು ಹೇಳುತ್ತೇನೆ. ಅಂತಹ ಕ್ಷಾಮ ನಮ್ಮ ಶ್ರೀನಿವಾಸಪುರದಲ್ಲಿ ಈಗ ಬಂದಿದೆಯೆಂದು ಹೇಳಬಹುದು. ಇಂಥಾ ಪರಿಸ್ಥಿತಿ ಇದೆ. ಕುಡಿಯುವ ನೀರಿಗೆ ಬಹಳ ಕಷ್ಟವಾಗಿದೆ. ದನಕರುಗಳಿಗೆ ಮೇವು ಇಲ್ಲ. ಇವುಗಳನ್ನು ಸರ್ಕಾರ ಒದಗಿಸಿಲ್ಲ ಸರ್ಕಾರದವರು ಮಾಡಿರತಕ್ಕ ಸಹಕಾರ ಮತ್ತು ಸಹಾಯ ಇಷ್ಟೆ.

ಇನ್ನು ಆಹಾರದ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಆಹಾರ ಧಾನ್ಯವನ್ನು ಒಂದು ಕುಟುಂಬಕ್ಕೆ ಒಂದು ತಿಂಗಳಿಗೆ 1½ ಕೆ.ಜಿ.ಯಂತೆ ಸರಾಸರಿ ಸರ್ಕಾರದವರು ಒದಗಿಸುತ್ತಿದ್ದಾರೆ. ಇದು ತೆನಾಲಿ ರಾಮಕೃಷ್ಣ ಕುದುರೆ ಸಾಕಿದಂತಾಗುತ್ತದೆ. ಇದನ್ನು ಸರ್ಕಾರದವರು ಗಮನಿಸಬೇಕು. ಜನಗಳು ಬಹಳ ಕಷ್ಟದಲ್ಲಿದ್ದಾರೆ. ಇದನ್ನು ಸರ್ಕಾರದವರು ಉದಾಸೀನದಿಂದ ನೋಡಬಾರದು. ಜನಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರ ದವರು ಪ್ರಯತ್ನ ಮಾಡಬೇಕು. ಇಲ್ಲದೆ ಇದ್ದರೆ ಬಹಳ ಕಷ್ಟವಾಗುತ್ತದೆ. ಅಮೇರಿಕಾ ದೇಶ ದವರು ಭಾರತ ಸರ್ಕಾರಕ್ಕೆ ಕೊಡುಗೆಯಾಗಿ 12 ಪವರ್ ಫುಲ್ ಜೆಕ್ಸ್‌ಗಳನ್ನು ಕೊಟ್ಟಿದ್ದಾರೆಂದು ಗೊತ್ತಾಗಿದೆ. ಈ ಜೆಕ್ಸ್‌ಗಳಿಂದ ಒಂದು ದಿವಸಕ್ಕೆ ಸಾವಿರಾರು ಅಡಿ ಆಳದ ಬಾವಿಗಳನ್ನು ತೆಗೆಯುವುದಕ್ಕೆ ಸಾಧ್ಯವಿದೆ ಎಂದು ನಾನು ಕೇಳಿದ್ದೇನೆ. ನಮ್ಮ ನೆರೆಪ್ರಾಂತ್ಯದವರಾದ ಆಂಧ್ರ ಪ್ರಾಂತ್ಯದವರು ನಾಲ್ಕು ಜೆಕ್ಸ್‌ಗಳನ್ನು ತಂದು ಬಾವಿಗಳ ಕೆಲಸವನ್ನು ಮಾಡಿಸುತ್ತಿದ್ದಾರೆಂದು ಗೊತ್ತಾಗಿದೆ. ಮೈಸೂರಿನವರೂ ಅವುಗಳನ್ನು ಕೇಳಿದರೆ ಯಾರೂ ಕೊಡುವುದಿಲ್ಲ ಎಂದು ಹೇಳು ವುದಿಲ್ಲ. ನಮ್ಮ ಸರ್ಕಾರದವರಿಗೆ ಈ ವಿಷಯ ಗೊತ್ತಿದ್ದರೂ ಇವುಗಳನ್ನು ತರಿಸುವುದಕ್ಕೆ ಕೇಂದ್ರ ಸರ್ಕಾರದವರನ್ನಾಗಲೀ ಅಥವಾ ಬೇರೆ ಪ್ರಾಂತ್ಯದವರನ್ನಾಗಲಿ ಕೇಳುವುದಕ್ಕೆ ಮನಸ್ಸು ಇಲ್ಲದೆ ಇರುವುದರಿಂದ ಅವುಗಳನ್ನು ನಮ್ಮ ರಾಜ್ಯಕ್ಕೆ ತರಿಸುವುದಕ್ಕೆ ಸಾಧ್ಯವಾಗಿಲ್ಲ. ಆದಕಾರಣ ನಮ್ಮ ಸರ್ಕಾರದವರು ಶಕ್ತಿಯುತವಾದ, ಜಾಗ್ರತೆಯಾಗಿ ಬಾವಿಗಳನ್ನು ತೆಗೆಯತಕ್ಕ ಯಂತ್ರಗಳನ್ನು ಆದಷ್ಟು ಜಾಗ್ರತೆ ತರಿಸಿ ಬಾವಿಗಳನ್ನು ತೋಡಿಸಿಕೊಡಬೇಕು. ಈಗ ಬಂದಿರತಕ್ಕ ಕ್ಷಾಮವನ್ನು ಹೋಗಲಾಡಿಸುವುದಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಹೇಳಬೇಕಾದ ವಿಷಯ ಬಹಳ ಇದೆ. ಆದರೆ ಈಗಾಗಲೇ ಬೇಗ ಮುಗಿಸಬೇಕೆಂದು ಅಧ್ಯಕ್ಷರು ಸೂಚನೆಯನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಜನಗಳಿಗೆ ಕೂಲಿಸಿಕ್ಕುವ ಹಾಗೆ ಮಾಡಲು ಕಾಮಗಾರಿ ಕೆಲಸಗಳನ್ನು ಕೈಗೊಳ್ಳಬೇಕು. ಈಗ ಜನಗಳಿಗೆ ಇರುವ ಕಷ್ಟವನ್ನು ಹೋಗಲಾಡಿಸುವುದಕ್ಕೆ ತಾತ್ಕಾಲಿಕವಾಗಿ ಹೆಚ್ಚು ಹೆಚ್ಚು ನೆರವನ್ನು ಜನತೆಗೆ ಸರ್ಕಾರ ನೀಡಬೇಕು. ಸರ್ಕಾರ ಕೊಡತಕ್ಕ ಪ್ರತಿಯೊಂದು ಕಾಸೂ ಬಡವರಿಗೆ ಸಿಕ್ಕುವಂತಾಗಬೇಕು. ಇದರಲ್ಲಿ ಮಧ್ಯವರ್ತಿ ದಳ್ಳಾಳಿಗಳ ಕೈವಾಡ ಇದೆ. ರಾಜಕೀಯ ಇದೆ. ಆದಷ್ಟೂ ಬಡಜನಗಳಿಗೆ ಕಷ್ಟವನ್ನು ಎದುರಿಸಲು ಸರ್ಕಾರದವರು ಸಹಾಯ ಮಾಡಬೇಕು ಎಂದು ಸರ್ಕಾರದವರನ್ನು ಪ್ರಾರ್ಥಿಸಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸತ್ಯಗೌಡ ಸಾತಗೌಡ ಪಾಟೀಲ್ (ಹುಕ್ಕೇರಿ).—ಮಾನ್ಯ ಸಭಾಪತಿಗಳೇ, ರಾಜ್ಯದ ಎಲ್ಲಾ ಪ್ರದೇಶಗಳಲ್ಲಿಯೂ ಉಂಟಾಗಿರತಕ್ಕ ಅಭಾವ ಪರಿಸ್ಥಿತಿಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಹಾಗೂ ಕೈಗೊಳ್ಳಬೇಕಾದ ಪರಿಹಾರ ಕ್ರಮಗಳ ಬಗ್ಗೆ ಪರ್ಯಾಲೋಚಿಸ

ಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ನಮ್ಮ ದೇಶದಲ್ಲಿ 2-3 ಜಿಲ್ಲೆಗಳನ್ನು ಬಿಟ್ಟರೆ ಉಳಿದ ಅನೇಕ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆ. ಬೆಳಗಾಂಜಿಲ್ಲೆಯ ಜನರ ಪರಿಸ್ಥಿತಿಯನ್ನು ಹೇಳಬೇಕಾಗಿದ್ದರೆ ಕೆಲವು ಕಡೆ ಈಗ್ಗೆ 8 ದಿವಸಗಳ ಹಿಂದೆ ಬೆಳೆ ಸಾಧಾರಣ ವಾಗಿತ್ತು, ಈಗ ಮಳೆ ಇಲ್ಲದೇ ಇರುವುದರಿಂದ ಬೆಳೆ ಒಣಗಿ ಹೋಗಿ ಇಡೀ ಬೆಳಗಾವ್ ಜಿಲ್ಲೆಯಲ್ಲಿ ಕ್ಷಾಮ ಬಂದಿದೆ. ಅಭಾವ ಪರಿಸ್ಥಿತಿ ಉಂಟಾಗಿದೆ. ಬೆಳಗಾಂ ಜಿಲ್ಲೆಯ ಪೂರ್ವ ಭಾಗದಲ್ಲಿ ಮಳೆ ಆಗದೆ ಬಿತ್ತನೆ ಕೂಡ ಆಗಿಲ್ಲ. ಯಾವ ಭಾಗದಲ್ಲಿ ಬಿತ್ತನೆಯಾಗಿತ್ತು ಆ ಭಾಗದಲ್ಲಿ ಇದುವರೆಗೂ ಸ್ವಲ್ಪ ಬೆಳೆ ಬಂದಿತ್ತು. ಈಗ ಮಳೆ ಬಾರದೆ ಇರುವುದರಿಂದ ಬೆಳೆಗಳೆಲ್ಲಾ ಒಣಗಿ ಹೋಗಿವೆ. ಬತ್ತಿಹೋಗಿವೆ. ಬೆಳಗಾವ್‌ಜಿಲ್ಲೆಯಲ್ಲಿ ಹೊಳೆಗಳಿಗೆ ಬಂದಾರ ಕಟ್ಟಲಿಕ್ಕೆ ಅನುಕೂಲ ಪರಿಸ್ಥಿತಿ ಇದೆ. ಈ ಜಿಲ್ಲೆಯಲ್ಲಿ ನೂರಾರು ಹೊಳೆಗಳಿವೆ. ಈ ಹೊಳೆಗಳಿಗೆ ಬಂದಾರ ಹಾಕಿ ಲಿಫ್ಟ್ ಇರಿಗೇಷನ್ ಮಾಡಿದರೆ ತಾತ್ಕಾಲಿಕವಾದ ನೀರಾವರಿ ಯೋಜನೆ ಆಗಬಹುದು. ಮತ್ತೆ ಕೆಲವು ಕಡೆ ಕೆರೆ ಕಟ್ಟೆಗಳನ್ನು ಕಟ್ಟುವ ಏರ್ಪಾಡು ಮಾಡಿದರೆ ಅದೂ ಸಹ ಉಪಯೋಗವಾಗ ಬಹುದು. ಆದರೆ ಅಕ್ವಿಜಿಷನ್ ಪ್ರಕರಣಗಳ ಸಲುವಾಗಿ ಅವು ಹಾಗೆಯೇ ಉಳಿದಿವೆ. ಲ್ಯಾಂಡ್ ಅಕ್ವಿಜಿಷನ್ ಮಾಡುವುದಕ್ಕೆ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಸ್ಪೆಷಲ್ ಆಫೀಸರನ್ನು ನೇಮಿಸ ಬೇಕು. ಬಂದಾರ ಕಟ್ಟುವುದಕ್ಕೆ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಪ್ರತಿ ಯೊಂದು ಹಳ್ಳಿಗೂ ಎಲೆಕ್ಟ್ರಿಕ್‌ಲೈನ್ ಹಾಕಿ ವಿದ್ಯುಚ್ಛಕ್ತಿಯನ್ನು ಕೊಡಬೇಕು. ಎಲ್ಲೆಲ್ಲಿ ನೀರನ್ನು ಎತ್ತಿ ವ್ಯವಸಾಯಮಾಡುವುದಕ್ಕೆ ಅನುಕೂಲ ಇದೆಯೋ ಅಂಥಾ ಕಡೆಗಳಿಗೆಲ್ಲಾ ಪಂಪುಸೆಟ್ಟುಗಳನ್ನು ಒದಗಿಸಿಕೊಟ್ಟು ನೀರಾವರಿ ಸೌಲಭ್ಯವನ್ನು ರೈತರಿಗೆ ಒದಗಿಸಿಕೊಡಬೇಕು. ಕಮ್ಯುನಿಟಿ ಬಾವಿ ಗಳನ್ನು ತೋಡಿಸುವುದಕ್ಕೆ ಸರ್ಕಾರದವರು ಕೈಗೊಂಡ ಯೋಜನೆ ಹಾಗೆಯೇ ಉಳಿದಿದೆ. ಈಗ ಯಾರಾದರೂ ಖಾಸಗೀ ಜನರ ಜಮೀನಿನಲ್ಲಿ ಕಮ್ಯುನಿಟಿ ಬಾವಿಗಳನ್ನು ತೋಡಿಸಿದರೆ ಅವರು ಬೇರೆ ಯವರ ಜಮೀನಿಗೆ ನೀರು ಕೊಡುವುದಕ್ಕೆ ಒಪ್ಪುವುದಿಲ್ಲ. ಆದ್ದರಿಂದ ಗೋಮಾಳಗಳಲ್ಲಿ ಕಮ್ಯುನಿಟಿ ಬಾವಿಗಳನ್ನು ತೋಡಿಸಿ ಸುತ್ತಮುತ್ತಲಿನ ರೈತರಿಗೆ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಈಗ ಅನೇಕ ಕೆರೆಗಳಲ್ಲಿ ಹೂಳು ತುಂಬಿಹೋಗಿ ನೀರು ಸಾಕಷ್ಟು ನಿಲ್ಲುವುದಿಲ್ಲ ಅಂಥಾ ಕೆರೆಗಳ ಹೂಳನ್ನು (ಸಿಲ್ಟನ್ನು) ತೆಗೆದು ರಿಪೇರಿ ಮಾಡಬೇಕು. ಆ ಕೆಲಸಗಳನ್ನು ಮಾಡಿಸುವುದರಿಂದ ಬರಗಾಲ ಕಾಮಗಾರಿಗಳನ್ನು ಮಾಡಿಸಿದಂತಾಗುತ್ತದೆ ಆದ್ದರಿಂದ ಜನಗಳಿಗೆ ಕೆಲಸಕೊಟ್ಟಂತಾಗುತ್ತದೆ.

ಇನ್ನು ನಮ್ಮ ಸರ್ಕಾರದವರು ಈಗಾಗಲೇ ಸಾಕಷ್ಟು ಆಹಾರ ಸೌಲಭ್ಯವನ್ನು ಒದಗಿಸಿ ಕೊಟ್ಟಿದ್ದಾರೆ. 5 ವರ್ಷದ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ಉಚಿತ ಆಹಾರವನ್ನು ಒದಗಿಸುವ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಇದು ಬರೀ ಹಳೆಯ ಮೈಸೂರು ಮತ್ತು ಕೆಲವು ಪ್ರದೇಶಲ್ಲಿ ಮಾತ್ರ ಇದೆ. ಇದನ್ನು ಬೇರೆ ಜಿಲ್ಲೆಗಳಿಗೂ ಕೂಡ ವಿಸ್ತರಿಸಬೇಕು. ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆಯೋ ಅಂಥಾ ಕಡೆಗೆ ಪ್ರತಿಯೊಂದು ಜಿಲ್ಲೆಗೂ ಆಹಾರವನ್ನು ಒದಗಿಸುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು.

ಇನ್ನು ಕೊನೆಯದಾಗಿ ಒಂದು ಸೂಚನೆ ಇದೆ. ಅಮೇರಿಕಾ ದೇಶದಲ್ಲಿ ಕೃತಕ ಮಳೆಯನ್ನು ಸುರಿಸತಕ್ಕಂಥ ಕೆಲವು ಕಂಪೆನಿಗಳು ಇವೆಯೆಂದು ನಾನು ಕೇಳಿದ್ದೇನೆ. ನಮ್ಮ ಸರ್ಕಾರದವರು ಕೇಂದ್ರದವತಿಯಿಂದ, ತಜ್ಞರ ನೆರವನ್ನು ಪಡೆದು, ಅಮೇರಿಕಾದೇಶದ ಆ ಕಂಪೆನಿಗಳವರ ಸಹಾಯ ವನ್ನು ಪಡೆದು ಕೃತಕಮಳೆಯನ್ನು ಸುರಿಸುವುದಕ್ಕೆ ನಮ್ಮ ಸರ್ಕಾರದವರು ಪ್ರಯತ್ನ ಮಾಡಬೇಕು. ನಾಲ್ಕೈದು ವರ್ಷಗಳ ಹಿಂದೆ ಮುಂಬೈ ಮತ್ತು ಪೂನಾ ಮಧ್ಯದಲ್ಲಿರತಕ್ಕ ಬೆಲ್ಟ್ ಏರಿಯಾದಲ್ಲಿ ಮುಡಿಸಿಕೆರೆಯಲ್ಲಿ ನೀರು ಹೋದಾಗ ಮುಂಬೈ ರಾಜ್ಯದವರು ಅಮೇರಿಕಾದವರ ನೆರವನ್ನು ಪಡೆದು ಅಲ್ಲಿ ಆರ್ಟಿಫಿಷಿಯಲ್ ರೈನ್ ಫಾಲ್ ಮಾಡಿದ್ದಾರೆ. ಅಂಥಾ ಒಂದು ಪ್ರಯತ್ನವನ್ನು ಸರ್ಕಾರದವರು ಮಾಡಬೇಕು.

ರಾಜ್ಯದಲ್ಲಿ ತುರ್ತುಪರಿಸ್ಥಿತಿಯೆಂದು ಸಾರಬೇಕು. ಎಮರ್ಜೆನ್ಸಿ ಎಂದು ಹೇಳಿ ಎಲ್ಲಾ ಕೆಲಸಗಳನ್ನೂ ಬದಿಗಿಟ್ಟು ಎಲ್ಲಾ ತಾಲ್ಲೂಕು ಬೋರ್ಡುಗಳಿಗೂ ಬರಗಾಲದ ಕೆಲಸಗಳನ್ನು ಕೈಗೊಳ್ಳಬೇಕು ಎಂದು ಆರ್ಡರ್ ಕೊಡಬೇಕು. ಅದೇ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲಿಯೂ ಡೆಪ್ಯುಟಿಕಮೀಷನರ ರ್ಯಾಂಕಿನ ಸ್ಪೆಷಲ್ ಆಫೀಸರನ್ನು ಈ ಅಭಾವ ಪರಿಸ್ಥಿತಿಯ ಕೆಲಸವನ್ನು ಮಾಡು ವುದಕ್ಕೆ ನೇಮಕ ಮಾಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri N. B. SIRDESAI (Khanapur).—Mr. Speaker, Sir, I rise to offer certain remarks on the Motion moved by the hon. Chief Minister regarding scarcity conditions prevailing in the State. Due to failure of rains in many parts of the State, they are subjected to severe scarcity. It is shocking and painful to know from the statement of the Chief Minister that over 100 out of 174 talukas are experiencing scarcity conditions. It is mentioned in the statement that a Central Study Team visited this State and during that time a comprehensive programme for scarcity relief works was formulated costing to the tune of Rs. 8.3 crores and was presented to the Team. But, Sir, I submit here that neither the Central Team nor any Team in the State has properly assessed the situation and the requirement of funds. If the situation and requirement of funds had been properly assessed and then the programme had been formulated, it would have been better and the relief would have gone to those people.

Now Sir, it is again stated that the Central Government have not conceded the demands for funds for the irrigation works and the energising of wells. The Central Government must assist the State Government and it is quite essential to do so. But, I submit, the State Government must find a way out till the Central assistance is made available. This is the most appropriate time to pay much more attention to irrigation facilities being provided if the State wants to combat the scarcity condition. More and more irrigation facilities must be extended so that more food crops could be grown. Sir, I would like to submit here that to extend more irrigation facilities the rules introduced by the Mysore State Electricity Board must be scrapped. Now Rs. 1,000 or 50 per cent of the cost of the work of electrification work is demanded by the M.S.E.B.........

Sri RAMAKRISHNA HEGDE (Minister for Finance).—It is not correct. I have repeatedly made it clear that this scheme has been given up. We have given instructions to the Electricity Board and they have also issued a statement in the press that this scheme has been given up.

Sri N. B. SIRDESAI.—Thank you Sir. Then Sir, in Khanapur taluka there are 265 second class tanks and 6 smaller irrigation projects. Almost 95 per cent of the tanks are dried up due to failure of rains and there is no water in them. Wells are also dried up for want of rain. Deepening of such wells is quite essential in Khanapur taluka but sufficient funds are not provided by the Government. Desilting of these tanks is also quite essential but Government is not making any provision of funds for desilting of these tanks. At least during this scarcity condition Government must make funds available for desilting of tanks. It is stated in the statement that for distress relief works one crore six lakhs rupees has been given to four divisions under scarcity relief. But only Rs. 17,31,000 has been provided to Belgaum and it is a very meagre amount when taken into consideration the vast area and population of Belgaum Division. Since last year in Khanapur, rains have failed but our taluka has not been declared as scarcity area. Government has stated that there is too much delay in the matter of

sanctioning estimates and drawal of funds for disbursal in such areas and so much of the relief work is slowed down. My submission is, that the hon'ble Chief Minister should be bold enough to take severe action against the concerned officers who indulge in red-tapism; otherwise, the schemes will remain on paper and nothing would be brought under execution; that is my humble submission.

Further, it is said that 25 per cent of the irrigation works is to be treated as subsidy and 75 per cent as loan. It will be a heavy burden on the cultivator. I humbly suggest that Government should increase the subsidy amount and decrease the loan amount.

It is said in the statement that the powers of granting remission or suspension of land revenue have been delegated to the Deputy Commissioners, and in 7,000 villages remission of land revenue has been granted. But I would like to submit here that though there is scarcity condition in my taluka and though such remission was warranted because of wild elephants having damaged crops and though the Tahsildar had also recommended for such remission in land revenue and though the previous Revenue Minister had promised to give remission on the floor of this House, till this date no remission is given. So, it looks as though all the schemes and statements and promises remain on paper only. It is very miserable and deplorable.

Then, Sir, there is feasibility of lift irrigation in my taluka but Government has not prepared a plan for lift irrigation for my taluka. Though there are water resources, they are not utilised and the Government is to be blamed for that. Sir, it is most miserable to note that in the maps showing the affected areas presented to the Study Team, Khanapur taluka has not been included in the map. Though 50 per cent of the crop is being damaged by wild elephants and more than 30 per cent of the yield is recovered in the shape of levy by Government from the agriculturists, Government is not treating our taluka as scarcity area and people are subjected to injustice and put to trouble. In spite of my repeated requests, Milo is not supplied to the poor cultivators. They are toiling under the Sun and whatever crop they grow is being taken away in the form of levy. These people do not have even a good loin cloth to wear. This is the miserable condition of the people of my taluka. In spite of this, the Government has filed cases against the agriculturists in Belgaum and Khanapur talukas for not giving levy. I submit, at least in such scarcity affected areas all such cases should be withdrawn and they should be given proper relief. Otherwise people will think that statements and promises are made only on the floor of the House and nothing would be implemented in practice. Even when Government sanctions funds for these affected areas, it is not properly utilised by the officers concerned and so no relief would reach the people in need. So, I submit that the Hon'ble Minister should take severe action against such officers who indulge in red-tapism and neglect their work and they must see that sanctioned schemes are properly implemented. With these words I thank you and conclude.

6-30 P. M.

ಶ್ರೀ ಜೆ. ಎಂ. ಹಾಲಸ್ವಾಮಿ (ಜಗಳೂರು).—ಮಾನ್ಯ ಸಭಾಪತಿಗಳೇ, ಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ಒಂದು ಕ್ಲಿಷ್ಟಕರವಾದ ಘೋರ ಸಮಸ್ಯೆಯನ್ನು ಎದುರಿಸಲು ಸರ್ಕಾರ ಏನೇನು ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಕೈಗೊಂಡಿರುವುದಕ್ಕಾಗಿಯೂ ಮತ್ತು ತತ್ಸಂಬಂಧದಲ್ಲಿ ಒಂದು ದೀರ್ಘವಾದ ಹೇಳಿಕೆಯನ್ನೂ ಸಹಾ ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಇಟ್ಟಿರುವುದಕ್ಕಾಗಿಯೂ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಅರ್ಪಿಸಬೇಕಾಗಿದೆ.

ರಾಜ್ಯದಲ್ಲಿ ತ್ವರಿತವಾಗಿ ಅಲ್ಲಲ್ಲೇ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದವರನ್ನು 8 ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂಬುದಾಗಿ ಕೇಳಿದ್ದಾರೆ. ಆದರೆ ಅದು ಸಾಲದು. ಇನ್ನೂ ಹೆಚ್ಚಿಗೆ ಹಣ ಕೇಳಬೇಕಾಗಿತ್ತು. ಹಾಲಿ ಕೇಳಿರತಕ್ಕ ಮೊಬಲಗು ಏತಕ್ಕೂ ಸಾಲದು ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ಹೀಗೆ ಹಣವನ್ನು ಕೇಳತಕ್ಕ ಸಂದರ್ಭದಲ್ಲಿ ನಾವು ಯಾವತ್ತೂ ಸ್ವಲ್ಪ ಜಾಸ್ತಿಯಾಗೇ ಕೇಳಬೇಕು. ನಮಗೆ ನ್ಯಾಯವಾಗಿ 10-12 ಕೋಟಿ ರೂಪಾಯಿಗಳ ಅಗತ್ಯವಿತ್ತು, ಎಂದಾಗ ನಾವು 20-25 ಕೋಟಿ ರೂಪಾಯಿಗಳನ್ನು ಕೇಳಿದರೆ ಆಗ ನಮಗೆ 10-12 ಕೋಟಿ ರೂಪಾಯಿಗಳು ಆದರೂ ಸಿಕ್ಕುತ್ತೆ. ಆದ್ದರಿಂದ ನಮ್ಮ ಮುಖ್ಯ ಮಂತ್ರಿಗಳು ಈ ಸಂದರ್ಭದಲ್ಲಿ ಈ ಒಂದು ತಪ್ಪನ್ನು ಮಾಡಿದ್ದಾರೆ. ಸಾಮಾನ್ಯವಾಗಿ ನಮ್ಮ ಮನೆಗಳಲ್ಲಿ ಈಗ ಹುಡುಗರು ಅವರಿಗೆ 4 ಆಣೆ ದುಡ್ಡು ಬೇಕಾಗಿದ್ದರೆ ಅವರು ಒಂದು ರೂಪಾಯನ್ನೇ ಕೇಳುತ್ತಾರೆ. ಅದರಂತೆ ನಮ್ಮ ಮುಖ್ಯ ಮಂತ್ರಿಗಳೂ ಕೂಡ ಈ ರಾಜಿಕ್ಕನ್ನು ಅನುಸರಿಸಿ 10 ಕೋಟಿ ಬೇಕಾಗಿದ್ದಾಗ ಅವರು 20 ಕೋಟಿಯನ್ನೇ ಕೇಳಬೇಕು. ಅನಂತರ ಈ ವಿಚಾರದಲ್ಲಿ ನಮಗೆ ಇಷ್ಟು ಹಣ ಬೇಕು ಎಂದು ನಾವು ಪತ್ರವ್ಯವಹಾರಮಾಡುತ್ತಾ ಕುಳಿತರೆ ಕೆಲಸಗಳಾಗುವುದಿಲ್ಲ, ಹಣವೂ ಬರುವುದಿಲ್ಲ. ಆದುದರಿಂದ ಇಂಥ ಕೆಲಸಗಳನ್ನು ನಮ್ಮ ಮುಖ್ಯ ಮಂತ್ರಿಗಳು ಖುದ್ದಾಗಿ ದೆಹಲಿಗೆ ಹೋಗಿ ಮಾಡಿಕೊಂಡು ಬರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮಗೆ ಮೊಟ್ಟಮೊದಲನೆಯ ಘೋರ ಸಮಸ್ಯೆ ಎಂದರೆ ಆಹಾರವಿಲ್ಲದೆ ಇರುವುದಲ್ಲ; ಅದಕ್ಕಿಂತಲೂ ಮೊದಲು ನಾವು ಎದುರಿಸಬೇಕಾದ್ದು ಕುಡಿಯುವ ನೀರಿನ ಸಮಸ್ಯೆ. ಇದಕ್ಕಾಗಿ ಸರ್ಕಾರ ಒಂದು ದಿಟ್ಟತನದ ಕಾರ್ಯಕ್ರಮ ಕೈಗೊಳ್ಳಬೇಕು. ಅನೇಕ ಹಳ್ಳಿಗಳಲ್ಲಿ ಈಗಾಗಲೇ ಇರತಕ್ಕ ಬಾವಿಗಳು ಬಹಳ ಆಳವಾಗಿರುವುದರಿಂದ ಅವುಗಳನ್ನು ಮತ್ತಷ್ಟು ಜಾಸ್ತಿ ಆಳಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಹೊಸದಾಗಿ ಬಾವಿಗಳನ್ನು ತೆಗೆಯಲೇಬೇಕು. ಇಲ್ಲವೇ ಇಂಥ ಕಡೆಗಳಲ್ಲೆಲ್ಲಾ ವೆಲ್‌ಬೋರಿಂಗ್ ಮಿಷನ್‌ಗಳನ್ನು ಹಾಕಿ ಬಾವಿಗಳನ್ನು ಆಳಪಡಿಸಬೇಕು. ಒಂದು ಅಡಿ ಆಳವನ್ನು ಇಳಿಸುವುದಕ್ಕೆ ಕೈಯಿಂದ ಹಾರೆ ಹಾಕಿ ಆಳಪಡಿಸಲು 4-5 ರೂಪಾಯಿಗಳಾಗಬಹುದು. ಪಿ.ಡಬ್ಲ್ಯೂ.ಡಿ. ಯವರನ್ನು ಒಂದು ಎಸ್ಟಿಮೇಟ್ ಮಾಡಿಕೊಡಿ ಎಂದರೆ ಅವರು ಅದು ನಮಗೆ ಸಂಬಂಧವಿಲ್ಲ, ನಮ್ಮ ಕೋಡಿನಲ್ಲಿ ಅದಿಲ್ಲ ಎನ್ನುತ್ತಾರೆ. ಇದನ್ನೆಲ್ಲಾ ನೋಡಿದರೆ ನಾವಿನ್ನೂ ಒಬಿರಾಯನ ಕಾಲದಲ್ಲೇ ಇದ್ದೇವೆಂದು ಹೇಳಬಹುದು. ಸರ್ಕಾರದವರು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡತಕ್ಕ ಬಗ್ಗೆ ಹೆಚ್ಚಿನ ಆದ್ಯತೆಯನ್ನು ನೀಡಲೇಬೇಕು; ಹಾಗೂ ಈ ಬಗ್ಗೆ ತಕ್ಷಣವೇ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ನಾವೀಗ ಮೂರು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಲಿಟ್ಟಿದ್ದೇವೆ. ರಾಜ್ಯದಲ್ಲಿರತಕ್ಕ 3-4 ಸಾವಿರ ಗ್ರಾಮಗಳಲ್ಲಿನ್ನೂ ಕುಡಿಯುವ ನೀರಿನ ಬಾವಿಗಳಿಲ್ಲ ಎಂದರೆ ಇದು ಬಹಳ ಶೋಚನೀಯ. ಇದೇ ಸಂಬಂಧದಲ್ಲಿ ಗ್ರಾಮಪಂಚಾಯಿತಿಗಳವರು ಸೇಕಡ 10 ರಷ್ಟು ಖರ್ಚನ್ನು ಕಾಂಟ್ರಿಬ್ಯೂಷನ್ ರೂಪದಲ್ಲಿ ಕೊಡಬೇಕೆಂಬ ನಿರ್ಬಂಧವಿದೆ. ಆದರೆ ಅವರಿಗೆ ಅದನ್ನು ಕೊಡತಕ್ಕ ಚೈತನ್ಯವಿಲ್ಲ. ಸರ್ಕಾರದವರು ಈ ಕಾಂಟ್ರಿಬ್ಯೂಷನನ್ನು ಪೂರ್ಣವಾಗಿ ವಜಾಮಾಡಿ ಈ ವರ್ಷ ಮುಗಿಯುವುದರೊಳಗಾಗಿ ರಾಜ್ಯದಲ್ಲಿರತಕ್ಕ ಎಲ್ಲಾ ಹಳ್ಳಿಗಳಲ್ಲೂ ಬಾವಿಗಳನ್ನು ತೋಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈ ದಿವಸ ನಮ್ಮ ರಾಜ್ಯದಲ್ಲಿ ಸುಮಾರು 3 ಸಾವಿರ ಗ್ರಾಮಗಳಲ್ಲಿ ಬಾವಿಗಳಿಲ್ಲ. ಸರ್ಕಾರದವರು ಮನಸ್ಸುಮಾಡಿದರೆ ಇದಕ್ಕೆಲ್ಲಾ ಸುಮಾರು 15 ಲಕ್ಷ ಆಗಬಹುದು, ಅಷ್ಟು ಹಣವನ್ನು ಖರ್ಚುಮಾಡಿದರೂ ಚಿಂತೆಯಿಲ್ಲ ಇನ್ನು 2-3 ವರ್ಷಗಳೊಳಗಾಗಿ ಈ ಕಾರ್ಯವನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿವಸ ಬಾವಿಗಳನ್ನು ತೋಡತಕ್ಕ ಆಧುನಿಕ ಯಂತ್ರಗಳು ಬೇರೆ ಬಂದಿವೆ ಅದರಿಂದ ಒಂದು ದಿನಕ್ಕೆ ಒಂದು ಬಾವಿಯನ್ನು ತೆಗೆಸಬಹುದು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಆ ಪೋಲಿಷ್ ರಿಗ್ಸ್‌ಗಳನ್ನು ಇಂಪೋರ್ಟ್ ಮಾಡಿಕೊಂಡು ಸರ್ಕಾರದವರು

ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೆರಡು ಟ್ಯೂಬ್ ವೆಲ್‌ಗಳನ್ನು ಮಾಡಿಸಬೇಕೆಂದು ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ. ಅಂತೂ ಒಟ್ಟಿನಲ್ಲಿ ಪರಿಹಾರ ಕಾರ್ಯಗಳನ್ನು ನಡೆಸತಕ್ಕ ಸಂದರ್ಭದಲ್ಲಿ ನೀರಾವರಿ ಬಾವಿಗಳನ್ನು ತೋಡತಕ್ಕ ಕಾರ್ಯಕ್ಕೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಬಾವಿಗಳನ್ನು ತೆಗೆಸತಕ್ಕ ವಿಷಯದಲ್ಲಿ ಮತ್ತೊಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ—ಟ್ಯೂಬ್ ವೆಲ್‌ಗಳನ್ನು ಮಾಡಿಸತಕ್ಕ ಬಗ್ಗೆ ಆರೂವರೆ ಏಳು ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಅಷ್ಟೇ ಅಲ್ಲದೆ ಆ ಬಾವಿಗೆ ಎಲೆಕ್ಟ್ರಿಕ್ ಪಂಪ್‌ಸೆಟ್ಟನ್ನು ಹಾಕ ಬೇಕಾಗಿದ್ದರೆ ಒಟ್ಟು 6-7 ಸಾವಿರ ಖರ್ಚು ಬರುತ್ತೆ. ಇಷ್ಟಕ್ಕೆಲ್ಲಾ ರೈತರಲ್ಲಿ ದುಡ್ಡಿಲ್ಲ. ಕೇಂದ್ರ ಅಭಿವೃದ್ಧಿ ಬ್ಯಾಂಕಿನವರನ್ನು ಸಾಲ ಕೇಳಿದರೆ 4 ಸಾವಿರದ ಮೇಲೆ ಕೊಡುವುದಕ್ಕೆ ಅವಕಾಶವಿಲ್ಲ ಎನ್ನುತ್ತಿದ್ದಾರೆ. ಈ ಮೆಷಿನ್‌ಗಳನ್ನು ತರಿಸತಕ್ಕ ಬಗ್ಗೆ 4 ಅಥವಾ ನಾಲ್ಕೂವರೆ ಸಾವಿರ ರೂಪಾ ಯಿಗಳನ್ನು ಕೇಳಿದರೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಜಿಯಲಾಜಿಕಲ್ ಇಲಾಖೆಯವರು ಕೆಲವು ಕಡೆಗಳಲ್ಲಿ ಡೀಪ್ ಬೋರ್ ವೆಲ್‌ಗಳನ್ನು ಮಾಡಲು ಪೈಪು ಗಳಿಗೆ 4-5 ಸಾವಿರ ರೂಪಾಯಿಗಳು ಬೇಕಾಗುತ್ತದೆ; ಎಂದು ಹೇಳುತ್ತಿದ್ದಾರೆ. ಆದರೆ ಅಷ್ಟು ಹಣವನ್ನು ಸಾಲದ ರೂಪದಲ್ಲಿ ಕೊಡುವುದಕ್ಕೆ ಅವಕಾಶವಿಲ್ಲದಿರುವುದರಿಂದ ಸರ್ಕಾರದವರು ಆ ಕಾನೂನನ್ನು ಸ್ವಲ್ಪ ಸಡಿಲಿಸಿ ರೈತರಿಗೆ ಈ ಬಾವಿಗಳನ್ನು ಮಾಡಿಸತಕ್ಕ ಸಂದರ್ಭದಲ್ಲಿ 4-5 ಸಾವಿರ ರೂಪಾಯಿಗಳನ್ನು ಡೀಪ್‌ವೆಲ್ ಪಂಪು ಕೊಳ್ಳಲು ಸಾಲದರೂಪದಲ್ಲಿ ಕೊಡುವುದಕ್ಕೆ ಅವ ಕಾಶ ಮಾಡಿಕೊಡಬೇಕು ಎಂದು ಒತ್ತಾಯಮಾಡಿ ಕೇಳಿಕೊಳ್ಳುತ್ತೇನೆ.

ಇನ್ನು ಕೆರೆಗಳ ವಿಷಯಕ್ಕೆ ಬಂದರೆ—ಬಜೆಟ್ ಮಂಜೂರಾತಿಯ ಪರಿಮಿತಿಯೊಳಗಿದ್ದು ಅಂದಾಜುಗಳು ಮಂಜೂರಾಗಿರತಕ್ಕ ಕೆಲಸಗಳನ್ನು ನಡೆಸತಕ್ಕದ್ದು ಸರಿಯೇನೋ ಸರಿ. ಆದರೆ ನಮ್ಮ ತಾಲ್ಲೂಕಿನಲ್ಲಿ ಬಡ್ಜೆಟ್ ಮಂಜೂರಾತಿಯಲ್ಲಿ ಸೇರದಿದ್ದ ಕೆಲವು ಕೆರೆಗಳ ಅಂದಾಜ ತಯಾರಾಗಿದ್ದು ಆ ಕಾರ್ಯಗಳನ್ನು ಕೂಡಲೆ ಕ್ಷಾಮ ಪರಿಹಾರ ಯೋಜನೆಯಲ್ಲಿ ಸೇರಿಸಿ ಕೈಗೊಳ್ಳಬೇಕೆಂದೂ ಅವುಗಳಿಗೆ ಹೇಗಾದರೂ ಮಾಡಿ ಹಣವನ್ನು ಒದಗಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ಇನ್ನು ಜನರಿಗೆ ಕೂಲಿಯನ್ನು ಒದಗಿಸತಕ್ಕ ಮಾರ್ಗದಲ್ಲಿ ರಸ್ತೆ ಕೆಲಸಗಳನ್ನು ಮಾಡುವುದ ಕ್ಕಾಗುವುದಿಲ್ಲ. ಈ ರಿಲೀಫ್‌ಕಾಮಗಾರಿಗಳನ್ನು ನಡೆಸತಕ್ಕ ಸಂದರ್ಭದಲ್ಲಿ ನೆಲ ಒಣಗಿ ಗಡುಸಾಗಿರುವುದರಿಂದ ಅದನ್ನು ಅಗೆಯುವುದಕ್ಕಾಗುವುದಿಲ್ಲ. ಆದ್ದರಿಂದ ಕೆರೆ ಅಂಗಳಗಳಲ್ಲಿ ರಿಲೀಫ್ ಕಾಮಗಾರಿಯ ತರ್ಫಿನಲ್ಲಿ ಲಿಫ್ಟ್ ಇರಿಗೇಷನ್ ಬಾವಿಗಳನ್ನು ತೋಡಿಸುವುದಕ್ಕೆ ಬಹಳ ಅವಕಾಶವಿದೆ. ಇಂಥ ಒಂದು ಅವಕಾಶ ನಮ್ಮ ತಾಲ್ಲೂಕಿನಲ್ಲಿದೆ. ಇದಕ್ಕೆ ಸರ್ಕಾರದವರು ಟೆಕ್ನಿಕಲ್ ಮಂಜೂರಾತಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 7 ತಾಲ್ಲೂಕುಗಳಲ್ಲಿ ಕೇಂದ್ರ ಸರ್ಕಾರದವರ ನೆರವಿನಲ್ಲಿ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಒಂದು ಯೋಜನೆಯಲ್ಲಿ ನಮ್ಮ ತಾಲ್ಲೂಕ್ ಕೂಡ ಅದರಲ್ಲಿ ಸೇರಿದೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿ ಚಿಕ್ಕಮಲ್ಲನ ಹೊಳೆ ಮತ್ತು ಬಸವನ ಕೋಟೆ ಎಂಬ ಎರಡು ಗ್ರಾಮಗಳಲ್ಲಿ ಈ ಲಿಫ್ಟ್ ಇರಿಗೇಷನ್ ಬಾವಿಗಳನ್ನು ಮಾಡುವುದಕ್ಕೆ ಒಳ್ಳೇ ಅವಕಾಶವಿದೆ. ಅಲ್ಲಿ ಅವುಗಳನ್ನು ಮಾಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೀಗೆ ಅಭಾವಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರದವರು ಟಾಪ್ ಪ್ರಯಾರಿಟಿಯನ್ನು ಕೊಟ್ಟು ಅಲ್ಲಿ ಕೆಲಸಗಳನ್ನು ತೀವ್ರಗತಿಯಿಂದ ನಡೆಸಬೇಕು, ಮತ್ತು ಆ ಪ್ರದೇಶಗಳನ್ನು ಫ್ಯಾಮಿನ್ ಆಕ್ಟ್ ಪ್ರಕಾರ ಕ್ಷಾಮಪೀಡಿತ ಪ್ರದೇಶಗಳೆಂದು ಕೂಡಲೆ ಸಾರ ಬೇಕು. ಈ ಕಾರ್ಯಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೂ, ಸಬ್‌ಡಿವಿಜನ್ ಅಧಿಕಾರಿ ಗಳಿಗೂ ಸರ್ಕಾರ ಕೂಡಲೆ ಆಜ್ಞೆಮಾಡಬೇಕು ಅಭಾವಪೀಡಿತ ಪ್ರದೇಶಗಳಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೆಲಸವನ್ನು ಕೂಡಲೆ ಕೈಕೊಳ್ಳಬೇಕು. ಕ್ಷಾಮಪರಿಸ್ಥಿತಿ ತೀವ್ರವಾಗಿರುವ ಕಡೆಗಳಲ್ಲಿ ಗಂಜೀ ಕೇಂದ್ರಗಳನ್ನು ರೆಡ್‌ಕ್ರಾಸ್ ಯೂನಿಸೆಫ್ ಇತ್ಯಾದಿ ಸಂಸ್ಥೆಗಳಿಂದ ಸಹಾಯ ಪಡೆದು ನಡೆಸಬೇಕು. ಕೂಲಿದರಗಳನ್ನು ಹೆಚ್ಚಿಸಬೇಕು. ಎಲ್ಲೆಲ್ಲಿ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುವುದಿಲ್ಲವೋ ಅಂತಹ ಕಡೆಗಳಲ್ಲಿ ಗ್ರಾಮಪಂಚಾಯಿತಿಗಳ ಮುಖಾಂತರ ಕಾಳನ್ನು ಹಂಚಬೇಕೆಂದು ಸರ್ಕಾರದವರು ನಿರ್ಧರಿಸಿದ್ದಾರೆ, ಇದು ಒಳ್ಳೆಯದೇ. ಆದರೂ ಕೂಡ ಒಂದು ಪಂಚಾಯಿತಿಗೆ 4-5 ಹಳ್ಳಿಗಳು ಸೇರಿರುತ್ತವೆ, ಸೊಸೈಟಿಗಳು ಗ್ರೂಪ್ ಪಂಚಾಯಿತಿ ಹೆಡ್‌ಕ್ವಾರ್ಟರ್‌ನಲ್ಲಿ ಮಾತ್ರ ಇರುತ್ತದೆ, ಅಂತಹ ಸಂದರ್ಭದಲ್ಲಿ ಹೆಡ್‌ಕ್ವಾರ್ಟರ್‌ನಲ್ಲಿರತಕ್ಕ ಹಳ್ಳಿಯವರಿಗೆ ಕಾಳು ಸಿಕ್ಕುತ್ತದೆಯೇ ಹೊರತು ಅಕ್ಕಪಕ್ಕದ ಹಳ್ಳಿಗಳವರಿಗೆ ಸಿಕ್ಕುವುದಿಲ್ಲ. ಆದ್ದರಿಂದ ನೋಲಾಸ್ ನೋಪ್ರಾಫಿಟ್ ಮೇಲೆ ಮಾರಾಟ ಮಾಡುತ್ತೇವೆ ಅಂತ ಹೇಳಿ ಯಾರಾದರೂ

(ಶ್ರೀ ಜೆ. ಆರ್. ಹಾಲಸ್ವಾಮಿ)

ಮುಂದೆ ಬಂದರೆ ಅಂತಹವರಿಗೆ ಇದನ್ನು ವಹಿಸಿ ಪ್ರತಿಯೊಂದು ಹಳ್ಳಿಗೂ ಕಾಳನ್ನು ಹಂಚುವ ವ್ಯವಸ್ಥೆಯನ್ನು ಮಾಡಬೇಕು, ಇದಕ್ಕೆ ಆದ್ಯ ಗಮನವನ್ನು ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ; ಮತ್ತು ತಾಲ್ಲೂಕು ಬೋರ್ಡುಗಳಿಗೆ ಈ ರಿಲೀಫ್ ವರ್ಕನ್ನು ವಹಿಸಿರುವುದನ್ನು ಬಹಳ ಜನರು ವಿರೋಧ ಮಾಡಿದ್ದಾರೆ. ವಿರೋಧ ಪಕ್ಷದವರೂ ಕೂಡ ವಿರೋಧಿಸಿದ್ದಾರೆ. ನಾನು ತಾಲ್ಲೂಕು ಬೋರ್ಡಿನ ಅಧ್ಯಕ್ಷನಾಗಿದ್ದೇನೆ. ಈ ಕೆಲಸಗಳನ್ನು ತೆಗೆದುಕೊಳ್ಳುವಾಗ ರಿಲೀಫ್ ವರ್ಕ್ಸ್ ಕಮಿಟಿಗಳನ್ನು ಮಾಡಿದ್ದಾರೆ, ಅದರಲ್ಲಿ ಒಬ್ಬ ಶಾಸಕರೂ ಕೂಡ ಇರುತ್ತಾರೆ. ಆದ್ದರಿಂದ ಅಂತಹ ತೊಂದರೆಗಳೇನೂ ಆಗುವುದಿಲ್ಲ, ಸರ್ಕಾರದವರು ಮಾಡಿರುವುದು ಸರಿಯಾಗಿದೆ. ಸರ್ಕಾರದವರ ಉದ್ದೇಶ ಇಷ್ಟೆ, ಅಲ್ಲಿ ಸೂಪರ್‌ವೈಸರಿ ಸ್ಟ್ಯಾಫ್ ಇರುತ್ತದೆ, ಎಕ್ಸ್‌ಟನ್‌ಷನ್ ಸ್ಟ್ಯಾಫ್ ಇರುತ್ತದೆ, ಗ್ರಾಮ ಸೇವಕರು ಇರುತ್ತಾರೆ, ಅವರ ಸಹಾಯದಿಂದ ಇದನ್ನು ಇಂಪ್ಲಿಮೆಂಟ್ ಮಾಡಬಹುದು ಎಂಬ ಒಂದೇ ಒಂದು ಉದ್ದೇಶದಿಂದ ಮಾಡಿದ್ದಾರೆಯೇ ಹೊರತು ಬೇರೆ ಯಾವ ಉದ್ದೇಶದಿಂದ ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಕಂದಾಯ ವಸೂಲು ಮಾಡುತ್ತಾ ಇರುವುದು ಮುಂದುವರಿಸುವುದನ್ನು ನಮ್ಮ ತಾಲ್ಲೂಕಿನಲ್ಲಿ 65 ಹಳ್ಳಿಗಳಲ್ಲಿ ಮಾತ್ರ ಮಾಡಿದ್ದಾರೆ. ಈ ತಾಲ್ಲೂಕಿನ ಪ್ರತಿಯೊಂದು ಹಳ್ಳಿಗೂ ಕೂಡ ಕಂದಾಯ ವಸೂಲು ಮಾಡದಂತೆ ಮುಂದುವರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಸಭಾಪತಿಗಳವರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† **Sri D. B. KALMANKAR** (Aland).—Mr. Speaker, Sir, the statement made by the Chief Minister no doubt gives so many facts and figures and it also shows how the works are in progress. But I want to say one thing on this occasion that whatever works are stated to be taken up and are in progress, are all in such constituencies from where Congress M. L. As. are elected.

Sri K. PUTTASWAMY.—Mostly in those areas scarcity conditions prevail.

Sri D. B. KALMANKAR.—The Party in power is interested in making capital out of the works so taken up. This attitude of the party in power should be given a go-by. The party in power should be very anxious to ameliorate the conditions of the people irrespective of whether it has got its representatives elected from particular areas or not and irrespective of whether that party is in power in the particular area or not. They must take all the facts into consideration and start works in other areas also where they are not in power. I am saying this because most of the Ministers including the Chief Minister had toured in our part. They had gone to the extent of saying to the people: "Because we are here in power we are able to do these things; your M.L.A. is simply crying, he can simply speak and cannot do anything for you." If this is the attitude of the party in power we have got very strong doubt about these works. For example, in my taluka I have been saying time and again that there are some lift irrigation works which are very useful for improvement of agriculture. I have been saying that the work of the Salegaon tank in my taluka requires to be taken up. It has been sanctioned, but still they are reluctant to take it up because they think that if something is done in this area the credit may go to the local M.L.A. concerned. This is their attitude and that is why we have got misgivings about the *bona fides* of this Government, whether they are going to utilise these works

for their party ends and whether they are going to help only those constituencies where they have got interest. This attitude of the Government is not helpful for the progress of our State and for the amelioration of the condition of the common man.

Sri K. PUTTASWAMY.—I would request the hon. member to give concrete instances, instead of making a general statement. Scarcity is scarcity. Wherever people are in distress, it is our bounden duty to create employment opportunities by taking up such works which would provide labour and rush relief to them.

Sri D. B. KALMANKAR.—It is stated in the statement made by the Chief Minister that "my district of Gulbarga is also one of the districts which is affected by drought conditions." I know that in Aland taluka because there are no works in agricultural lands so many people are coming forward seeking employment. They want grains at cheap rates. They want that some works must be taken up in this area so as to give them employment. I have written to the Government also in this connection. But they say that there is no work in Aland taluka. Of course, some small bunding work is going on, but that is not enough. It is nothing compared to the size of the works taken up in other places.

Mr. CHAIRMAN.—The member may suggest some works.

Sri D. B. KALMANKAR.—I have suggested some lift irrigation works. I have suggested the taking up of the Salegaon tank work, but they are reluctant to take up that work. My submission is that this attitude of the Government must be given up and they must take all members of this House into confidence and they must distribute the amount equally in all the taluks of the State, affected by drought conditions.

Sri K. PUTTASWAMY.—Trust begets trust. You trust us.

Sri D. B. KALMANKAR.—I am saying this so that you may hereafter at least give up this attitude. This attitude is manifested in all the developmental works so far taken up.

Secondly, I oppose these works being taken up by the Taluk Board because in some of the Taluks, the M.L.As. are from the Opposition and the Taluk Board is in the hands of the Congress. Consequently, there is rift in the Taluk Board. There they do not want to co-operate for the best interest of the common man.

Sri K. PUTTASWAMY.—The same thing must apply to Government also.

Sri D. B. KALMANKAR.—In order that the crores of rupees that you spend may reach the common man for whom it is meant. I suggest that you set up Taluk Famine Committees irrespective of party affiliations and take in that Committee—people of integrity and sincerity. Let this Committee carry out this work. With the assistance of the Tahsildar let this Committee carry out all the works. I am not concerned with who is the Taluk Board President, but I am particular that the

(SRI D. B. KALMANKAR)

members of this Committee who should be people of integrity and sincerity. Otherwise there is every possibility that more than 50 per cent of the funds allotted, may be misused. For instance, recently one work was taken up in one village in my taluk. There, a particular contractor who has taken up the work came to me and said: "There you have friends. Please give me a chit saying that this man should not be obstructed in the work or trouble created." I thought that he was interested in the work and I gave him a chit and said, "You can go and approach him and he will help you to get the work". Later on, I came to know from that friend that this man has offered Rs. 200 and told him, "You please take these Rs 200 and keep quiet". As my predecessor said much of the work in Rural Communications is of this type. They go on digging put, mud from the adjoining field and no real work is done. The objective of the works undertaken under the Rural Communication Schemes must be of a durable character. But what happens actually is that they do some work and much of the money that is spent goes into private pockets. That being the condition taking the gravity of the situation into consideration, such works should be entrusted to people who are of known integrity. I do not mind whether he belongs to this party or that party. Let us do some justice to the people who are affected. If care is not taken to see that the works are properly executed, the money that is spent may be misspent and the people may not get the benefit. What most of the officers who are in charge of these works do is that they pay Rs. 1.50 or something like that and they take back a rupee from each labourer. But they make them sign in token of having received the whole amount. Actually, they do not pay whatever has to be paid as per the rules. If such types of loopholes that are there are to be rectified, I urge upon the Government that responsible people must be associated with such works. If complaints are made against the officers, they must be immediately attended to and some exemplary punishment to some officers at least must be given so that the work may improve.

Sri K. PUTTASWAMY.—Is it the view of the hon. Member that the members of the Taluk Boards are not responsible ?

Sri D. B. KALMANKAR.—I am not saying about the members o the Taluk Boards. What I am saying is that even in the case of Taluk Boards there are hundreds of complaints. Reports are called for, but no enquiry is made. A report was made by a B.D.O. but that was not looked into. Fifty per cent of the work is not done and overpayments are made. Regarding Rural Housing Cell, the Engineer has made a report that the money has gone into the hands of the common man. There is no proper identification but the Government is not prepared to go through that report and it is not prepared to take steps.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಐದಾರು ವರ್ಷವಾಗಿದೆ, ಮಂತ್ರಿಯಾಗಿ ಇಲ್ಲಿ ಬಂದು ಕುಳಿತುಕೊಂಡಿದ್ದಾರೆ, ತಾಲ್ಲೂಕು ಬೋರ್ಡು ಏನು ಮಾಡುತ್ತಿದೆ, ಅಲ್ಲೇನು ನಡೆಯುತ್ತಿದೆ ಎಂಬುದು ಇನ್ನೂ ಗೊತ್ತಾಗಿಲ್ಲ.

Sri D. B. KALMANKAR.—If we say something about that, you are prone to say that it is only a partial statement. If you are sincere about that, you must look at the problem cutting across political and other considerations. The number of relief works in progress in Bangalore Division is 1,076; those in progress in Mysore Division is 760; those in Belgaum Division 358 and those in Gulbarga only 140. In view of the scarcity that is prevalent there, I submit that the Gulbarga Division is neglected. The other day I spoke to the Minister of State for Food and told him that we are given only 500 grams of jowar per individual. We received 220 quintals of jowar last month. Before that we did not receive any jowar at all. He said that it was a difficult matter. The Governnent is taking jowar from our part and they say that jowar will be distributed among the vulnerable sections of the society. But actually they are not getting even 500 grams per individual. That is the type of distribution. What about the vulnerable sections of the villages, especially the Harijans and the huge army of unemployed people? They are actually getting no grains at all. Out of Rs. 10 crores of Central Assistance asked for, you have not been able to get more than Rs. 2 crores whereas the magnitude of scarcity in our State is of such dimensions that we require at least 50 to 60 crores of rupees. My submission therefore is that the Government has utterly failed to know the magnitude of the problem. The Government has made a very conservative estimate of the sufferings of the people hit by scarcity in our State, and it has failed to get what is due to our State. Take for example the Andhra Pradesh. I read in today's papers that in Andhra Pradesh they have opened fair price shops in villages. I submit that if the Government want to do justice to the vulnerable sections of the society, they must start such shops in every village in order that foodgrains may reach the man who is in distress. Government must form committees and ask them to give foodgrains to such people. Employment opportunites must also be increased. The people are in such a mood that in case the rains fail there is every possibility that there will be an upheaval in the villages. They may even loot and commit certain offences even against their wishes. I therefore submit that Government should take note of the grave situation and keeping aside political considerations, must see to it that works are executed in real spirit and people who are of known integrity must be put in charge of Taluk Relief Committees that are to be formed and they must be made to do this work.

ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ನೀರಡಿಕೆಯಾದಾಗ ಬಾವಿ ತೆಗೆಸಿ ನೀರನ್ನು ತಂದುಕೊಡುತ್ತೇವೆಂದರೆ ಅದರಿಂದ ತೃಪ್ತಿಯಾಗುವುದಿಲ್ಲ. ಹಾಗೆ ಸಮಿತಿ ಮಾಡಿ ನಿರ್ಣಯಮಾಡಿ ಆರ್ಡರನ್ನು ಕಳಿಸಿ ರೊಕ್ಕ ಕೇಂದ್ರದಿಂದ ತಂದು ಇಲ್ಲಿರುವ ಬರಗಾಲವನ್ನು ಪರಿಹಾರ ಮಾಡುವುದಕ್ಕಾಗುವುದಿಲ್ಲ. ಹೀಗೆ ನಮ್ಮಲ್ಲಿ ಈ ಪ್ರಕಾರ ವರ್ಷೇವರ್ಷೇ ಆಗುತ್ತದೆ. ಆದುದರಿಂದ 20 ವರ್ಷಗಳಿಂದ ನೋಡಿದಂತೆ ವರ್ಷೇವರ್ಷೇ ಯಾವ ಜಿಲ್ಲೆಯಲ್ಲಿ ಕ್ಷಾಮ ಬರುತ್ತಿದೆ ಅದಕ್ಕೆ ಸಹಾಯಮಾಡಲು ಒಂದು ಖಾಯಮಾದ ಯೋಜನೆ ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ. ಯಾವ ಕೆಲಸ ಯಾವಾಗ ಮಾಡಬೇಕು, ಯಾವ ಪ್ರಕಾರ ಮಾಡಬೇಕು, ಆಹಾರಧಾನ್ಯ ಅಥವಾ ದನಗಳ ಮೇವು ಸಾಕಷ್ಟು ಒದಗಿಸಲು ಏನು ಕ್ರಮ

(ಶ್ರೀ ಎಸ್. ಭೀಮಣ್ಣ)

ಕೈಕೊಳ್ಳಬೇಕು ಎಂದು ಒಂದು ಯೋಜನೆ ತಯಾರು ಮಾಡಿದರೆ ಒಳ್ಳೆಯದು. ಎರಡನೆಯದಾಗಿ ವೈಯಕ್ತಿಕವಾಗಿ ನಾವು ಸಂಕಟಪಡುತ್ತಿರುವಾಗ ಹಳ್ಳಿಗಳಲ್ಲಿ ದನಗಳ ಪರಿಸ್ಥಿತಿ ಕೆಟ್ಟುಹೋಗಿದೆ. ಒಂದು ರೂಪಾಯಿಗೆ ಒಂದು ಕಿಲೋ ಆಹಾರ ಪದಾರ್ಥ ಸಹ ಸಿಕ್ಕುತ್ತಿಲ್ಲ, ಜನರಿಗೆ ಹೊಟ್ಟೆಗೆ ಅನ್ನ, ಕುಡಿಯಲು ನೀರು ದೊರೆಯುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವು ಮನವಿಮಾಡುವುದಕ್ಕೆ ಮುಂಚೆಯೇ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿರುವುದು ಸಂತೋಷಕರ. ಅವರು ಬೆಂಗಳೂರಿನಲ್ಲಿದ್ದರೂ ಸಹ ಪ್ರತಿಯೊಂದೂ ತಾಲ್ಲೂಕಿನಿಂದಲೂ ಪರಿಸ್ಥಿತಿ ಹೇಗಿದೆ ಎಂಬುದನ್ನು ತಿಳಿದುಕೊಳ್ಳುತ್ತಿದ್ದಾರೆ.

ಸರ್ಕಾರ ಬಹಳ ಜವಾಬ್ದಾರಿಯಿಂದ ಕೆಲಸ ಮಾಡುತ್ತಿರುವುದು ಸಂತೋಷದ ಮಾತು. ಸರ್ಕಾರ ಪ್ರಕಟಣೆ ಮಾಡಿರುವ ಅಭಾವ ಪೀಡಿತ ಪ್ರದೇಶಗಳ ಭೂಪಟವನ್ನು ನೋಡಿದರೆ ಅದರಲ್ಲಿ ಗುಲ್ಬರ್ಗ, ಬಿದರೆ ಭಾಗಗಳನ್ನು ತೋರಿಸಿಲ್ಲ. ಪ್ರಾಯಶಃ ಜೂನ್ ತಿಂಗಳ 19, 20, 21 ರ ಸಮಯದಲ್ಲಿದ್ದಂಥ ಪರಿಸ್ಥಿತಿಯನ್ನು ಮಾತ್ರ ಅದರಲ್ಲಿ ಕೊಟ್ಟಿದ್ದಾರೆಂದು ಕಾಣುತ್ತದೆ. ಜೂನ್ ತಿಂಗಳಿನಲ್ಲಿ ನಮ್ಮಲ್ಲಿ ಅಲ್ಲಲ್ಲಿ ಸ್ವಲ್ಪ ಮಳೆಯಾಗಿದ್ದು, ಬಿತ್ತನೆಯಾಗಿ ಸಸಿಗಳು ಇದ್ದುದರಿಂದ ಅದನ್ನು ಅಭಾವ ಪೀಡಿತ ಪ್ರದೇಶವೆಂದು ತೋರಿಸಿಲ್ಲವೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಬಿದರೆ, ಗುಲ್ಬರ್ಗದಲ್ಲಿ ಕ್ಷಾಮ ಪರಿಸ್ಥಿತಿ ಇದೆ ಎಂದು ಒಪ್ಪಿಕೊಂಡಿದ್ದಾರೆ. ಜೂನ್ ತಿಂಗಳಿನಲ್ಲಿ ಮಳೆಯಾಗಿದ್ದು ಸಸಿ ಬಹಳ ಚೆನ್ನಾಗಿದ್ದು ಜನ ಸಂತೋಷಪಟ್ಟರು. ಆದರೆ ಜುಲೈ, ಆಗಸ್ಟ್ ತಿಂಗಳಲ್ಲಿ ಅರ್ಧಂಗುಲ, ಒಂದಂಗುಲ ಕೂಡ ಮಳೆಯಾಗದೆ ಬೆಳೆ ಎಲ್ಲ ಸುಟ್ಟು ಹೋಗಿದೆ. ಉದ್ದು, ಹೆಸರು, ಜೋಳ ಯಾವುದೂ ಬಾರದಂಥ ಸಂಕಟ ಪರಿಸ್ಥಿತಿ ಇದೆ.

7-00 P.M.

ದನಗಳಿಗೆ ಕುಡಿಯಲು ನೀರಿಲ್ಲ, ಕಳಕೆ ಕೂಡ ಇಲ್ಲ. ಇದರ ಬಗ್ಗೆಯೂ ಸರ್ಕಾರ ತುರ್ತು ಕ್ರಮ ತೆಗೆದುಕೊಳ್ಳಬೇಕು. ಕ್ಷಾಮ ಪರಿಸ್ಥಿತಿಗೆ ವಾಸ್ತವ ಕಾರಣವೇನೆಂದರೆ ಬರೀ ದೈವಿಕ ಕೋಪ, ಅಥವಾ ಸರ್ಕಾರದವರ ತಪ್ಪು ಎಂದು ಯಾರು ಆಕ್ಷೇಪ ಮಾಡಿದರೂ ತಪ್ಪಾಗುತ್ತದೆ. ಇದರಲ್ಲಿ ಎಲ್ಲರ ಜವಾಬ್ದಾರಿಯೂ ಇದೆ. ಸರ್ಕಾರದವರ ಜವಾಬ್ದಾರಿ ಇದೆ, ಸದಸ್ಯರ ಮತ್ತು ಜನತೆಯ ಜವಾಬ್ದಾರಿ ಕೂಡ ಇದೆ. ಯಾವುದೇ ಒಂದು ಯೋಜನೆಯನ್ನು ಹಾಕಿಕೊಂಡರೂ, ಯಾವುದೇ ನಿರ್ಣಯವನ್ನು ಪಾಸ್ ಮಾಡಿದರೂ ಸರ್ಕಾರಿ ಅಧಿಕಾರಿಗಳಿಗೆ ಖಾಸಗಿ ಜನರು ಸಹಾಯ ಮಾಡುವುದಿಲ್ಲವೆಂದರೆ ಯಾವ ಕೆಲಸವೂ ಆಗುವುದಿಲ್ಲ. ತಾಲ್ಲೂಕು ಬೋರ್ಡಿನಲ್ಲಿ ಅಧ್ಯಕ್ಷರಾದಿಯಾಗಿ ಎಲ್ಲರೂ ಕೆಲಸ ಮಾಡದೆ ಬರೀ ಅಧಿಕಾರಿಗಳು ಮಾಡಬೇಕು ಎಂದು ಜವಾಬ್ದಾರಿಯನ್ನು ಒಬ್ಬೊಬ್ಬರ ಮೇಲೆ ಹೊರಿಸಿ ಅವರು ಕೆಲಸ ಮಾಡಲಿಲ್ಲವೆಂದು ಆಕ್ಷೇಪ ಮಾಡುವುದಾದರೆ ತಪ್ಪಾಗುತ್ತದೆ. ಕ್ಷಾಮ ಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿ, ಆರ್ಥಿಕ ಪರಿಸ್ಥಿತಿ ಯಾವುದೇ ಇರಲಿ ಪಕ್ಷ, ಜಾತಿ, ಈ ಭಾಗ, ಆ ಭಾಗ ಎಂದು ನೋಡದೆ, ಯಾವುದೇ ಕೆಲಸವಾಗಲೇ ಇದ್ದರೂ ಅದಕ್ಕೆ ನಾವೆಲ್ಲ ಜವಾಬ್ದಾರರು ಎಂಬುದನ್ನು ತಿಳಿದುಕೊಂಡು ಕೆಲಸ ಮಾಡಿದರೆ ಮಾತ್ರ ಅದು ಸಾಧ್ಯವಾಗುತ್ತದೆ.

ನಮ್ಮ ಜಿಲ್ಲೆಯಲ್ಲಿ ಎರಡು ನದಿಗಳು ಹರಿಯುತ್ತವೆ. ಈ ಎರಡು ನದಿಗಳಿಗೂ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿ ಲಗೂ ಮುಗಿಸಿದರೆ ಅನುಕೂಲವಾಗುತ್ತದೆ. ಆ ಪ್ರಯತ್ನ ಸರ್ಕಾರ ಮಾಡಬೇಕು. 10 ವರ್ಷದಲ್ಲಿ ಆಗಬಹುದಾದ ಕೆಲಸವನ್ನು 4 ವರ್ಷದಲ್ಲಿ ಮಾಡುವ ಹಾಗೆ, ನಾಲ್ಕು ವರ್ಷದಲ್ಲಿ ಆಗುವ ಕೆಲಸವನ್ನು 2 ವರ್ಷದಲ್ಲಿ ಮುಗಿಸುವ ಪ್ರಯತ್ನ ಮಾಡಿದರೆ ನಮಗೆ ಹೆಚ್ಚು ಪ್ರಯೋಜನವಾಗುತ್ತದೆ. ಆಂಧ್ರ ಪ್ರದೇಶದಲ್ಲಿ ನಾಗಾರ್ಜುನ ಸಾಗರ ಕೆಲಸವನ್ನು ಎರಡು, ಎರಡೂವರೆ ವರ್ಷಗಳಲ್ಲಿ ಮುಗಿಸಿದರು. ದೊಡ್ಡ ದೊಡ್ಡ ಪ್ರಾಜೆಕ್ಟ್ ಕೆಲಸಗಳು ಎಷ್ಟು ಲಗುವಾಗಿ ಆಗಬೇಕೋ ಆ ಪ್ರಕಾರ ಆಗುತ್ತಿಲ್ಲ. ಸರ್ಕಾರ ಸರಿಯಾದ ಲಕ್ಷ್ಯ ಕೊಟ್ಟು ಲಗುವಾಗಿ ಮಾಡುವ ಪ್ರಯತ್ನ ಮಾಡಬೇಕು.

ಬಿದರೆ ಜಿಲ್ಲೆಯಲ್ಲಿ ಹರಿಯುವ ಕಾರಂಜ ಮತ್ತು ಮಾಂಜ್ರ ನದಿಗಳಿಗೆ ಅಡ್ಡಲಾಗಿ ದೊಡ್ಡ ಕೆರೆಗಳನ್ನು ಕಟ್ಟುವ ಕೆಲಸವನ್ನು 10 ಕೋಟಿ ರೂಪಾಯಿ ಖರ್ಚಿನಲ್ಲಿ 4ನೇ ಯೋಜನೆಯಲ್ಲಿ ತೆಗೆದುಕೊಳ್ಳುವರೆಂದು ಗೊತ್ತಾಗಿದೆ. ಇಂಥ ಕೆಲಸಗಳನ್ನು ಲಗುವಾಗಿ ಮಾಡಿದರೆ ಹೆಚ್ಚು ಪ್ರದೇಶ ನೀರಾವರಿಯಲ್ಲಿ ಬರುತ್ತದೆ. ನದಿಗಳಲ್ಲಿ ನೀರು ಕಡಮೆ ಬಿದ್ದರೆ ಕೆರೆಕಟ್ಟೆಗಳಲ್ಲಿ ನೀರು ಕಡಮೆ

ಯಾಗುವ ಸಂಭವವಿದೆ. ಅಣೆಕಟ್ಟುಗಳನ್ನು ಕಟ್ಟುವುದರಿಂದ ಇಂಥ ತೊಂದರೆ ದೂರವಾಗುವ ಸಾಧ್ಯತೆ ಇದೆ. ಲಗುವಾಗಿ ಕ್ರಮ ತೆಗೆದುಕೊಂಡು ದೊಡ್ಡ ಪ್ರಾಜೆಕ್ಟ್‌ಗಳ ಕೆಲಸ ಆಗುವುದರಿಂದ ಮುಂದೆ ಕ್ಷಾಮ ಪರಿಸ್ಥಿತಿ ಬರಲಾರದು.

ಎಲೆಕ್ಟ್ರಿಕ್ ಪಂಪ್‌ಸೆಟ್ ಕೊಡುವಾಗ ಎಲ್ಲಿ ನದಿಗಳು ಹರಿಯುತ್ತವೆ, ಎಲ್ಲಿ ನೀರಾವರಿ ಕಾಮಗಾರಿಗಳಾಗಿಲ್ಲ ಅಂಥ ಕಡೆ ಯಾವುದೇ ನಿರ್ಬಂಧವನ್ನು ಹಾಕಲಾರದೆ ಸರ್ಕಾರದ ಖರ್ಚಿನಿಂದಲೇ ನದಿಯ ಎರಡೂ ದಂಡೆಗಳಲ್ಲಿ ಸಾವಿರಾರು ಪಂಪ್‌ಸೆಟ್‌ಗಳನ್ನು ಕೊಡಬಹುದು. ಇದರಿಂದ ಆ ಭಾಗದ ಜನರ ಸಂಕಟವನ್ನು ಪರಿಹಾರ ಮಾಡಬಹುದು.

ವಿದ್ಯುಚ್ಛಕ್ತಿಯನ್ನು ಪಂಪ್‌ಸೆಟ್‌ಗಳಿಗೆ ಕೊಡುವುದರಲ್ಲಿ ಅರ್ಧ ಭಾಗ ಹಣವನ್ನು ರೈತರು ಕೊಡಬೇಕೆಂಬ ನಿರ್ಬಂಧವಿರುವುದನ್ನು ತೆಗೆದುಹಾಕಿ ಮೂರು ತಿಂಗಳ ಮೇಲಾದರೂ ಮುಖ್ಯ ಮಂತ್ರಿಗಳು ಬಿದರೆಗೆ ಬಂದಾಗ ಆ ವಿಚಾರವನ್ನು ಬಹಿರಂಗವಾಗಿ ಹೇಳಿದ್ದರೂ ಇನ್ನೂವರೆಗೆ ಯಾವುದೇ ಕೆಲಸವನ್ನೂ ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ನಾವು ಹೋಗಿ ಕೇಳಿದರೆ ನಮಗೆ ಎಷ್ಟು ಹಣವನ್ನು ಒದಗಿಸುತ್ತಾರೆ ಆ ಪ್ರಕಾರ ಕಾರ್ಯ ಮಾಡಬೇಕು, ಆದ್ದರಿಂದ ಹೆಚ್ಚು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ.

ನಮ್ಮ ಕಡೆ ವಿದ್ಯುತ್ ಸಂಪರ್ಕ ಆಗಾಗ್ಗೆ ಕಡಿದು ಹೋಗಿ ಲಕ್ಷಾಂತರ ರೂಪಾಯಿ ಹಾನಿಯಾಗಿದೆ. ಒಮ್ಮೊಮ್ಮೆ ನಾಲ್ಕು ನಾಲ್ಕು ದಿನ, ಎರಡೆರಡು ದಿನ ವಿದ್ಯುತ್ ಇಲ್ಲದೆ ಬತ್ತದ ಬೆಳೆ ಎಲ್ಲ ಹಾಳಾಗಿ ಲಕ್ಷಾವಧಿ ರೂಪಾಯಿ ಲುಕ್ಸಾನಾಗಿದೆ. ಸರ್ಕಾರ ಕ್ಷಾಮ ಪರಿಸ್ಥಿತಿಯನ್ನು ದೂರ ಮಾಡುವ ಸಲುವಾಗಿ ಲಗುವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಂಡು ವಿದ್ಯುತ್ ಒದಗಿಸಲು ಎಷ್ಟು ಹಣ ಬೇಕು, ಯಾವ ಪ್ರಕಾರ ಕೆಲಸ ಆಗಬೇಕು ಎಂದು ಮಾಡಿದರೆ ಒಳ್ಳೆಯದಾಗುತ್ತದೆ, ಇಲ್ಲವಾದರೆ ಯಾವುದೇ ಕೆಲಸ ಆಗಲು ಸಾಧ್ಯವಿಲ್ಲ.

ನಾವು ಎಷ್ಟೇ ರೊಕ್ಕ ಕೊಟ್ಟರೂ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಲಿಲ್ಲ ಎಂದರೆ ತೊಂದರೆಯಾಗುತ್ತದೆ. ಪರಿಹಾರ ಕಾರ್ಯಗಳಿಗೆ ಬೇಕಾದ ಹಣವನ್ನು ಮಂಜೂರು ಮಾಡುವುದರಲ್ಲಿ ನಿಧಾನವಾದರೆ ಬಹಳ ಕಷ್ಟವಾಗುತ್ತದೆ. ಕ್ಷಾಮ ಪರಿಹಾರ ಕಾರ್ಯಗಳಿಗೆ ಮಂಜೂರು ಮಾಡಿದ ಹಣದಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ಖರ್ಚಾಗದೆ ಇರುವುದಕ್ಕೆ ಕಾರಣವೇನು ಎಂದು ಕೇಳಿದರೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಗೊತ್ತು ಮಾಡಿರುವ ದರಗಳು ಕಡಿಮೆ ಇರುವುದರಿಂದ ಜನ ಕೆಲಸ ಮಾಡುವುದಕ್ಕೆ ತಯಾರಿಲ್ಲದ್ದರಿಂದ ಏನು ಕೆಲಸವಾಗಬೇಕೋ ಅದು ಆಗಿಲ್ಲ ಎಂದು ಹೇಳುತ್ತಾರೆ. ಸರ್ಕಾರ ಈ ಬಗ್ಗೆ ವಿಚಾರ ಮಾಡಿ ಇರುವಂಥ ತೊಂದರೆಗಳನ್ನು ದೂರಮಾಡಬೇಕು.

ಬಾವಿಗಳನ್ನು ತೆಗೆಯುವ ಸಲುವಾಗಿ ಮಹಾರಾಷ್ಟ್ರ ಸರ್ಕಾರದವರು ಇಲಾಖೆಯಿಂದ ಈ ಕೆಲಸವನ್ನು ಮಾಡಿಸುತ್ತಿದ್ದಾರೆ, ಬೇರೆ ಜನರಿಗೆ ಕೊಡುವುದಿಲ್ಲ. ಇಲಾಖೆ ಬಾವಿಗಾಗಿ ಅರ್ಜಿ ಕೊಟ್ಟರೆ ಅಧಿಕಾರಿಗಳು ಅದಕ್ಕೆ ಬೇಕಾದ ಡ್ರಿಲಿಂಗ್ ಯಂತ್ರಗಳು ಮತ್ತು ಬ್ಲಾಸ್ಟಿಂಗ್ ಯಂತ್ರಗಳನ್ನು ತಂದು ಅಲ್ಪ ಕಾಲದಲ್ಲಿ ನಾಲ್ಕಾರು ಬಾವಿ ಹೊಡೆದು ತುಂಬ ಅನುಕೂಲ ಮಾಡಿಕೊಡುತ್ತಿದ್ದಾರೆ. ಅದೇ ಪ್ರಕಾರ ನಮ್ಮಲ್ಲಿಯೂ ಬ್ಲಾಸ್ಟಿಂಗ್ ಯಂತ್ರಗಳನ್ನು ಖರೀದಿ ಮಾಡಿ ಪ್ರತಿ ಜಿಲ್ಲೆಗೂ ಒಂದೆರಡು ಯಂತ್ರಗಳನ್ನು ಕೊಟ್ಟರೆ ಬಾವಿ ಹೊಡೆಯುವ ಕೆಲಸಕ್ಕೆ ಅನುಕೂಲವಾಗುತ್ತದೆ. ಎಷ್ಟೋ ಕಡೆ ಬಾವಿ ಕೆಲಸ ಅರ್ಧ ಭಾಗ ಕಾಲು ಭಾಗವಾಗಿ ಕೈ ಬಿಟ್ಟಿದ್ದಾರೆ. ಹಣ ಸರಿಯಾಗಿ ಸಿಕ್ಕಲಾರದೆ ಮತ್ತು ಬೇರೆ ಕಾರಣಗಳಿಂದಾಗಿ ಹೀಗಾಗಿದೆ. ಸರ್ಕಾರವೇ ಬಾವಿ ಹೊಡೆದು ಕೊಡುವಂತೆ ವ್ಯವಸ್ಥೆ ಮಾಡಿದರೆ ಈ ರೀತಿ ಆಗಲಾರದು.

ಬೀದರೆ ಜಿಲ್ಲೆಯಲ್ಲಿ ಒಂದು ಡೀಸಲ್ ಮಿಷನ್ ಕೊಟ್ಟಿದ್ದಾರೆ. ಆ ಇಂಜಿನ್‌ಗೆ ಆರು ತಿಂಗಳಿನಿಂದಲೂ ಏನು ಒಂದು ಆಯಿಲ್ ಉಪಯೋಗಿಸಬೇಕೋ ಆ ಆಯಿಲ್ ಸಿಕ್ಕುತ್ತಾ ಇಲ್ಲ. ಅದು ಅಮೇರಿಕಾದಿಂದ ಬರಬೇಕು ಎಂದು ಹೇಳುತ್ತಾರೆ. ಅದು ಇಲ್ಲದೇ ಏನೂ ಕೆಲಸ ಆಗುತ್ತಾ ಇಲ್ಲ. ಇದರ ಬಗ್ಗೆ ರೆಪ್ರೆಸೆಂಟೇಷನ್ ಬೇಕಾದಷ್ಟು ಕೊಟ್ಟಿದ್ದೇವೆ. ಯಾರು ಸರಿಯಾಗಿ ಕೇಳುತ್ತಾ ಇಲ್ಲ. ಅದಕ್ಕೆ ಉಪಯೋಗಿಸುವ ಆಯಿಲ್ ಇಲ್ಲದೇ ಇದ್ದರೆ ತಿಂಗಳಾನುಗಟ್ಟಲೆಯಾದರೂ ಕೆಲಸ ಆಗುವುದಿಲ್ಲ. ಈ ಆಯಿಲ್ ತರಿಸಲು ಏನು ಒಂದು ಕ್ರಮವನ್ನು ಕೈಗೊಳ್ಳಬೇಕು ಅದನ್ನು ಸರ್ಕಾರದವರು ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ.

(ಶ್ರೀ ಎಸ್. ಭೀಮಣ್ಣ)

ಇನ್ನು ಸ್ಕೇರ್ಸಿಟಿ ಏರಿಯಾದಲ್ಲಿ ದನಗಳಿಗೆ ಹುಲ್ಲು ಸಿಕ್ಕುತ್ತಾ ಇಲ್ಲ. ಫಾರೆಸ್ಟ್‌ನಿಂದ ಹುಲ್ಲನ್ನು ತರಿಸಿಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಿಗೂ ಬರೆದಿದ್ದಾರೆ, ಟೆಲಿಗ್ರಾಂ ಕೂಡ ಕೊಟ್ಟಿದ್ದಾರೆ. ಮತ್ತು ಆ ಭಾಗದ ಜನತೆ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಇರುವುದರಿಂದ ಸರ್ಕಾರದವರು ಆಹಾರ ಧಾನ್ಯಗಳನ್ನು ತರಿಸಿ ಪ್ರತಿಯೊಂದು ಹಳ್ಳಿಗೂ ಮುಟ್ಟುವಂತೆ ಡೆಪ್ಯೂಟಿ ಕಮೀಷನರ್‌ರವರ ಮೂಲಕ ಸರಿಯಾದ ಒಂದು ಹಂಚುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಮೈಸೂರು ದೇಶದಲ್ಲಿ ಎಲ್ಲಾ ಹಳ್ಳಿಗಳಲ್ಲಿಯೂ ಕ್ಷಾಮ ಪರಿಸ್ಥಿತಿ ಇರುವುದರಿಂದ ಮಾನ್ಯ ದಿಗಂಬರರಾವ್ ಹೇಳಿದ ಹಾಗೆ ಪ್ರತಿಯೊಂದು ತಾಲ್ಲೂಕಿಗೂ ಸರಿಯಾಗಿ ಹಂಚಿದರೆ ಒಳ್ಳೆಯದು, ಎಲ್ಲರಿಗೂ ಕಷ್ಟ ಪರಿಹಾರವಾಗುತ್ತದೆ, ಎಂದು ಹೇಳುತ್ತೇನೆ. ನನಗೆ ಇಷ್ಟು ಮಾತನಾಡಲು ಅಧ್ಯಕ್ಷರು ಟೈಂ ಕೊಟ್ಟಿದ್ದಕ್ಕಾಗಿ ನಾನು ಆಭಾರಿಯಾಗಿದ್ದೇನೆ.

Mr. CHAIRMAN.—The House now stands adjourned to meet tomorrow at 8-30 A.M.

The House adjourned at Fifteen Minutes past Seven of the Clock to meet again at Thirty Minutes past Eight of the Clock on Saturday the 7th Sepetember 1968.

WD 11302—GPB—600—30-10-1968